5. SECRETARY .— Sir, I beg to lay .— The First List of unstarred Questions and Answers of Third Session and 3rd List of Second Session. *

MR. SPEAKER .— Papers are laid.

PRESENTATION OF REPORTS

SRI N. B. SIRDESAI .— Sir, on behalf of the Deputy Speaker and the Chairman of the Committee on Petitions, I present the First Report of the Committee on Petitions,

SRI G. K. SUBBAIAH ; – Sir, I present the Second Report of the Committee on Government Assurances.

MR. SPEAKER ;— Reports presented. Now, I call Sri, C. M. Arumugham to speak on the Chief Minister's Demands. Another thing is that, all the demands for Grants for the year 1980-81, will be voted at 6-00 P. M. It has been agreed by the leaders of various parties that one man will speak from one party. The discussion will conclude at 3-00 P. M. The Chief Minister will commence his reply at 4-00 P M.

ಶ್ರೀ ಎಂ. ವಿ. ರಾಜಶೇಖರನ್ .— ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಮುಗಮ್‌ರವರು ಮಾತನಾಡುವುದಕ್ಕೆ ಮೊದಲು ಮಾನ್ಯ ಮುಖ್ಯಮಂತ್ರಿಯವರು ಒಂದು ಸಮಿತಿಯನ್ನು ನೇಮಿಸಿದ್ದರು. ರೈತರ ಕಷ್ಟ ಸುಖಗಳ ವಿಚಾರದಲ್ಲಿ ಸರ್ಕಾರದವರು ನೇಮಿಸಿರತಕ್ಕಂಥ ಸಮಿತಿಯವರು ಈಗಾಗಲೇ ಸಂಬಂಧಪಟ್ಟವರಿಗೆ ರಿಪೋರ್ಟನ್ನು ಕೊಟ್ಟಿದ್ದಾರೆ. ಅದರಲ್ಲಿ ವ್ಯಾಪಕವಾದಂಥ ಸಲಹೆಗಳನ್ನು ಕೊಟ್ಟಿರುತ್ತಾರೆ ಮಾನ್ಯ ಮುಖ್ಯಮಂತ್ರಿಯವರೇ ಆ ಸಮಿತಿಯ ಅಧ್ಯಕ್ಷರಾಗಿರುವುದರಿಂದ ಅವರ ವಿಚಾರದಲ್ಲಿ ಯಾವಾಗ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಮತ್ತು ಯಾವಾಗ ಪ್ರಕಟಿಸುತ್ತಾರೆಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕೆಂದು ಹೇಳುತ್ತೇನೆ.

MR. SPEAKER .— Now, Sri Arumugham will speak.

FINANCIAL BUSINESS

Discussion and Voting of Demands for Grants for the year 1980-81 Demand Nos. 5,6,12,21,22.24,26,33,36,37,38,40.43,44,47,14,15, 16,17,18,14,41,42,59,7,8,11,46,63,25,25.

†SRI C. M. ARUMUGHAM .— Sir, I am thankful to you for having given men a chance to speak on the Chief Minister's Demands There are about 27 to 30 demands. I am afraid it may not be possible to touch all the demands. I will confine my talk on a few demands and I will not take much time of this House. I would like to start with the police demand. I am not going to speak about the admin-

---

* ANNEXURE

strative set up and all that. Sometime back there was an agitatioin all over the country by the police, starting from Haryana, Rajastan, U. P. Bihar, Tamil Nadu. Kerala *etc*. I compliment the police force in Karnataka because they have not started any agitation in our State. When there was a strike in Haryana and Tamilnadu, about 600 police constables including head constables were dismissed, subsequently, they were taken back to duty. But, in Karnataka without any agitation some 8 to 9 constables and head constables were dismissed. I would only appeal to the Chief Minister that they must be reinstated. There are all poor police officials. The dismissal might have caused hardship to their families. In fact, in Tamilnadu, there are two to three associations one for the Gazetted officers, one for the I. P. S. Officers and the other for the constabulary staff. Here, I wonder, why there is only one association and that too wherein you have put a restriction that a senior Dy. S. P. will be the president and a senior Circle Inspector should be the General Secretary. Therefore, this cannot be the Association of police constables and head constables. Therefore, I appeal to the Government that they must be permitted to form a union because it is this people who form the majority to represent the police force, but not the S. P. or Dy. S. P. or other I. P. S. Officers Their condition is regulated and there is no problem of transfer and other things. Therefore, the constabulary cadre should be permitted to form an association to represent their grievances to the Government. Whenever there is agitation in the State, the Reserve Police of Tamilnadu and BSF will be brought by spending more than 8 to 9 lakhs. I don't know why 8 to 9 constables have been dismi sed by the former I.G.P. without any cause he has taken action. A great injustice has been done. These constables are more disciplined when compared to the constables of other States and they did not agitate and they did not go on strike. Therefore, they must be reinstated and they must be permitted to form an association by themselves so that they can represent their grievances more effectively than the present association where in the Senior Dy. S. P. is the president and the Senior Dy. S. P. is the president and the Senior Circle Inspector is the General Secretary.

Coming to the General Administration, I would like to say about the composition of the Ministry. Sir, in a democractic set up the number counts. Though there are large number of population in the State consisting of various communities, the Ministry doesn't reflect its number. For instance, if you take into consideration the population of Vokkaligas, Lingayats, SCs/SCs, the representation given in the Cabinet is not adequate for these communnities. There-

fore, I appeal to the Hon. Chief Minister to give fair representation to Vokkaligas and Lingayats because they are in large numbers. Another thing is that, half of the population consists of ladies, but there is no lady Cabinet Minister in the Ministrys. from 1946 onwards uptill today all the successive Chief Ministers have given representations to the major communities according to their strength. Of course, other minority communities must also be included in the Cabinet. At present in the Cabinet there are only few Ministers belonging to major communities. Therefore, I appeal to the Chief Minister that these Majority communities must be given proper representation. In the Devaraj Urs Cabinet the representation of SCs/STs was 3 to 4. But, now there are only 2 Ministers, one of Cabinet rank and another one is, Minister of State. The Minister of State has no power except reading of news papers; files also do not go there. Therefore, I want to tell the Hon. Chief Minister that proper representation in the Ministry should be given to these people and every community must reflect in the Cabinet.

SRI AZEEZ SAIT .— Sir, I think Sri Arumugham is talking about the expansion of the Cabinet. Why not we create a new atomosphere by creating a national Government in the State level and include some senior Opposition Members in the Cabinet ?

SRI C. M ARUMUGHAM .— Sir, Sri Azeez Sait is known for jokes. I welcome it because he is not serious about it.

(Sri H. T. Krishnappa in the Chair)

Therefore, I only urge the Chief Minister that there must be proper representation for SCs/STs in the Cabinet, and they must be given developmental departments, The minorities must also be given proper representation. I know the Chief Minister has given the Portfolio of Finance and Planning to a minority community man ; it is good. He is doing very well and I must compliment him, and the Chief Minister.

Now, I want to draw the attention of the Chief Minister regarding the IAS and IPS Officers Somebody feels that I am always opposed to IAS and IPS officers it is not so. There are two hundred and more IAS Officers in the State today. Most of these IAS Officers come from outside the State, Within 3-4 years there would not be any IAS officer belonging to our State because there are hardly 2-3 IAS officers of our State. Candidates belonging to Vokkaliga Community do not appear and pass the IAS examination and I do not know for what reasons they do not appear. Out of 200 and more IAS Officers, there are only three

persons belonging to Vokkaliga community. Majority of them are from U.P., Bihar and other States. It is not possible for these outside IAS Officers to understand the problems of our State. The IAS Officers must be the reflection of the Cabinet. The decisions of the Cabinet must be implemented by these IAS Officers, The behaviour and the way of approach of the people of Karnataka is different from that of the people of U. P., Bihar and other States, Therefore. unless they know the background of the people and unless they are brought up in this atmosphere, it is highly impossible for an IAS Officer to know things and to solve the problems of our State. Most of the IAS Officers are aged about 25 years. Twenty five years is too little an age for anybody to understand the problems of the people of Karnataka. In this respect, the Government of Tamilnadu took a bold decision to reject these IAS Officers. Their act on in rejecting these IAS Officers is quite appreciable.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಾದ ಶ್ರೀಮಾನ್ ಆರ್ಮುಗಂ ರವರು ಒಕ್ಕಲಿಗರ ಮೇಲೆ. ಲಿಂಗಾಯಿತರ ಮೇಲೆ ಈಗ ಸಹಾನುಭೂತಿಯನ್ನು ಸೂಚನೆ ಮಾಡುತ್ತಿದ್ದಾರೆ. ಇದು ಕೇವಲ ಜಾತಿಯ ಆಧಾರದ ಮೇಲೆ. ಹಿಂದೆ ಪ್ರೊಪೋರ್ಷನಲ್ ಆಗಿ ಕೆ.ಎ.ಎಸ್. ನಿಂದ ಐ.ಎ.ಎಸ್.ಗೆ ಪ್ರೊಮೋಷನ್ ಕೊಡುವಾಗ ೩೦ ಪರ್ಸೆಂಟ್ ಕೊಡಬೇಕೆಂದು ಇತ್ತು. ಈಗ ಅದನ್ನು ೩೦ ಪರ್ಸೆಂಟ್ ನಿಂದ ೫೦ ಪರ್ಸೆಂಟ್‌ಗೆ ಏರಿಸಿದರೆ it will be an encouragment to our own K.A.S. Officers. ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಹೋರಾಟ ಮಾಡಬೇಕಾಗುತ್ತದೆ. ಹಿಂದೆ ಕಾಮರಾಜ ನಾಡಾರ್‌ರವರು ಈ ನೀತಿಯನ್ನು ತಾಳಿದ್ದರು. ಈಗ ಇದರಲ್ಲಿ ಎಲ್ಲಾ ಕರ್ನಾಟಕದವರೇ ಇರುವುದರಿಂದ ನಮ್ಮ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಯವರು ಯುವಕರಾಗಿರುವುದರಿಂದ ಇದರ ಬಗ್ಗೆ ಫೈಟ್ ಮಾಡುತ್ತಾರೆಂದು ನಾನು ನಂಬಿದ್ದೇನೆ. ತಾವು ಅವರನ್ನು ಕೇಳಿ ನೋಡಿ.

SRI C. M. ARUMUGHAM.—I think Sri Devegowda will agree with me that Vokkaligas do not sit for IAS Ex·mination. Therefore, there are only three IAS Officers in the State, belonging to Vokkaliga community. I think the Hon. Chief Minister will also agree with me in this regard, I have got a grouse. If you take SC/ST IAS Officers, most of them are in Tamilnadu only. There is only one IAS Officer belonging to SC and who is not put in any important position. Apart from the discussion here. I will meet the Chief Minister and tell him personally. If Government because you take IAS Officers from outside only, it is not going to be a good there set-up is different from that of Karnataka. Therefore, in Tamilnadu they say that they want only their own servicemen. Therefore, I appeal to the Chief Minister to consider this. If it is not possible to resist the allotment of outside IAS Officers, he must see whether it is possible to give a training course for the KAS Officers to appear for IAS and pass the examination. I will be very happy, in case, a KAS officers becomes the Deputy Commissioner. or the Divisional Commissioner of a Division or Commissioner & Secretary to Govern-

ment. The days have gone when certain things were necessary for a person to become a Chief Minister. There was a time when we thought that to become a Chief Minister one must be more than 55 years of age, must be lean and short, must belong to a particular community, etc. etc. Today, the mode of selection of a Chief Minister is different. Thanks to the Central Government and the dynamic leadership of Mrs Indira Gandhi, This is the first time that a Brahmin has become the Chief Minister of Karnataka. It was not possible about 20 years back. The set up which was continued for all these years was not changed in view of the precedent. Therefore, now the Hon, Chief Minister must consider, how far it is practicable to take these IAS and IPS personnel from other States. He should talk with the Central Government. The Hon. Prime Minister Smt. Indira Gandhi is there, Sri R. Gundu Rao is one of the members of the Congress High Command. He must tell the Central Government to take back the IAS officers of other states working in Karnataka and post them to other states. I hope and trust that he will take up the issue with the Central Government.

Then Sir, I am grateful to the Hon. Chief Minister for having declared 14th April, the birthday of Dr Babasaheb Ambedkar as a General Holiday. All these years, though there was demand, the decision was not taken. Therefore, I offer my sincere compliments to Sri R. Gundu Rao. The other day, when I raised this question about granting holiday on the birthday of Dr. Ambedkar, Sri B. Basavalingappa said, what about the other leaders ? We have got so many permanent holidays. Anyway, whether it will increase or decrease is immaterial.

SRI B. B. SAYANAK.—Sri Gundu Rao knows that Dr. Ambedkar is the person who rendered yeoman service to this country and is respected by the people, not only in Maharashtra but throughout the length and breadth of the country.

SRI C. M. ARUMUGHAM.—The other point is about Sri Kengal Hanumanthaiah. He was the man responsible for construction of the Vidhana Soudha. I am sorry to state that the person who was responsible for the construction of Vidhana Soudha, was not allowed to sit in the building even for a day. The present Chief Minister has agreed to instal the Statue of Sri Kengal Hanumanthaiah. Similarly the Hon. Chief Minister has agreed to instal the statue of Dr, Ambedkar and other top leaders before Vidhana Soudha and the High Court. Really speaking, on behalf of the entire community of Scheduled Castes throughout the country numbering about fifteen crores, Dr Ambedkar is a symbol of attraction, a symbol of integra-

tion, revolt, rational. He was the man who brought Buddhism again after 2000 years, a men who framed and gave the Constitution for this country. His statue will certainly inspire all the Legislators and I thank the present Government for this. I on behalf of crores of people, take that credit for this sir. I had occasion to associate myself with that great personality, Dr. Ambedkar, for about 15 years. I know, what the people think about him in this country. Dr. Ambedkar is considered as one of the top leaders in the Maharashtra State. Maharashtra is the first State to declare a general holiday on the birthday of Dr. Ambedkar. Karnataka is the second state in India to declare holiday of Dr. Ambedkar's Birthday. I urge the Government that before commencement of the next Budget Session, we should have a picture of Dr. Ambedkar in this House. I extend my sincere thanks to all the leaders and members of both the Houses because there was not a single voice opposing this. Sir, if you go to the Columbia University, you can see only one picture and that of Dr. Ambedkar. The first Indian to get himself graduated in Economics and Military Science. The other day, I visited the residence of Sri R. Gundu Rao and I was so much pleased to witness the photo of Dr. Ambedkar I do not know about the other Ministers. I never visited the other Ministers houses. It is left to them. When I urged to review the progress made by Scheduled Castes and Schedule Tribes in the State, the Chief Minister agreed to it immediately. He has agreed for the constitution of so many committees and I hope those committees will do their best to serve the purpose for which they have been constituted. I know there are some problems, but he must take one after another so that the long standing grievances of the people are solved. With these words, I thank the Chair for giving me this opportunity to speak on this Demand.

† SRI GHATTI CHANDRASEKHAR (Gubbi).— Mr. Speaker Sir, I whole heartedly support the bundle of demands placed before the House by our Hon'ble Chief Minister. ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಅಧಿವೇಶನದಲ್ಲಿ ನಾನು ಮಾತನಾಡಿರಲಿಲ್ಲ. ಈ ದಿವಸ ಮಾತನಾಡಬೇಕೆಂದು ನನಗೆ ಹುಮ್ಮಸ್ಸು ಬರುತ್ತಿದೆ. ಕಾರಣ ಈ ಎರಡು ದಿವಸಗಳಿಂದ ಈ ಮನೆಗೆ ಗ್ರಹಣ ಹಿಡಿದಿತ್ತು, ಅದು ಇವತ್ತು ಬಿಡುಗಡೆಯಾಗಿ ಮಂಜಿನಂತೆ ಕರಗಿ ಹೋಯಿತು. ಇದಕ್ಕೆ ಮುಖ್ಯ ಕಾರಣ ನಮ್ಮ ಮುಖ್ಯ ಮಂತ್ರಿಯವರು, ಅವರು ಶ್ರೀಮತಿ ಇಂದಿರಾಗಾಂಧಿಯವರ ಮತ್ತು ಶ್ರೀಮಾನ್ ದೇವರಾಜ ಅರಸ್ ಅವರ ಗರಡಿಯಲ್ಲಿ ಚೆನ್ನಾಗಿ ಪಳಗಿಬಿಟ್ಟು ತಮ್ಮದೇ ಆದ ಪಟ್ಟನ್ನು ಹಾಕಿ ಈ ದಿವಸ ಒಂದು ಶಾಂತವಾದ ವಾತಾವರಣವನ್ನು ಇಲ್ಲಿ ಕಲ್ಪಿಸಿದ್ದಾರೆ. ಅವರು ಮಾನ್ಯ ಮುಖ್ಯ ಮಂತ್ರಿಯವರಾದ ಮೇಲೆ ಯಾವ ನಿಲುವನ್ನು ಅನುಸರಿಸುತ್ತಿದ್ದಾರೆ ಅಂದರೆ ಅಮೇರಿಕದ ಕೆನಡಿಯವರು ಅಧ್ಯಕ್ಷರಾಗಿದ್ದಾಗ ಈ ರೀತಿ ಹೇಳಿದ್ದಾರೆ. "Ishould not think what the conutry will do for me, I should think what I can do for the country" ಆ ಒಂದು ತತ್ವದ ಮೇಲೆ ನಮ್ಮ ಮುಖ್ಯ ಮಂತ್ರಿಯವರು ಹೋಗುತ್ತಿದ್ದಾರೆ. ಅವರು ನನಗೆ ೧೯೭೨ನೇ ಇಸವಿಯಿಂದಲೇ ಆಪ್ತ ಸ್ನೇಹಿತರು. ಅವರ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ.

ಅವರನ್ನು ನೋಡಿದರೆ, ಹಿಂದೆ ೧೯೭೨ನೇ ಇಸವಿಯಲ್ಲಿ ಶ್ರೀಮತಿ ನಾಗರತ್ನಮ್ಮನವರು ಈ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿ ಆ ಸ್ಥಾನಕ್ಕೆ ಬಂದಾಗ ಅನೇಕ ಜನ ಮಾನ್ಯ ಸದಸ್ಯರು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ ಆ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಿದ್ದೆ, ಅದೇನೆಂದರೆ ಮಾನ್ಯ ಅಧ್ಯಕ್ಷಿಣಿಯವರೇ, ತಾವು ಈ ಭವ್ಯವಾದ ಪೀಠದಲ್ಲಿ ಕುಳಿತಿರುವುದನ್ನು ನೋಡಿದರೆ, ನೋಡುವುದಕ್ಕೆ ಒಂದು ಆನಂದವಾಗುತ್ತದೆಂದು ಹೇಳಿದ್ದೆ, ಆ ಮಾತನ್ನು ಶ್ರೀಮಾನ್ ಆರ್. ಗುಂಡೂರಾವ್‌ರವರಿಗೆ ಹೇಳಬೇಕಾಗುತ್ತದೆ. ಇದೇ ರೀತಿ ವಿರೋಧಪಕ್ಷದವರಿಗೂ ಕೂಡ ಹೇಳಬೇಕಾಗುತ್ತದೆ. ಆ ಕಡೆ ನುರಿತಂತಹ ರಾಜಕಾರಣಿಗಳು ಮತ್ತು ಮಂತ್ರಿಗಳಾಗಿದ್ದವರು ಅವರೆಲ್ಲ ಸಹಕರಿಸಿ ಈ ಒಂದು ಶಾಂತ ವಾತಾವರಣ ಕಲ್ಪಿಸಿಕೊಟ್ಟಿದ್ದಾರೆ. ಅವರಿಗೂ ಅಭಿನಂದನೆ ಸಲ್ಲಿಸುತ್ತೇನೆ. ನಾನು ಇದುವರೆಗೂ ಯಾಕೆ ಮಾತನಾಡಲಿಲ್ಲ ಅಂದರೆ ಏನು ಮಾತನಾಡಬೇಕು ಎನ್ನುವ ಪ್ರಶ್ನೆ ಇತ್ತು. ಇತ್ತೀಚೆಗೆ ಮುಖ್ಯಮಂತ್ರಿಗಳಿಗೂ ಆ ಕಡೆ ಈ ಕಡೆ ಸದಸ್ಯರಿಗೆ ಒಂದು ರೀತಿಯ ಲವ್ ಅಫೇರ್ಸ್ ನಡೆಯುತ್ತಿದೆ. ಯಾಕೆಂದರೆ ಶ್ರೀ ಬಸವಲಿಂಗಪ್ಪನವರು ಹಳೆ ಹುಲಿಗಳು, ಅವರನ್ನು ಸಹ ಈ ಕಡೆ ಬನ್ನಿ, ನಿಮಗೆ ರೆವಿನ್ಯೂ ಇಲಾಖೆಯನ್ನೇ ಕೊಡುತ್ತೇನೆ ಎಂದರು. ಅಲ್ಲದೆ ಶ್ರೀ ಎಸ್. ಆರ್. ಬೊಮ್ಮಾಯಿಯವರನ್ನು ಕರೆದರು. ಈಗ ಯಾರ್ಯಾರು ಯಾವ ಕಡೆಗೆ ಬರುತ್ತಾರೆ ಅರ್ಥವಾಗುವುದಿಲ್ಲ, ಈಗ (ಯು). (ಐ) ಎರಡು ಪಕ್ಷಗಳು ಇವೆ. ಯು ಒಳಗೆ ಐ ಹಾಕಿದರೆ ತಿರುಪತಿ ವೆಂಕಟರಮಣಸ್ವಾಮಿಯ ನಾಮವಾಗುತ್ತದೆ, ಈ ರೀತಿಯಾಗಬಾರದು. ಏಕೆಂದರೆ ಯು ಒಳಗ ಐ ಹಾಕಿದರೆ ಮೂರು ನಾಮ ಸಿಂಬಲ್ ಆದಹಾಗೆ ಆಗುತ್ತದೆ. ಆ ಕಡೆ ಸದಸ್ಯರು ಮಾತನಾಡುವಾಗ ೩೦ ವರ್ಷಗಳಿಂದ ರೈತರ ಸಮಸ್ಯೆಗಳನ್ನು ಬಗೆಹರಿಸಿಲ್ಲವೆಂದು ಹೇಳುತ್ತಾರೆ ಆದರೆ, ಶ್ರೀ ಗುಂಡೂರಾವ್ ಅವರು ಬಂದು ಕೇವಲ ಆರು ತಿಂಗಳು ಮಾತ್ರವಾಗಿದೆ ೩೦ ವರ್ಷಗಳ ಮಾಡಲಾಗದಿದ್ದುದನ್ನು ೬ ತಿಂಗಳುಗಳಲ್ಲಿ ಮಾಡಲಾಗುತ್ತದೆಯೇ. ಮೊನ್ನೆ ಮಾತನಾಡುವಾಗ ಶ್ರೀ ಜೆ. ಎಚ್. ಪಟೇಲ್ ಅವರು ಹೇಳುತ್ತಿದ್ದರು, ಹೆರಿಗೆ ಆಸ್ಪತ್ರೆಗೆ ಯಾರು ಕರೆದುಕೊಂಡು ಹೋಗುತ್ತಾರೋ ಅವರು ಅಲ್ಲಿ ದಾಖಲೆಯಲ್ಲಿ ತಂದೆಯೆಂದು ಬರೆಸುತ್ತಾರೆ ಆದರೆ ಹಿಂದೆ ಆ ರೀತಿಯಾಗಲು ಯಾರೋ ಇರುತ್ತಾರೆಂದು. ಯಾರು ಈ ರೀತಿ ಆಗಲು ಕಾರಣವೆಂದು ಊರಿನವರಿಗೆಲ್ಲಾ ಗೊತ್ತಿರುತ್ತದೆ, ಜಪಾನ್‌ದೇಶ ೨ನೇ ಮಹಾಯುದ್ಧದಲ್ಲಿ ನಾಮಾವಶೇಷವಾಗಿತ್ತು. ಈಗ ರಾಜಕಾರಣಿಗಳು ಮತ್ತು ಅಧಿಕಾರಿಗಳು ತಮ್ಮ ತಮ್ಮ ಕರ್ತವ್ಯಗಳನ್ನು ಅರಿತುಕೊಂಡು ದುಡಿದಿದ್ದರಿಂದ ಈಗ ಮುಂದೆ ಬಂದಿದೆ. ನಮ್ಮ ಅಗ್ರಗಣ್ಯ ರಾಜಕಾರಣಿಗಳಾದ ಶ್ರೀಮಾನ್ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ನಮ್ಮ ದೇಶದಲ್ಲಿ ೧೨೫ ಮಿಲಿಯನ್ ಟನ್ ಆಹಾರ ಉತ್ಪಾದನೆಯಾಗಿತ್ತು. ಚೈನಾದವರು ನಮಗಿಂತ ೩೦೦ ಮಿಲಿಯನ್ ಟನ್ ಕಡಿಮೆ ಆಹಾರ ಉತ್ಪಾದನೆ ಮಾಡುತ್ತಿದ್ದರು,

ಪ್ರತಿಯೊಬ್ಬರೂ, ಅಧಿಕಾರಿಗಳಾಗಲೀ; ರಾಜಕಾರಣಿಗಳಾಗಲೀ, ಕಷ್ಟಪಟ್ಟು ದುಡಿದಿದ್ದೇ ಆದರೆ ದೇಶ ಮುಂದುವರೆಯುತ್ತದೆ. ಮೊನ್ನೆ ೨ ದಿವಸಗಳಿಂದ ಮಾನ್ಯ ವಿರೋಧಪಕ್ಷದವರು ಇಲ್ಲಿ ಧರಣಿ ಮಾಡಿದರು. ಆಮೇಲೆ ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಪರಸ್ಪರ ಹೊಂದಾಣಿಕೆಗೆ ಬಂದರು. ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಸಹ ದೇಶವನ್ನು ಅಭಿವೃದ್ಧಿಪಡಿಸಬೇಕೆಂಬ ಭಾವನೆ ಬರಬೇಕು. ಉದಾಹರಣೆಗೆ ಹೇಳಬೇಕಾದರೆ ಅಮೇರಿಕಾದ ಕೆನಡಿಯವರು ಅಧಿಕಾರಕ್ಕೆ ಬಂದಾಗ ಏನು ಹೇಳಿದರು ಅಂದರೆ "I should not think what the country will do for me, I should think what I can do for the conntry" ಈ ಭಾವನೆ ನಮ್ಮಲ್ಲಿ ಎಲ್ಲರಲ್ಲೂ ಬೆಳೆದು ಬರಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ೩೩ ವರ್ಷಗಳಾದರೂ ನಾವು ಬೇರೆ ರಾಷ್ಟ್ರಗಳ ಮಟ್ಟಕ್ಕೆ ಬರುವುದಕ್ಕೆ ಸಾಧ್ಯವಾಗಲಿಲ್ಲ ನಮ್ಮ ದೇಶ ಒಂದರಲ್ಲಿ ಮಾತ್ರ ಮುಂದುವರಿದಿದೆ, ಅದು ಏನೆಂದರೆ ಪ್ರೊಡಕ್ಷನ್ ಆಫ್ ಚಿಲ್ಡ್ರನ್ ಅದರ ಉತ್ಪತ್ತಿ ತಡೆಯಲಾರದಷ್ಟು ಆಗುತ್ತಿದೆ. ಅದಕ್ಕೂ ಒಂದು ಹಿನ್ನೆಲೆಯಿದೆ, ಬ್ರಿಟಿಷ್‌ನವರಿಗೆ ನಮಗೆ ಸ್ವಾತಂತ್ರ್ಯ ಕೊಡುವುದಕ್ಕೆ ಇಷ್ಟವಿರಲಿಲ್ಲ. ಅನಿವಾರ್ಯವಾಗಿ ನಮಗೆ ಸ್ವಾತಂತ್ರ್ಯ ಕೊಟ್ಟು ಒಂದು ಪ್ಲಾನ್ ಮಾಡಿದರು ಅದೇನೆಂದರೆ ೧೯೪೭ನೇ ಇಸವಿ ಆಗಸ್ಟ್ ೧೫ನೇ ತಾರೀಖು ಮಧ್ಯ ರಾತ್ರಿಯಲ್ಲಿ ಇಡೀ ದೇಶ ಗಾಢನಿದ್ರೆಯಲ್ಲಿರುವಾಗ ನಮಗೆ ಸ್ವಾತಂತ್ರ್ಯವನ್ನು ಕೊಟ್ಟರು. ಅವರು ಏತಕ್ಕೆ ಹಾಗೆ ಮಾಡಿದರು ಎಂದರೆ ದೇಶದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿರುತ್ತಾರೆ, ಸ್ವಾತಂತ್ರ್ಯ ಬಂತು ಎಂಬ ಸಂತೋಷದಲ್ಲಿ ಅವರು ಕೆಲಸ ಮಾಡುವುದನ್ನು ನಿಲ್ಲಿಸಿದರೆ ದೇಶದಲ್ಲಿ ಪ್ರೊಡಕ್ಷನ್ ಕಡಿಮೆಯಾಗುತ್ತದೆಂದು ಹೇಳಿ, ಅದಕ್ಕೋಸ್ಕರ ಮಧ್ಯರಾತ್ರಿಯಲ್ಲಿ ಸ್ವಾತಂತ್ರ್ಯ ಕೊಟ್ಟರೆ, ಪ್ರೊಡಕ್ಷನ್ ಜಾಸ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನಮಗೆ ಮಧ್ಯರಾತ್ರಿಯಲ್ಲಿ ಸ್ವಾತಂತ್ರ್ಯ ಕೊಟ್ಟರು. ಬ್ರಿಟಿಷರು ಮಧ್ಯರಾತ್ರಿ

ಯಲ್ಲಿ ನಮಗೆ ಸ್ವಾತಂತ್ರ್ಯ ಕೊಟ್ಟ ತಕ್ಷಣ, ನಮ್ಮ ಪಂಡಿತ ಜವಾಹರಲಾಲ್ ನೆಹರೂರವರು ಮಧ್ಯರಾತ್ರಿ ೧೨ ಗಂಟೆಗೆ ಸರಿಯಾಗಿ ಧ್ವಜ ಹಾರಿಸಿ ಜೈ ಹಿಂದ್ ಎಂದು ಹೇಳಿದಾಗ ಜನರು ಸ್ವಾತಂತ್ರ್ಯ ಬಂತು ಎಂದು ಎದ್ದಾಗ ಮಕ್ಕಳು ದಿಕ್ಕಾಪಾಲಾಗಿ ಹುಟ್ಟಿದವು. ಯಾಕೆ ಹೀಗಾಯಿತು ಎಂದರೆ ಬೀಜ ವೃಕ್ಷದಂತೆ ಈ ಸಮಸ್ಯೆ ಉದ್ಭವಿಸಿತು.

ಶ್ರೀ ಮಳ್ಳೂರು ಆನಂದರಾವ್.—ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಶ್ರೀ ಘಟ್ಟಿ ಚಂದ್ರಶೇಖರ್‌ರವರನ್ನು ಫ್ಯಾಮಿಲಿ ಪ್ಲಾನಿಂಗ್ ಅಡ್ವೈಜರಿ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದರೆ ಆ ಕಾರ್ಯ ಯಶಸ್ವಿಯಾಗಿ ನಡೆಯುತ್ತದೆ.

ಶ್ರೀ ಘಟ್ಟಿ ಚಂದ್ರಶೇಖರ್.— ನೀವು ಶಿಫಾರಸ್ಸು ಮಾಡಿ ಕೊಡಿಸಿ. ಮಳ್ಳೂರು ಆನಂದರಾಯರು ಮೊದಲು ಚಾಮುಂಡಿ ಬೆಟ್ಟದ ಮೇಲಿನ ವಿಗ್ರಹದ ಹಾಗೆ ಇದ್ದರು, ಈಗ ಶ್ರೀ ರಾಜನಾರಾಯಣ ತರಹ ಆಗಿದ್ದಾರೆ. ಹೊಸದಾಗಿ ಮದುವೆಯಾದ ಗಂಡಹೆಂಡತಿಯರು ಒಬ್ಬೊಬ್ಬರನ್ನೊಬ್ಬರು ಅರಿತುಕೊಳ್ಳಬೇಕಾದರೆ ಸುಮಾರು ೬ ತಿಂಗಳು ಆಗುತ್ತದೆ. ಅದೇ ರೀತಿ ಮಾನ್ಯ ಗುಂಡೂರಾಯರ ಸರ್ಕಾರ ಬಂದು ೬ ತಿಂಗಳಾಗಿದೆ. ಇಂತಹ ಒಂದು ದೊಡ್ಡ ಸಮಸ್ಯೆಯನ್ನು ಸರ್ಕಾರ ೬ ತಿಂಗಳಲ್ಲಿ ಏನು ಮಾಡುವುದಕ್ಕೆ ಆಗುತ್ತದೆ ? ೩೦ ವರ್ಷಗಳಿಂದ ಈ ಅಡ್ಮಿನಿಸ್ಟ್ರೇಟಿವ್ ಮಿಷಿನರಿ ಯಾವ ಯಾವ ರೀತಿಯಿಂದಲೋ ನಡೆದುಕೊಂಡು ಬಂದು ಕಿತ್ತುಹೋಗಿಬಿಟ್ಟಿದೆ. ಅದನ್ನೆಲ್ಲಾ ಸರಿ ಮಾಡಬೇಕಾಗಿದೆ. ಇದನ್ನೆಲ್ಲಾ ಅವರು ಸರಿಮಾಡುತ್ತಾರೆ. ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕು. ಅವರು ಬಂದ ಮೇಲೆ ಮಾಡಿರುವಂತಹ ಕೆಲಸಗಳನ್ನು ನೋಡಿದರೆ ಅವರು ಒಳ್ಳೆಯ ಕೆಲಸ ಮಾಡುತ್ತಾರೆ ಎಂಬ ನಂಬಿಕೆ ನನಗೆ ಇದೆ. ಉದಾಹರಣೆಗೆ ಆಫೀಸರುಗಳಿಗೆ ಎಕ್ಸ್‌ಟೆನ್‌ಷನ್ ಕೊಡುವುದನ್ನು ನಿಲ್ಲಿಸಿದ್ದಾರೆ, ಅದು ಬಹಳ ಮುಖ್ಯವಾದುದು. ಯಾರೋ ಒಬ್ಬರು ಇಂಜಿನೀಯರು ಇರುತ್ತಾರೆ ಅವರಿಗೆ ೬ ತಿಂಗಳು ಎಕ್ಸ್‌ಟೆನ್‌ಷನ್ ಕೊಟ್ಟರೆ ಮತ್ತೆ ೨—೩ ಲಕ್ಷ ದುಡ್ಡು ಹೊಡೆದು ಭ್ರಷ್ಟಾಚಾರಕ್ಕೆ ಅವಕಾಶವಾಗುತ್ತದೆ.

೧–೩೦ ಪಿ.ಎಂ.

ಇದು ಆಡಳಿತ ನಡೆಸುವವರ ಮೇಲೆ ಅವಲಂಬಿಸುತ್ತದೆ. ಇವೊತ್ತು ಏನಾಗಿದೆ ಎಂದರೆ, ಇಂದಿರಾ ಗಾಂಧೀಕೀ ಜೈ ಎಂದು ಕೂಗುವವರೆಲ್ಲಾ ತಹಶೀಲಿದಾರರ ಹತ್ತಿರ ಹೋಗಿ ಇಂತಹವರನ್ನು ವರ್ಗ ಮಾಡಿ ಎಂದು ಹೇಳುತ್ತಾರೆ. ಇಂಥಾದ್ದಕ್ಕೆಲ್ಲಾ ಮಾನ್ಯ ಮುಖ್ಯಮಂತ್ರಿಯವರು ಅವಕಾಶ ಕೊಡದೆ, ಅಧಿಕಾರಿಗಳಿಗೂ ಸಹ ರಕ್ಷಣೆ ಕೊಟ್ಟು ನಮ್ಮ ರಾಜ್ಯದ ಆಡಳಿತ ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಮತ್ತು ಇನ್ನು ಒಂದು ವರ್ಷದೊಳಗೆ ಅವರು ನಮ್ಮ ರಾಜ್ಯಕ್ಕೆ ಒಳ್ಳೆಯ ಆಡಳಿತ ಕೊಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಹರಿಜನರ ಬಗ್ಗೆ ಹೇಳಬೇಕೆಂದರೆ, ಬಸವಣ್ಣನವರ ಕಾಲದಿಂದಲೂ ಸಹ ಹರಿಜನರಿಗೆ ಹರಿಜನರಿಂದಲೇ ಅನ್ಯಾಯಗಳು ಆಗುತ್ತಿವೆ. ಬೇರೆಯವರ ಹೆಸರುಗಳನ್ನು ಹೇಳಿಕೊಂಡು ಅನ್ಯಾಯ ಮಾಡುತ್ತಿದ್ದಾರೆ. ಹಾಗೂ ಹಾಸ್ಟಲ್ ಹೆಸರಿನಲ್ಲಿ ಹಾಗೂ ಬೇರೆ ಬೇರೆ ಹೆಸರುಗಳಿಂದ ಇವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಮಾನ್ಯ ಪ್ರಭಾಕರ್ ಅವರು ಹಾಗೂ ಮಾನ್ಯ ಬಸವಲಿಂಗಪ್ಪನವರು ಪ್ರವಾಸ ಹೋಗುತ್ತಿದ್ದಾಗ ಅವರು ಹರಿಜನರ ಕೇರಿಯಲ್ಲಿ ಇಳಿದುಕೊಳ್ಳುತ್ತಿರಲಿಲ್ಲ. ಈಗಲೂ ಹರಿಜನರಲ್ಲಿ ಎಡಗೈ ಮತ್ತು ಬಲಗೈ ಎಂಬ ಬೇಧಭಾವ ಹೋಗಿಲ್ಲ. ಜೊತೆಗೆ ಇವರುಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಈ ಜಾಗಕ್ಕೆ ಬರಲು ಬೇರೆಯವರನ್ನು ತಯಾರು ಮಾಡಿಲ್ಲ. ಇವರ ಬಗ್ಗೆ ಕಂಡೋಲೆನ್ಸ್ ಮಾಡುವವರೆಗೆ ಬೇರೆಯವರಿಗೆ ಅವಕಾಶ ಸಿಗುವುದಿಲ್ಲವೆಂದು ಕಾಣುತ್ತದೆ. ಇದನ್ನು......

ಶ್ರೀ ಬಸವಲಿಂಗಪ್ಪ.—ಮಾನ್ಯ ಘಟ್ಟಿ ಚಂದ್ರಶೇಖರ್ ಅವರು ಬಹಳ ಚೆನ್ನಾಗಿ ಸ್ವಾರಸ್ಯವಾಗಿ ಮಾತನಾಡುತ್ತಿದ್ದಾರೆ. ಅದಕ್ಕಾಗಿ ಎಲ್ಲರೂ ಆನಂದದಲ್ಲಿದ್ದಾರೆ. ಈಗ ಮಾನ್ಯ ಸದಸ್ಯರಿಗೆ ಯಾವ ವಿಷಯ ತಿಳಿಯುವುದಿಲ್ಲವೋ ಮತ್ತು ಯಾವುದರಲ್ಲಿ ಹೆಚ್ಚಿನ ಆಸಕ್ತಿ ಇಲ್ಲವೋ, ಅಂತಹ ಕ್ಷೆತ್ರಕ್ಕೆ ಸಂಬಂಧಪಟ್ಟಂತೆ ಹೇಳಲು ಹೋಗುತ್ತಿದ್ದಾರೆ. ಬಸವಣ್ಣನವರ ಕಾಲದಲ್ಲಿ ಹರಿಜನರು ಎಂದು ಇರಲಿಲ್ಲ. ಹರಜನರು ಇದ್ದರು. ಆದರೆ ತಾವು ಹರಿಜನರು ಎಂದು ಹೇಳುತ್ತೀರಿ. ಎಲ್ಲಿಯವರೆಗೆ ನಮ್ಮ ಸಮಾಜದಲ್ಲಿ ಈ ಜಾತಿಗಳು ಇರುತ್ತವೋ ಮತ್ತು ಒಂದು ಜಾತಿಯವರು ಇನ್ನೊಂದು ಜಾತಿಯವರೊಡನೆ ಹೊಂದಿಕೊಂಡು ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಒಂದು ಚಳುವಳಿ ಇದ್ದೇ ಇರುತ್ತದೆ. ಮಾನ್ಯ

ಸದಸ್ಯರು ನನ್ನ ಮತ್ತು ಮಾನ್ಯ ಪ್ರಭಾಕರ್ ಅವರ ಹೆಸರನ್ನು ಪ್ರಸ್ತಾಪ ಮಾಡಿದರು. ಆದರೆ ಈ ದೇಶವನ್ನು ಕಟ್ಟತಕ್ಕಂಥ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ ಎಂಬುದನ್ನು ಅವರು ಮರೆಯಬಾರದು. ನಾನು ಇಂತಹ ಒಂದು ಜಾತಿಯಲ್ಲಿ ಹುಟ್ಟಿದ್ದೇನೆಂದು ನನ್ನ ಮನಸ್ಸಿನಲ್ಲಿ ಅಂದುಕೊಂಡಿಲ್ಲ. ಅದರೂ, ನೀವು ಮತ್ತು ಶ್ರೀ ಪ್ರಭಾಕರ್ ಅವರು ಆ ಜಾತಿಯಲ್ಲಿ ಏತಕ್ಕೆ ಹುಟ್ಟಿದ್ದೀರಿ ಎಂದು ಕೇಳುವುದಾದರೆ, ಅವರು ಬೇರೊಂದು ಜಾತಿಯಲ್ಲಿ ಏತಕ್ಕೆ ಹುಟ್ಟಿದ್ದಾರೆಂಬುದೂ ಸಹ ನನಗೆ ಅರ್ಥವಾಗುವುದಿಲ್ಲ. ಆದ ಕಾರಣ ಅವರು ಇನ್ನೊಬ್ಬರ ಕಡೆ ಕೈಮಾಡಿ ತೋರಿಸುವುದಕ್ಕೆ ಮೊದಲು, ಅವರು ಈ ಒಂದು ಸಮಸ್ಯೆಯನ್ನು ಬಗೆಹರಿಸಲು ಎಷ್ಟು ಪ್ರಯತ್ನ ಮಾಡಿದ್ದಾರೆ ಮತ್ತು ಅದರಲ್ಲಿ ಎಷ್ಟು ಯಶಸ್ವಿಯಾಗಿದ್ದಾರೆ ಅನ್ನುವುದನ್ನು ತಿಳಿದುಕೊಂಡ ನಂತರ ಮಾತನಾಡಬೇಕು ಅದು ಬಿಟ್ಟು ಏನೋ ಸ್ವಾರಸ್ಯವಾಗಿ ಮಾತನಾಡಬೇಕೆಂದುಕೊಂಡು ಏನನ್ನೋ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ತಾವು ರಿಜರ್ವ್ ಕ್ಷೇತ್ರವನ್ನು ಬಿಟ್ಟು ಜನರಲ್ ಕ್ಷೇತ್ರದಲ್ಲಿ ಏತಕ್ಕೆ ಚುನಾವಣೆಗೆ ನಿಲ್ಲಬಾರದು?

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ನಾನು ಶ್ರೀ ಬಸವಲಿಂಗಪ್ಪನವರ ಪಕ್ಕದಲ್ಲಿ ಕುಳಿತಿದ್ದೆ ಎಂಬ ಕಾರಣದಿಂದ ನನ್ನನ್ನು ಸಹ ಸೇರಿಸಿಕೊಂಡು ಅವರು ಮಾತನಾಡಿದರು. ನಾನು ಮಂತ್ರಿಯಾಗಿದ್ದಾಗ ಎಷ್ಟು ಸಲ ಹರಿಜನರ ಕೇರಿಗಳಿಗೆ ಹೋಗಿದ್ದೇನೆಂಬುದು ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ.

ಚೇರ್‌ಮನ್. ತಾವು ಹೋಗಿದ್ದೀರಿ. ನಾನೂ ಸಹ ತಮ್ಮ ಜೊತೆಯಲ್ಲಿ ಬಂದಿದ್ದೇನೆ.

ಶ್ರೀ ಕೆ. ಪ್ರಭಾಕರ್.- ನನ್ನ ಪ್ರವಾಸದ ವಿವರಗಳನ್ನು ಅವರು ತೆಗೆದು ನೋಡಲಿ. ನಾನು ಪ್ರವಾಸ ಹೋದಾಗಲೆಲ್ಲಾ ಅಂದರೆ ಶೇಕಡಾ ೯೮ರಷ್ಟು ಸಲ ಹರಿಜನರ ಕೇರಿಗಳಿಗೆ ಹೋಗಿದ್ದೇನೆ. ಆದ ಕಾರಣ ಅವರ ಬಗ್ಗೆ ನಾನು ಕೆಲಸ ಮಾಡಿಲ್ಲ ಎಂದು ಅವರು ಹೇಳಿದ್ದು ಸರಿಯಲ್ಲ. ಈಗ ಕುಂಬಾರ ಇರುತ್ತಾನೆ. ಅವನು ಮಡಕೆ ಮಾಡುವುದರಲ್ಲಿ ಬಹಳ ಪ್ರವೀಣ ಆಗಿರುತ್ತಾನೆ ಅವನು ಜೇಡಿ ಮಣ್ಣಿನಿಂದ ಎಷ್ಟು ನಯವಾಗಿ ಮಡಿಕೆಗಳನ್ನು ಮಾಡುತ್ತಾನೋ ಅಷ್ಟೇ ನಯವಾಗಿ ಈ ಕೆಲವು ಜನರು ಹರಿಜನರ ಶೋಷಣೆ ಮಾಡುತ್ತಿದ್ದಾರೆಂಬುದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಜೆ ಎಚ್. ಪಟೇಲ್.—ಮಾನ್ಯ ಸದಸ್ಯರು ಬಸವಣ್ಣನವರ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ ಎಂದು ಬಹಳ ಗಂಭೀರವಾಗಿ ಮಾತನಾಡಿದ್ದಾರೆ. ಈಗ ಒಂದು ಸೇತುವೆ ಕಟ್ಟುತ್ತಾರೆ, ಅದೇನಾದರೂ ಬಿದ್ದುಹೋದರೆ, ಅದಕ್ಕೆ ಇಂಜಿನಿಯರ್ ಜವಾಬ್ದಾರಿ ಎಂದು ಹೇಳುತ್ತಾರೆ, ಚಿಕಿತ್ಸೆ ಪಡೆಯುತ್ತಿರುವ ರೋಗಿ ಸತ್ತರೆ, ಡಾಕ್ಟರ್ ಜವಾಬ್ದಾರಿ ಎಂದು ಹೇಳುತ್ತಾರೆ. ಅದೇ ರೀತಿ ವಿದ್ಯಾರ್ಥಿಗಳು ಸರಿಯಾಗಿ ಪಾಠ ಕಲಿಯದಿದ್ದರೆ ಶಿಕ್ಷಕರು ಜವಾಬ್ದಾರಿ ಎಂದು ಹೇಳುತ್ತಾರೆ. ಅದೇ ರೀತಿಯಲ್ಲಿ ಬಸವಣ್ಣನವರು ಹುಟ್ಟಿದ ಭೂಮಿಯಲ್ಲಿ ಹುಟ್ಟಿರುವ ಹಾಗೂ ಅವರ ಪಂಥಕ್ಕೆ ಸೇರಿರುವ ನಾನು ಮತ್ತು ಮಾನ್ಯ ಚಂದ್ರಶೇಖರ್ ಅವರು ಹಾಗೂ ಇತರರು ಸೇರಿಕೊಂಡು ಮಾಡತಕ್ಕಂಥ ಕೆಲಸವನ್ನು ಸರಿಯಾಗಿ ಮಾಡದೆ ಶ್ರೀ ಪ್ರಭಾಕರ್ ಅವರು ಮತ್ತು ಶ್ರೀ ಬಸವಲಿಂಗಪ್ಪನವರು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಹೇಳುತ್ತಿರುವುದು ಸರಿಯಲ್ಲ. ಅದಕಾರಣ ಈ ಮಾತನ್ನು ಅವರು ನಾಚಿಕೆಯಿಂದ ಹೇಳಬೇಕು.

ಶ್ರೀ ಘಟ್ಟಿಚಂದ್ರಶೇಖರ್.— ನೀವೂ ಸಹ ಕೆಲಸ ಮಾಡುತ್ತಿದ್ದೀರಿ. ಮಾನ್ಯ ಬಸವಲಿಂಗಪ್ಪನವರು ತಾವು ಹರಜನರೆಂದು ಹೇಳಿಕೊಂಡರು. ಅದನ್ನು ನಾನು ಒಪ್ಪಿದೆ. ಮಾನ್ಯ ಪ್ರಭಾಕರ್ ಅವರು ಹರಿಜನ ಜಾತಿಯಲ್ಲಿಯೇ ಹುಟ್ಟಿದರು ಎಂದು ನಾನು ಹೇಗೆ ತಿಳಿದುಕೊಳ್ಳುವುದು ? ಒಟ್ಟಿನಲ್ಲಿ ನಾವೆಲ್ಲರೂ ಸೇರಿಕೊಂಡು ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡೋಣ ಅವರ ಏಳಿಗೆಯ ಬಗ್ಗೆ ಕೆಲಸ ಮಾಡೋಣ. ನಾನು ಬೇಡ ಎಂದು ಹೇಳುವುದಿಲ್ಲ. ನಮ್ಮದು ಈಗ ಜಾತ್ಯಾತೀತ ರಾಷ್ಟ್ರ. ಇದಕ್ಕೂ ಮೊದಲು ಅಂದರೆ ಪೂರ್ವಕಾಲದಲ್ಲಿ ಒಂದು ಹಳ್ಳಿಗೆ ಯಾರಾದರು ಹೆಣ್ಣು ಕೇಳಲು ಹೋದರೆ, ಆ ಹಳ್ಳಿಯಲ್ಲಿರುವ ಎಲ್ಲ ಜಾತಿಯ ಮುಖಂಡರೂ ಸೇರಿಕೊಂಡು ತಮ್ಮ ಮಗಳು ಎಂಬ ಭಾವನೆಯಿಂದ ವ್ಯವಹಾರ ನಡೆಸುತ್ತಿದ್ದರು. ಆದರೆ ನಮಗೆ ಸ್ವಾತಂತ್ರ್ಯ ಬಂದಮೇಲೆ, ನಮ್ಮದು ಜಾತ್ಯಾತೀತ ರಾಷ್ಟ್ರವೆಂದು ಕರೆದ ಮೇಲೆ ಈ ಜಾತಿಗಳ ಸಂಖ್ಯೆ ಜಾಸ್ತಿಯಾಗಿದೆ ನಾವು ಇಷ್ಟು ಲಕ್ಷ ಇದ್ದೇವೆ, ಆದಕಾರಣ ಮಂತ್ರಿಮಂಡಲದಲ್ಲಿ ನಮಗೆ ಪ್ರಾತಿನಿಧ್ಯಬೇಕೆಂದು ಎಲ್ಲ ಜಾತಿಯವರೂ ಕೇಳುತ್ತಿದ್ದಾರೆ. ಇದು ಹೋಗಬೇಕು ಮತ್ತು ಈ ಜಾತಿಯ ಪದ್ಧತಿಯನ್ನು ತಪ್ಪಿಸಬೇಕಾದರೆ, ಯಾರು ಯಾರು ನಿಷ್ಠಾವಂತರಾಗಿ ಕೆಲಸ ಮಾಡುತ್ತಾರೆ

ಎಂಬುದನ್ನು ನೋಡಿಕೊಂಡು, ಅಂತಹವರನ್ನು ಮಾತ್ರ ಆ ಸ್ಥಾನಗಳಿಗೆ ನೇಮಕ ಮಾಡಬೇಕೆಂದು ಹೇಳುತ್ತೇನೆ. ಈ ರೀತಿ ಮಾಡಿದಾಗ ಮಾತ್ರ ಈ ಜಾತಿಯ ಪ್ರಭಾವ ಕಡಿಮೆ ಆಗುತ್ತದೆ. ಇಲ್ಲದಿದ್ದರೆ ಇದು ಇನ್ನೂ ಜಾಸ್ತಿಯಾಗುತ್ತಾ ಹೋಗುತ್ತದೆಂದು ಹೇಳುತ್ತೇನೆ.

ಇನ್ನು ಎಸ್ಟಿಮೇಟ್ ಕಮಿಟಿ ಪರವಾಗಿ ನಾವು ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರವಾದ ಮಡಿಕೇರಿಗೆ ಪ್ರವಾಸ ಹೋದಾಗ ಅಲ್ಲಿನ ಕಾಡನ್ನು ನೋಡಿಕೊಂಡು ಬಂದೆವು. ೨೦ ಮೈಲಿ ಒಳಭಾಗದ ಕಾಡಿಗೂ ಅಂದರೆ 'ಮಾಕೂಟ' ಎಂಬ ಹೆಸರಿನ ಕಾಡಿಗೂ ಹೋಗಿ ಅದನ್ನು ನೋಡಿಕೊಂಡು ಬಂದೆವು. ಅಲ್ಲಿ ಗಂಧದ ಮರಗಳ ಕಳ್ಳಸಾಗಾಣಿಕೆ ಜಾಸ್ತಿ ನಡೆಯುತ್ತಿದೆ. ಇದನ್ನು ತಪ್ಪಿಸಲು ಸರ್ಕಾರದವರು ಒಬ್ಬರು ಎಸ್. ಪಿ. ನೇತೃತ್ವದಲ್ಲಿ ಪೋಲೀಸ್ ಬೆಟ್ಯಾಲಿಯನನ್ನು ಇಟ್ಟಿದ್ದಾರೆ. ಅದರೂ ಅದು ಕೇರಳಾ ಬಾರ್ಡರ್ ಆದ ಕಾರಣ ಈ ಒಂದು ಕಳ್ಳಸಾಗಾಣಿಕೆ ನಡೆಯುತ್ತಲೇ ಇದೆ. ಕೆಲವರ ಸ್ವಂತ ಜಮೀನಿನಲ್ಲಿಯೂ ಈ ಮರಗಳಿವೆ. ಈ ಮರಗಳನ್ನು ಸರ್ಕಾರದ ದರದಲ್ಲಿ ಸರ್ಕಾರಕ್ಕೆ ಕೊಡಬೇಕೆಂಬ ನಿಯಮವಿದೆ. ಆ ದರಕ್ಕೆ ಕೊಟ್ಟ ಮೇಲೂ ಸಹ ಹಣ ಸಿಗುವುದು ೬ ತಿಂಗಳು ಇಲ್ಲವೇ ವರ್ಷದ ಮೇಲಾಗುತ್ತದೆಂದುಕೊಂಡು ಖಾಸಗಿಯವರು ತಮ್ಮಲ್ಲಿರುವ ಮರಗಳನ್ನು ಈ ಕಳ್ಳಸಾಗಾಣಿಕೆದಾರರಿಗೇ ಮಾರಿಬಿಟ್ಟು ತಮ್ಮಲ್ಲಿ ಆ ಮರಗಳೇ ಬೆಳೆದಿರಲಿಲ್ಲವೆಂದು ಹೇಳತಕ್ಕಂಥಾದ್ದು ನಡೆಯುತ್ತಿದೆ. ನಮ್ಮ ರಾಜ್ಯಕ್ಕೆ ಆದಾಯ ತರುವಂತಹ ಈ ಮರಗಳ ವಿಚಾರದಲ್ಲಿ ಯಾವ ರೀತಿ ಬಂದೋಬಸ್ತು ಮಾಡಬೇಕೆಂಬುದು ಮಾನ್ಯ ಮುಖ್ಯಮಂತ್ರಿಯವರಿಗೆ ಚೆನ್ನಾಗಿ ಗೊತ್ತಿದೆ ನಾನೇನೂ ಅವರಿಗೆ ಹೇಳಬೇಕಾದ್ದು ಇಲ್ಲ. ಅಧಿಕಾರಿಗಳ ಸಭೆಯಲ್ಲಿಯೂ ಸಹ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಹೇಳಿದ್ದಾರೆ. ಒಟ್ಟಿನಲ್ಲಿ ಅವರು ಒಳ್ಳೆಯ ದಕ್ಷತೆಯಿಂದ ಆಡಳಿತವನ್ನು ಚೆನ್ನಾಗಿ ನಡೆಸುತ್ತಾರೆಂಬ ಭರವಸೆ ನನಗಿದೆ. ಮಾನ್ಯ ಬಸವಲಿಂಗಪ್ಪನವರು ತಾವು ಹರಭಕ್ತರೆಂದು ಹೇಳಿದರು. ಆದ ಕಾರಣ ಅವರೂ ನಾವು ಎಲ್ಲರೂ ಸೇರಿಕೊಂಡು ಈ ದೇಶದ ಜನರನ್ನು ಮುಂದಕ್ಕೆ ತರಲು ಪ್ರಯತ್ನ ಮಾಡೋಣ. ನೆನ್ನೆಯಿಂದ ರೈತರನ್ನು ಮುಂದಕ್ಕೆ ತರಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಬಹಳ ಜನರು ರೈತರ ಬಗ್ಗೆ ಮಾತನಾಡಿದರು ನಮ್ಮ ಅಂಗಡಿಯಲ್ಲಿ ನಾವು ಗುಳ, ಗುದ್ದಲಿ ಮುಂತಾದ ಸಾಮಾನುಗಳನ್ನು ಮಾರಾಟ ಮಾಡುತ್ತೇವೆ. ಕೆಲವರಿಗೆ ನೇಗಿಲು ಹೇಗಿರುತ್ತದೆಂಬುದು ಗೊತ್ತಿರುವುದಿಲ್ಲ. ಆದರೂ ರೈತರ ಬಗ್ಗೆ ಮಾತನಾಡುತ್ತಾರೆ. ಒಂದು ಎಕರೆಗೆ ಎಷ್ಟು ಗೊಬ್ಬರ ಬೇಕಾಗುತ್ತದೆಂಬುದು ಗೊತ್ತಿರುವುದಿಲ್ಲ, ಆದರೂ ಕೆಲವರು ರೈತರ ಬಗ್ಗೆ ಗಲಾಟೆ ಮಾಡಿದರು ಮತ್ತು ಮಾತನಾಡಿದರು. ಒಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ರೈತರ ಬೇಡಿಕೆಗಳಿಗೆಲ್ಲಾ ಪರಿಹಾರವನ್ನು ದೊರಕಿಸಿಕೊಡುವುದಾಗಿ ಹೇಳಿದ್ದಾರೆ ಅವರ ನಾಯಕತ್ವದಲ್ಲಿ ನಮಗೆ ನಂಬಿಕೆ ಇದೆ. ಈ ವಿಚಾರದಲ್ಲಿ ನಾವೆಲ್ಲರೂ ಅವರಿಗೆ ಬೆಂಬಲವಾಗಿದ್ದೇವೆ. ಈ ದೇಶವನ್ನು ಇನ್ನೂ ಪ್ರಗತಿಪರವಾಗಿ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕಾಗಿದೆ. ಇದು ನಮ್ಮ ಕರ್ತವ್ಯವಾಗಿದೆ. ಮುಖ್ಯವಾಗಿ ಹರಜನರ ಉದ್ಧಾರ ಮಾಡಲು ಮಾನ್ಯ ಬಸವಲಿಂಗಪ್ಪನವರು ಮಾನ್ಯ ಪಟೇಲ್ ಅವರು ಹಾಗೂ ನಾವೆಲ್ಲರೂ ಸೇರಿಕೊಂಡು ಕೆಲಸ ಮಾಡೋಣ, ಅವರನ್ನು ಮುಂದಕ್ಕೆ ತರಲು ಪ್ರಯತ್ನ ಮಾಡೋಣ ಎಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಮತ್ತೆ ಅವರು ಧೈರ್ಯ ತೆಗೆದುಕೊಂಡು ೪೩ ಕಾರ್ಪೋರೇಷನ್ಸ್‌ಗಳನ್ನೂ ವಜಾ ಮಾಡಿದರು, ನಾವು ಈ ೪೩ ಕಾರ್ಪೊರೇಷನ್ಸ್‌ಗಳ ಹೆಸರೇ ಕೇಳಿರಲಿಲ್ಲ. ಅವರುಗಳಿಗೆ ಒಂದು ಸ್ಥಾನ ಕಲ್ಪಿಸುವ ಒಂದು ದೃಷ್ಟಿಯಿಂದ ಹಿಂದಿನವರು ಮಾಡಿದ್ದರು. ಅಂಥಾದ್ದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಬಹಳ ಧೈರ್ಯ ಮಾಡಿ ವಜಾ ಮಾಡಿದರು.

ಇನ್ನು ಅದೇ ರೀತಿಯಾಗಿ ರಿಮೂವಲ್ ಆಫ್ ಡ್ರೈ ಡೇ ಅನ್ನು ಇವರು ಬಂದ ಮೊದಲನೇ ದಿವಸವೇ ತೆಗೆದುಹಾಕಿದರು. ಈ ವಿಚಾರ ಮಾನ್ಯ ಮುಖ್ಯಮಂತ್ರಿಯವರಿಗೂ ಗೊತ್ತಿದೆ, ಮಾನ್ಯ ಜೆ. ಹೆಚ್. ಪಟೇಲರಿಗೂ ಚೆನ್ನಾಗಿ ಗೊತ್ತಿದೆ.

ಶ್ರೀ ಜೆ. ಹೆಚ್. ಪಟೇಲ್.—ತಮಗೆ ಒಂದು ವಿಷಯ ಹೇಳಬೇಕಾದರೆ ಒಬ್ಬರು ಸ್ವಾಮಿಗಳು ಇದ್ದರಂತೆ ಅವರ ಜೊತೆಯಲ್ಲಿ ಅವರ ಶಿಷ್ಯನನ್ನು ಸಹ ಕರೆದುಕೊಂಡು ಕುಡಿಯುತ್ತಾ ಇದ್ದರಂತೆ. ಒಂದು ದಿವಸ ಆ ಶಿಷ್ಯನನ್ನು ಅವರು, ಈಗ ನೀನು ಕುಡಿಯುವುದನ್ನು ಬಿಟ್ಟಿದ್ದೀಯಾ ಎಂದು ಕೇಳಿದರಂತೆ ಅದಕ್ಕೆ ಅವನು ಏನು ಹೇಳಿದ ಎಂದರೆ ಹೋದ ಸಾರಿ ನಿಮ್ಮ ಜೊತೆಯಲ್ಲಿ ಕುಡಿದದ್ದೇ ವಿನಹ ಇದುವರೆಗೂ ನಾನು ಕುಡಿದಿಲ್ಲ ಎಂದು ಹೇಳಿದನಂತೆ.

ಶ್ರೀ ಘಟ್ಟಿ ಚಂದ್ರಶೇಖರ್.—ಮಾನ್ಯ ಸದಸ್ಯರೂ ಕೂಡ ನನ್ನ ಸ್ನೇಹಿತರೆ, ಸಾಯಂಕಾಲವಾದರೆ ಸರಿ ನನಗೆ ಫೋನ್ ಮಾಡುವರು. ನನಗೆ ಅವರ ವಿಷಯ ಚೆನ್ನಾಗಿ ಗೊತ್ತಿದೆ.

ಇನ್ನು ವರ್ಗಾವರ್ಗಿ ವಿಚಾರ ಹೇಳಬೇಕಾದರೆ ಈ ವಿಷಯವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನೂ ಅನೇಕ ಜನ ಸದಸ್ಯರು ಹೇಳಿದ್ದಾರೆ. ಈ ಟ್ರಾನ್ಸ್‌ಫರ್ ಬಗ್ಗೆ ಅಧಿಕಾರಿಗಳಿಗೆ ಒಂದು ರೀತಿ ಹಿಂಸೆಯಾಗಿ ಬಿಡುತ್ತದೆ. ಇದನ್ನು ಇವರು ಸ್ಟೇ ಮಾಡಿದರು. ಈ ವರ್ಗಾವಣೆ ಬಗ್ಗೆ ಶ್ರೀಮಾನ್ ಗುಂಡೂರಾಯರು ಧೈರ್ಯ ಮಾಡಿ ಒಂದು ನಿಲುವನ್ನು ತೆಗೆದುಕೊಂಡರು. ಈ ಸಂದರ್ಭದಲ್ಲಿ ತಮಗೆ ಒಂದು ಉದಾಹರಣೆ ಹೇಳುತ್ತೇನೆ. ಬ್ರಿಟಿಷರ ಕಾಲದಲ್ಲಿ ಅವರು ಯಾವ ರೀತಿ ಆಡಳಿತವನ್ನು ನಡೆಸುತ್ತಾ ಇದ್ದರು ಎನ್ನುವುದಕ್ಕೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ

"CALLOUS & CORRUPT IN POLICE & CIVIL SERVICE"

"Transfers and postings to circumnavigate delicate situations and to favour someone involved in irregularities or make hostile manoeuvres on some one else, have acquired the sanctity of official precedents. In this background, good and honest officers become irrelevant and de facto become 'good for nothing' officers."

I will quote another incident-

"When Mr.H.V.R. Iyengar was the Home Secretary of the Union Government, a group of young I.P.S. probationers were having their picnic in Agra. One of them made some youthful gestures of romantic inclinations to a girl. The father of the girl cleverly menaged to get the identity card of the young probationer and called on Mr. Iyengar personally and asked him if that was the calibre of our future officers who were still in Academy. As the boy had not yet been confirmed, the Home Department sent a confidential communi cation to the probationer intimating his discharge from the Government service."

ಈ ರೀತಿಯಾಗಿ ಯಾವ ದೊಡ್ಡ ಅಧಿಕಾರಿಯಾದರೂ ಕೂಡ ಅವನ ಮೇಲೆ ಅವರು ಕ್ರಮ ತೆಗೆದುಕೊಳ್ಳುವರು; ಈ ಕಾಲದಲ್ಲಿ ಆ ರೀತಿ ಮಾಡುವುದು ಕಷ್ಟ. ಒಂದುವೇಳೆ ಏನಾದರೂ ಅಂಥಾವನ ಮೇಲೆ ಕ್ರಮ ತೆಗೆದುಕೊಂಡರೆ ಅವನು ಲಿಂಗಾಯಿತನಾಗಿದ್ದರೆ ಅವರ ಜಾತಿಯವರ ಎಂ.ಎಲ್.ಎ ಗಳನ್ನು ಕಟ್ಟಿಕೊಂಡು ಡಿಲಿಗೇಷನ್ ಬಂದುಬಿಡುತ್ತಾನೆ, ಆ ಅಧಿಕಾರಿ ಒಕ್ಕಲಿಗ ಆಗಿದ್ದರೆ ಆ ಜಾತಿ ಎಂ. ಎಲ್. ಎ. ಅವರನ್ನು ಕಟ್ಟಿಕೊಂಡು ಡಿಲಿಗೇಷನ್ ಬಂದುಬಿಡುತ್ತಾನೆ. ಆಗ ಅವರು ನಮ್ಮ ನಮ್ಮ ಜಾತಿ ಎಂದು ತಲೆಬಾಗಬೇಕಾಗುತ್ತದೆ. ಈಗ ನಮ್ಮ ಶ್ರೀಮಾನ್ ಗುಂಡೂರಾಯರು ಇದ್ಯಾವುದಕ್ಕೂ ಕೂಡ ಹೆದರುವುದಿಲ್ಲ ಎನ್ನುವುದು ಗೊತ್ತು. ಡಿಸಿಡೆಂಟ್ಸ್ ೨೭ ಜನ ಅಲ್ಲ, ೧೨೭ ಜನ ಇದ್ದರೂ ಕೂಡ ಶ್ರೀಮತಿ ಇಂದಿರಾಗಾಂಧಿಯವರ ಬೆಂಬಲ ಇರುವವರಿಗೂ ಕೂಡ ಅವರು ಅಂಜುವುದಿಲ್ಲ ಅವರು ಯಾವ ಕ್ರಮವನ್ನು ತೆಗೆದುಕೊಳ್ಳಬೇಕಾದರೂ ಕೂಡ ಧೈರ್ಯವಾಗಿ ತೆಗೆದುಕೊಳ್ಳುತ್ತಾರೆ. ಅದೇ ರೀತಿಯಾಗಿ ರಕ್ಷಣೆ ಮಾಡಬೇಕಾದ್ದೂ ಕೂಡ ನಮ್ಮ ಒಂದು ಕರ್ತವ್ಯ. ಈ ಬಗ್ಗೆ ತಮಗೆ ಇನ್ನೊಂದು ಉದಾಹರಣೆ ಹೇಳುತ್ತೇನೆ ಅದೇನೆಂದರೆ

"MEMORIES OF THE MCS

"Mr. Madhava Rao, as a young Superintendent of Police in Chitradurga he was called upon to contain an agitation launched against the princely administration by a Congress politician called S. Nijalingappa.

Mr. Rao feels the training the MCS gave to its members was more all round than the ICS. Mr. Rao, for instance, had also worked in the police department and it was as a young Superintendent of Police in Chitradurga that he was called upon to contain a Bardoli-type satyagraha launched against the princely administration by a Congress Leader called S. Nijalingappa. Mr, Rao nipped it in the bud without firing a shot or wielding a baton, after getting hold of all the secret documents pertaining to the plan. The venquished Congress men raised a hue and cry and complained to Mahatma Gandhi of oppression against the people by the princely Govt. An angered Maharaja invited Gandhiji to see the things for himself. Gandhiji deputed Mehadev Desai, a seasoned lawyer and a belanced judge of men and matters. Mr. Desai though convinced that the complaint against the officials was all wrong however favoured his party-men stating that there must be some truth in the complaint, Sir Mirza Ismail, Dewan set up the Nageswara Iyer Committee, which observed the officials of all the charges.

ಹೀಗೆ ಅವರು ರಕ್ಷಣೆ ಕೊಡುತ್ತಾ ಇದ್ದರು. ಇನ್ನೊಂದು ಮುಖ್ಯ ವಿಷಯ ಏನೆಂದರೆ ವಿರೋಧ ಪಕ್ಷದವರು ಈವೊತ್ತು ಏನು ಗಲಾಟೆ ಮಾಡಿದರು. ಅದಕ್ಕೆ ನಮ್ಮ ಮುಖ್ಯ ಮಂತ್ರಿಯವರು ತಲೆಬಾಗಿ ನಿಷ್ಠಾವಂತ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ೧೯೭೭ನೇ ಇಸವಿಯಿಂದಲೂ ಕೂಡ ಈ ಸಭೆಯಲ್ಲಿ ವರ್ಗಾವರ್ಗಿ ಬಗ್ಗೆ ಹೇಳಿದ್ದೇನೆ. ಈ ಬಗ್ಗೆ ಎಂ.ಎಲ್.ಎ.ಗಳು ಕೈ ಹಾಕುವುದು ಸರಿಯಲ್ಲ. ಎಂ, ಎಲ್.ಎಗಳು ಮಂತ್ರಿಗಳ ಹತ್ತಿರ ಹೋದರೆ ಯಾವಾಗಲೂ ಬರೇ ವರ್ಗಾವರ್ಗಿ ವಿಚಾರ ಹೇಳುತ್ತಾರೇ ವಿನಾ ಬೇರೆ ಇನ್ಯಾವ ವಿಚಾರವನ್ನು ಹೇಳುವುದಿಲ್ಲ ಇತ್ತೀಚೆಗೆ ನಮ್ಮ ಆರೋಗ್ಯ ಇಲಾಖೆಯಲ್ಲಿ ಒಂದು ಸಾವಿರ ಜನ ಡಾಕ್ಟರ್ ಅನ್ನು ವರ್ಗಮಾಡಿದರು. ಈ ಬಗ್ಗೆ ಆ ಕಡೆಯವರು ಒಂದು ಕಾಲಿಂಗ್ ಅಟೆನ್‌ಷನ್ ಸಹ ಕೊಟ್ಟಿದ್ದಾರೆ. ಇದುವರೆಗೆ ಯಾರೂ ಆ ಕೆಲಸ ಮಾಡಿರಲಿಲ್ಲಾ. ಮಾನ್ಯ ಆರೋಗ್ಯ ಮಂತ್ರಿಯವರು ಸಿಲ್ಕ್ ವ್ಯಾಪಾರಸ್ಥರು, ಆದುದರಿಂದ ಅವರು ಯಾವಾಗಲೂ ಸಿಲ್ಕ್ ತರಹವೇ ಮಾತನಾಡುತ್ತಾರೆ, ಅವರು ಜಾಯಿಂಟ್ ಡೈರೆಕ್ಟರಿಗೆ ಹೋಲ್‌ಸೇಲ್ ಆಗಿ ವರ್ಗ ಮಾಡಿ ಎಂದು ಹೇಳಿದರು. ನಂತರ ಅದನ್ನು ಕ್ಯಾನ್ಸಲ್ ಏನೇನೋ ಮಾಡಿದರು ಆಗಲಿಲ್ಲಾ. ಕೊನೆಗೆ ೧೫ ದಿವಸ ಕುಳಿತುಕೊಂಡು ಒಂದು ಸಾವಿರ ಜನ ಡಾಕ್ಟರ್ ಅನ್ನು ವರ್ಗ ಮಾಡಿಬಿಟ್ಟರು. ಹೀಗಿದ್ದರೂ ಕೂಡ ಬಹಳ ಜನ ಡಾಕ್ಟರ್ಸ್ ಅದನ್ನು ಕ್ಯಾನ್ಸಲ್ ಮಾಡಿಸಿಕೊಳ್ಳುವುದಕ್ಕೆ ೬ ತಿಂಗಳು ೧ ವರ್ಷ ಬೆಂಗಳೂರಿನಲ್ಲೇ ಇದ್ದರು. ಒಬ್ಬರು ಎಂ.ಎಲ್ ಎ. ಶ್ರೀ ಅಪ್ಪಾಜಿ, ಅವರ ಹೆಂಡತಿ ಡಾಕ್ಟರ್ ಅವರನ್ನು ತೆಗೆದುಕೊಂಡು ಹೋಗಿ ಮೊಳಕಾಲ್ಮೂರಿಗೆ ಹಾಕಿದ್ದಾರೆ. ಹಾಗೆ ಇನ್ನೊಬ್ಬರು ಎಂ.ಎಲ್.ಎ ಪ್ರಮೀಳ ಅವರ ತಂಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದವರನ್ನು ತೆಗೆದುಕೊಂಡು ಹೋಗಿ ಎಲ್ಲೋ ದೂರ ಹಾಕಿಬಿಟ್ಟಿದ್ದಾರೆ. ಮೊದಲೇ ಒಂದೇ ಕಡೆ ಗಂಡ ಹೆಂಡತಿ ಇದ್ದರೆ ಅನುಮಾನ ಬರುವಾಗ, ಅವರನ್ನು ಬೇರೆ ಬೇರೆ ಕಡೆ ಹಾಕಿಬಿಟ್ಟರೆ ಗಂಡ ಒಂದು ಕಡೆ ಇದ್ದರೆ, ಹೆಂಡತಿ ಒಂದು ಕಡೆ ಇದ್ದರೆ ಅವರು ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವೇ, ಅನುಮಾನ ಬರುತ್ತದೆ. ಆದುದರಿಂದ ಈ ಬಗ್ಗೆ ತಾವು

ಸ್ವಲ್ಪ ಗಮನಕೊಡಬೇಕು ಮತ್ತು ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಖಡ್ಡಾಯವಾದ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಹಿಂದೆ ಶ್ರೀಮಾನ್ ಚೆನ್ನಬಸಪ್ಪ ನವರು ಆರೋಗ್ಯ ಮಂತ್ರಿಗಳಾಗಿದ್ದರು. ಅವರ ಆಫೀಸಿಗೆ ವರ್ಗಾವರ್ಗಿಗೆ ಒಳ್ಳೆ ಕರಡಿ ಇದ್ದಹಾಗೆ ಬಹಳ ಜನಗಳು ಬರುತ್ತಿದ್ದರು. ಆಗ ಅವರು ಏನು ಹೇಳಿದರು ಎಂದರೆ ಹೀಗೆ ಬರುತ್ತಾ ಇದ್ದಾರಲ್ಲಾ ಇವರು ಯಾರು ಎಂದು ಕೇಳಿದ್ದಕ್ಕೆ ಇದೇ ಒಂದು ಜಾತಿ, ಅವರು ಈ ವರ್ಗಾವಣೆಗೆ ಬರುತ್ತಾರೆ ಎಂದು ಹೇಳಿದರು. ಅಲ್ಲದೆ ಅವರನ್ನು ಕಂಡರೆ ಎಲ್ಲರೂ ಹೆದರುತ್ತಿದ್ದರು. ಹೀಗೆ ಮಾನ್ಯ ಮುಖ್ಯಮಂತ್ರಿಯವರು ಕೂಡ ಒಂದು ಬಿಗಿಯಾದ ಕ್ರಮ ಈ ಬಗ್ಗೆ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ನಾನು ಹೇಳು ವುದೇನೆಂದರೆ ಇವರು ಟ್ರಾನ್ಸ್‌ಫರ್ ಮಾಡಲಿ, ಬೇಡ ಅನ್ನುವುದಿಲ್ಲ. ಆದರೆ ಆ ವರ್ಗಾವಣೆಗೆ ಒಂದು ಕಾಲ ನಿಗದಿಯಾಗಿರಬೇಕು ೩ ವರ್ಷದಿಂದಲೂ ಒಂದೇ ಜಾಗದಲ್ಲಿ ಯಾರ್ಯಾರು ಇದ್ದಾರೋ ಅವರನ್ನು ವರ್ಗ ಮಾಡಲಿ ಬೇಡ ಅನ್ನುವುದಿಲ್ಲ. ಇದರಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಏನೆಂದರೆ ಹೊಸದಾಗಿ ಮಂತ್ರಿಗಳಾಗಿರುವವರಿಗೆ ವಿಚಾರ ಸರಿಯಾಗಿ ಗೊತ್ತಿರುವುದಿಲ್ಲ. ಮಾನ್ಯ ಬಿ. ಬಸವಲಿಂಗಪ್ಪನವರು ಇದ್ದಾರೆ ಅಂಥವರಾದರೆ ಅವರು ಬಹಳ ವರ್ಷ ಇದ್ದವರು ಅವರಿಗೆ ಇವೆಲ್ಲಾ ಚೆನ್ನಾಗಿ ಗೊತ್ತಿರುತ್ತದೆ. ಏನೇನು ಮಾಡಬೇಕೋ ಅವೆಲ್ಲಾ ಗೊತ್ತಿದೆ. ಬಹಳ ವರ್ಷಗಳಿಂದ ಆ ಮಂತ್ರಿ ಈ ಮಂತ್ರಿಗಳ ಹತ್ತಿರ ಕೆಲಸ ಮಾಡಿಕೊಂಡು ಬಂದಂಥ ಪಿ.ಎ.ಗಳು ಏನು ಇದ್ದಾರೆ, ಅವರು ಅನೇಕ ಮಂತ್ರಿಗಳನ್ನು ನೋಡಿರುವುದರಿಂದ ಹೊಸ ಮಂತ್ರಿ ಯಾರಾದರೂ ಬಂದರೆ ಅವರ ಹತ್ತಿರ ಹೋಗಿ ಇವರು ಸೇರಿಕೊಂಡು ಬಿಟ್ಟು ಅವರು ಯಾವುದಾದರೂ ಒಂದು ಮಾತು ಹೇಳಿದರು ಎಂದರೆ ಇವರು ಅದರ ಜೊತೆಗೆ ಇನ್ನು ೧೦ ಮಾತುಗಳನ್ನು ಸೇರಿಸುತ್ತಾರೆ. ಇನ್ನು ಶ್ರೀಮಾನ್ ಆರ್ಮುಗಂ ರವರು ಒಂದು ಮಾತು ಯಾವಾಗಲೂ ಹೇಳುತ್ತಾರೆ. ಏನೆಂದರೆ ಐ.ಎ.ಎಸ್. ಆಫೀಸರ್ಸ್ ಏನು ಇದ್ದಾರೆ ಅವರಿಗೆ ಅವರು ಬ್ಯೂರೋಕ್ರಾಟ್ಸ್ ಎಂದು ಹೇಳುತ್ತಾರೆ. ಈ ಬ್ಯೂರೋಕ್ರಾಟ್ಸ್ ಪೀಪಲ್ ಹಿಂದೆ ಆಟೋಕ್ರಸಿ ಇದ್ದಾಗಲೂ ಇದ್ದರು, ಈಗ ಡೆಮಾಕ್ರಸಿಯಲ್ಲೂ ಕೂಡ ಇದ್ದಾರೆ ನಾವು ಆ ಕೆಲಸ ಬಿಟ್ಟು ಬೇರೆ ಕೆಲಸ ಮಾಡುತ್ತೇವೆ, ನಿಮಗೆ ಇನ್ನೊಂದು ಉದಾಹರಣೆ ಹೇಳಬೇಕಾದರೆ, ಈ ಸದಾರಮೆ ನಾಟಕದಲ್ಲಿ ಆ ರಾಜನಿಗೆ ಒಬ್ಬ ಶೆಟ್ಟಿ ಮಗಳ ಮೇಲೆ ಕಣ್ಣು ಬೀಳುತ್ತದೆ. ಆಗ ಅವನನ್ನು ಕರೆದು ನಿನ್ನ ಮಗಳನ್ನು ಮದುವೆ ಮಾಡಿಕೊಂಡು ಎಂದು ಕೇಳಿದಾಗ, ಆಗ ಅವನು ಏನು ಹೇಳುತ್ತಾನೆ ಎಂದರೆ ನಿನಗೆ ನನ್ನ ಮಗಳನ್ನು ಕೊಟ್ಟರೆ ಈ ಸ್ಥಾನ ಬಿಟ್ಟು ಹೋಗಬೇಕಾಗುತ್ತದೆ ಎಂದು ಹೇಳುತ್ತಾನೆ. ಅದರಂತೆ ಆ ರಾಜ ಅವಳನ್ನು ಮದುವೆ ಮಾಡಿಕೊಂಡು ಆ ರಾಜ್ಯ ಬಿಟ್ಟು ಹೊರಟು ಹೋಗುತ್ತಾನೆ. ಅವನು ಹೊರಟು ಹೋದ ಮೇಲೆ ಆ ರಾಜ್ಯ ಆ ಶೆಟ್ಟಿಯ ಕೈಗೆ ಸಿಕ್ಕುತ್ತದೆ ಅವನೇ ರಾಜನಾಗುತ್ತಾನೆ ಆಗ ಅಲ್ಲಿದ್ದ ಮಂತ್ರಿಯನ್ನು ಕರೆದು ನಿನಗೆ ಎಷ್ಟು ಸಂಬಳ ಕೊಡಬೇಕು ಎಂದು ಕೇಳುತ್ತಾನೆ. ಆಗ ಅವನು ನನಗೆ ೩ ಸಾವಿರ ಸಂಬಳ ಕೊಡಬೇಕು ಎಂದು ಕೇಳುತ್ತಾನೆ ಆಗ ಈ ರಾಜ ನಾನು ೩ ಸಾವಿರ ರೂಪಾಯಿ ಸಂಬಳ ಕೊಡುವುದಿಲ್ಲ. ೧೨½ ರೂಪಾಯಿ ಕೊಡುತ್ತೇನೆ ಇದ್ದರೆ ಇರು ಇಲ್ಲದಿದ್ದರೆ ಹೋಗು ಎಂದು ಹೇಳುತ್ತಾನೆ. ಹಾಗೆ ಒಂದು ನಿಷ್ಠೆಯಿಂದ ಸರಿಯಾದ ರೀತಿಯಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗಬೇಕು ಕುದುರೆ ಸವಾರನಿಗೆ ಕುದುರೆ ಸವಾರಿ ಹೇಗೆ ಮಾಡಬೇಕು ಎನ್ನುವುದು ಗೊತ್ತಿದೆ. ಈಗ ತಮಗೆ ಇನ್ನೊಂದು ಉದಾಹರಣೆ ಕೊಡುತ್ತೇನೆ.

"CRISIS OF CHARACTER"

Dr. Johnson says, "Promises and larger promises are the soul of advertisement." What has happended to "Garibi hatao ?" What has happened to 20-25 point programmes ?

Next the bureaucrats capitalists and landlords have been there at all times before independence and after but before independence, the bureaucrats were serving bosses who were by themselves literate, experienced in administration, competent and as such bureaucrats could not exploit their

bosses. And after independence, the bosses are incompetent politicians, ignorant and inexperienced in the art of administration and as such, the bureracrats can exploit the situation for their own benefit."

† SRI M. C. NANAIAH (Madikeri).—Mr. Chairman, Sir, it is my pleasure to welcome the demand and the amount that has been earmarked for Forest. In our country to-day 70 million hectares of land are there under forest and it constitues only 22% of the total area. As far as Karnataka is concerned, we are having hardly 33 lakh of hectares of forest and it constitutes 16% of the total forest. Sir, to-day the ecologists, environmental experts, the Government Officers and everybody are thinking that forest should be protected at any cost. As far as Karnataka is concerned, we have been seeing for the last 10 to 15 years erratic monsoon, ecological imbalance and upset in the environmental set up. This is primarily due to the destruction of forests along the western ghats. If this process is continued I am afraid a time may come when even Malnad areas like Coorg, South Kanara, Mangalore and other places will also become barren like Kolar and Bidar. Therefore it is my sincere appeal to the Chief Minister who is holding the portfolio to see that forests along with the western ghats should be scrupiously protected. I have drawn the attention of the Chief Minister through a letter in the month of March and I am very glad that the Chief Minister has taken certain active steps. The first step he has taken is to appoint a Special Squad to check the smuggling in Karnataka-Kerala Border.

Second thing is, payment of bonus of 75% to the persons who are protecting the sandal wood. We are all aware that sandal wood has got good market and lot of wood is being exported. So, the Government should pay the bonus at a higher rate to the persons who are having sandal wood trees. There is a provision for payment of bonus to the persons growing sandal wood on their own lands for several years. I very much request the Hon'ble Chief Minister to see that cent percent bonus is given to those people who are protecting the sandal wood trees personally and who are taking case to nurture sandal wood trees. This is one suggestion.

Another thing is, after the removal of rule 137, lot of rose wood trees are being exploited from unredeemable lands. On account of this nearly 75% of the rose wood is being sold in auction making for payment to those persons on whose lands the rose wood were there. In this process lot of rose wood trees are being exploited and the State is losing lot of revenue due to anctioning. I learnt that the Hon'ble Chief Minister in one of the Conferences made a statement

as far as beete Rose wood is concerned. There was no reference to the rose wood. I therefore request the Chief Minister to see that wherever rose wood trees are there, wherever these are in unredeemable lands. I request the Chief Minister to see that these trees are not cut in an unreasonable manner. This beautiful timber should not be exploited in the forest. As such I request the Hon'ble Chief Minister to bring an amendment to the Act. I also appeal to the Government to see that 75% of the rose wood is being sold through the departmental depots so that the State Government could earn substantial revenue.

Thirdly, about protection of the forests. Sir, to-day we are having hardly 11% of evergreen forest in the State, More than seventy thou and acres of evergreen forests have been completely sub-merged due to Hydro-Electric Projects. The point is, when Kerala Government wanted to take up 'Silent Valley' project, it was expected that nearly 1,000 acres is going to be submerged. An estimate in this behalf was made by the Project Authority set up by the Government of India. According to the estimate this project has covered nearly 72,000 acres of forest land. From this one could imagine how we are losing evergreen forest in our State and as well in our country. Even our Prime Minister has said that we should not loose valuable evergreen forests in taking up this 'Silent Valley'. In view of this I request the Hon'ble Chief Minister to declare the entire western ghat from Coorg right upto the N.K. as reserved forests and thus save valuable forest resources going out of our State.

Fourthly, there are wood-based industries in our State. I request the hon'ble Member Sri B. B. Sayanak not to disturb the Chief Minister.

SRI B. B. SAYANAK.—Sir, I would like to seek a clarification from the Chair. In the Business Advisory Committee it was decided that since we have few hours to discuss the demands that are before the House we have agreed not to speak on the demand. At that stage Mr. Devegowda suggested Leaders of Opposition parties may be allowed to speak on these demands for about 3 hours and thereafter the Chief Minister may reply to the debate. Now, what has happened ? Members of each party are participating in the demand. Then, I would like to know what about us.

CHAIRMAN.—Is it because that hon'ble Member Sri Nanaiah pointed out you not to disturb the Chief Minister ?

SRI B. B. SAYANAK.—It is not for that, I am just asking the Chair when are we going to get our chance to speak on the demand.

CHAIRMAN.—I will call you, afterwards, Don't worry.

SRI M. C. NANAIAH.—Sir, I was telling about the wood industries in Karnataka. I am making a very special appeal to the Chief Minister. The catchment area of the river Cauvery is 22,000 acres on one side and the catchment area of its tributaries is 9,000 acres. In all it is about 31,000 acres. On an average 16 wood-based industries are operating in this forest area and every year about 2½ lakh cubic ft. of timber is being removed. This agreement has been entered into with these industries on a long term basis. But at what rate ? I am specially appealing to the Chief Minister to protect this whole forest belt from these wood industries. These industries have been allowed to cut the timber. Some persons are already on the move to see that further timber is being allotted from these areas. Applications submitted by these persons are pending before the Government and it is under process. I request the Hon'ble Chief Minister to see that not even a single tree is allowed to be given to these industries. I also request him to treat the entire western Ghat starting from Bagamandala as a reserved forest. Every day in Karnataka 60 lakh Cu. ft. of timber is being removed by about 30 wood based industries. At what rate ? I am not blaming this Government. This has been going on over the last 10 years. The market price of the wood is Rs. 30 to 40 per Cu. ft., whereas the rate for wood that is being given to these industries is between Rs. 5 and 6 per Cu. ft. It is my firm conviction that no permission should be given hereafter no matter however high a person may be in the interest of keeping the ecological balance of the State. I hope the Hon'ble Chief Minister will bear this in mind and see that whatever small forests are there will be left over.

Another thing which pains me very much is the Harihar Polyfibers affair. This is one affair where the Government will be losing crores of rupees by the year 2001. The Government has given on lease basis in the year 1969 to exploit the Eucalyptus trees from all areas in the State for a period of 30 years. The original agreement was entered in 1971 and this agreement will be in operation till the year 2001. The current cost of eucalyptus according to the answer given to a question raised on 10th June 1980, is in the order of Rs. 212 per tonne of 81 Cft. This is the rate furnished by Karnataka Forest Plantations Corporation. But at what rate we are giving this eucalyptus to M/s Harihar Polyfibers? We are giving them at the rate of Rs. 24 per tonne of 81 cft. Now it has been revised to

Rs. 30. In view of this transaction what is the loss to the Government? When the question was answered on the floor of the House, probably the Chief Minister was not there. The answer was given by Hon'ble Finance Minister Sri Veerappa Moily. It was stated in the answer that it was difficult to assess the loss because of the indirect benefits accrued to the State like employment generated, Sales Tax, Excise Revenue are considerable. In that case what is the employment generated? About 1400 workers are employed from 1971 onwards. What is the loss to the Government on account of this? The net loss to the Government is of the order of Rs. 130 crores by 2001. According to the recent agreement entered in the year (G. O. No. FFC 187 FDP 79, dated 19th September 1979) 1979, which of course was by the previous Government, 1.5 lakh tonnes of eucalyptus wood shall be as per the existing agreement valid upto 31st December 1986 Then the net production loss on account of this transaction will be Rs. 26 crores. For 55,000 tonnes of eucalyptus wood, the charge is Rs. 65 per tonne from 22nd April 1979 to 22nd April 1984. The net production loss on this account will amount to Rs. 4 crores. From 23rd April 1984 to 31st December 1986 the charge per tonne is Rs. 150 for 55,000 tonnes. The net production loss will be about Rs. 1 crore during this period. Fourthly, the full quantity of 2,05,000 tonnes of eucalyptus wood to be charged is at a uniform rate of Rs. 150 per tonne from 1st January 1987 to 1st September 2001. The net loss in this will be about 17.40 crores. So the total production loss will be about 50 Crores. Taking into consideration the market value of the wood today, by 2001 the net loss will be about 130 Crores. At the time when the agreement was entered into, the cost of production of eucalyptus was Rs. 56 per tonne. How did the Government agree to give for Rs. 24 per tonne? In the year 1979 when this agreement was revised the net cost was Rs 180. But it was agreed to be given at Rs. 65 per tonne. and 55,000 tonnes of excess quantity was given. I have got a copy of the agreement wherein ever 'subject to availability' clause is not there. They have stated in the agreement that Government would supply on assurance basis 1.5 lakh tonnes. Where are you going to get this wood? We are spending an enormous sum of Rs. 200 per tonne and we are supplying at the rate of Rs. 30. Is it worthwhile for the Government to do so? If the loss of 130 crores is avoided, that money could have been utilised for the Vijayanagar Steel Factory. I do not know why permission has been given to this Harihar Polyfiber Industry at such a huge loss to the Government? I request the Hon'ble Chief Minister to institute an impartial inquiry into the whole episode from 1970 onwards and find out how the officers have

misled the Government. This is a matter which has to be looked into very very seriously by the Government. I hope, the Government will certainly look into this matter and see that whatever damage is done is undone.

SRI V. M. GHADI.—Further it is learnt that the Government is going to give more forest areas to Messrs. Harihar Polyfibers and West-Coast Paper Mills on lease basis.

SRI M. C. NANAIAH.—That has already been done in the year 1979. A cursory glance at this agreement would indicate that our officers have done as if we are under the mercy of this Polyfiber factory, which is a concern of Birlas. Even to revise the agreement it should be done in consultation with them. When there is a loss of 130 crores and production loss of 50 crores, I once again urge that the Government should institute an inquiry into this whole episode. A legal question may arise and they may come forward and say that we have entered into this agreement and it is valid till the year 2001. To avoid this, stop growing Eucalyptus at all so that it will be a contract impossibility of performance.

The primary concern of the Government should be to protect these forests. Forests are like giant percolation tanks storing rain water in their root system releasing it slowly into streams and rivers in the dry season when it is most needed. Deforestation dries up the vital source. If the Government of India and the State Governments were to construct tanks to store so much of water *i.e.*, equivalent to what even the existing forest area stores (stated to be about 20% of the total land area) it would cost 40,000 Crores. I would therefore request the Chief Minister to look into this matter very seriously and see that something is done, taking into consideration the fact that forests are of immense value to the economy of the nation.

2-00 P.M.

The roots of these trees will have the capacity of storing water, which otherwise cost the Government nearly Rs. 40 thousand crores. Therefore, I appeal to the Chief Minister to see that the Western Ghats Forests are protected. Further, also I request that the allotment of timber to any industry for these forests should be stopped indiscriminately and an inquiry should be ordered in respect of these transactions. Finally, as far as my district is concerned, in Jammamalai and Genimalai please stop giving further permission for cutting timber from these forests. I will be too happy, if the Hon. Chief Minister thinks of not giving permission to remove timber from these forests at least in future. As far as

P.W.D. is concerned I have already written a letter to the Chief Minister regarding the works to be taken up which costs Rs. 101 lakhs. I request the Chief Minister once again to see that these works are also taken up in order to protect the forest wealth.

† SRI B. B. SAYANAK.—(Belgaum) Mr. Chairman Sir, I rise to speak on so many demands of the Chief Minister which are placed before the House today. Sir, at the out set, I strongly condemn the police attrocities and firings took place at Nargund, Navalgund, Muddebihal and Gangavathi. My friends were telling that I am too late in expressing my my sympathies and condemning the incidents When there was a firing on 21st, I condemned that incident the very next day. If my friends are saying that it is to late, I can't understand what they mean by it. When there was a discussion on that subject in the House Sri S. R. Bommai has said that a Committee of this House must be formed to go into those incidents. But the Chief Minister has not agreed. He has gone to Navalgund and Nargund the next day to visit the affected areas. At the same time, the Members of the Opposition have also gone but they have not mentioned my name in the list. But now they are telling that I am too late. Do they think that I am a slave to be blamed by them and do they think that I have not got any party to represent ? I am an independent Member and I will remain as independent and nobody should teach me what to do and where to go and what to do. I also come from an agriculturists' family. The prices of fertilisers have gone up; I have already demanded that the prices of these commodities should be reduced. The price of the fertiliser has gone upto Rs 2000/- now Therefore, I requested the Chief Minister to go to discuss this with the Prime Minister and other concerned Ministers and see that the price of the fertiliser is reduced. He has assured me on the floor of the House that he would be going to Delhi and discuss the same with the Prime Minister and other concerned Ministers. My friends here have said about the attrocities that are being committed by the Police I had bitter experience of these attrocities of the Police. Ever since I started agitation regarding the Maharashtra and Karnataka border dispute, I know how these police people would behave and deal with the people. I have my self been a victim of the police attrocities several times. In 1973, when D. Devaraj Urs Ministry was there, there was a peaceful procession at Belgaum by my party. After submitting a memorandum to the Divisional Commisioner, I was coming back to my residenee. On the way the Dy. Superintendent of Police and the Sub-Inspector encircled me and severelly beat me and fractured my hand. Because of that my hand was in plaster for

so many days. When I came to the House I raised the same issue and there was a big agitation. But Sri. Devaraj Urs's Government suspended me from attending the sessions. This is the way in which they treated us here, and also the M E S party. At that time, a man aged about 80 years was arrested. He was a freedom fighter of Belgaum Sri Baburao Takoor was the editor of 'Tharun Bharatha'. He was a colleague of Sri. Morarji Desai. He was in jail along with Sri. Desai at Nasik. Such a noble freedom fighter was taken into custody, simply because he was working for the Maharashtra border dispute. During that period, one Sri. Louise, the police officer entered the house of agriculturists and tenants and beat the ladies also. If the inmates took objection to the entry of Police into their houses, the police people used to commit further atrocities on them. Some Members of this House used to tell that your Sayanak, is speaking about Karnataka-Maharashtra border dispute always and nothing else. That was the attitude of the whole House excluding M E S Members. These are all our bad experiences. I want to ask the then Chief Minister and the present Leader of the Opposition whether these things are correct In the year 1973, when two persons died in the firing did they set up any judicial enquiry ? Sri. Urs did not set up any judicial enquiry. I pleaded with the Chief Minister for a discussion of this problem. We have discussed this problem in the House fornearly 2½ hours. During the course of the discussion the Chief Minister has said, that let there be tranquility and then he would declare his decis on At this we said that we would not be in the House for another ten days. There after, hon. Sri. H. D. Deve Gowda and other hon. members suggested that the Chief Minister should announce the decision of the Govt on the 31st The next day there was an understanding that the Chief Minister would make a statement and there would be no other speeches by hon. members. But we devoted that whole day but also the evening of Saturday to discuss the same problem. I do not blame any one for this. But on Monday what happened ? There are so many important Demands placed by of the Chief Minister. He has said that he would announce the decision about holding a judicial enquiry. I am of the opinion that he is having an open mind regarding holding of an impartial enquiry. Regarding compensation also, he has said that whatever suggestions the hon. members may, give, he would fulfill them. When I say this let not hon, members think that I am patting or praising the Chief Minister. Whatever he said, we have accepted. and still we are consuming the precious hours of this House. For what purpose have We come here ? Today the Demands will have to be put to guillotine as we have to complete them today.

There fore what is the use of our coming and sitting. unless we contribute our mite in the House. We have to give suggestions to the Government and where they have gone wrong we have to criticise the Government. But there is no sufficient time for us.

SRI K. B. SHIVIAH.—He is favourable to the Chief Minister.

SRI B. B. SAYANAK.—It is uncharitable on the part of the Hon. Member to say that I am not favourable to the Chief Minister. Even when Urs Ministry was there, I used to support the Port folio held by the Present Chief Minister Why don't you say that I am favourable to then Chief Minister also. I am always consistent and I know what is good and what is bad.

SRI MALLUR ANANDA RAO.—Sri Sayanak has charged the apposition that by sitting 'Dharna' we have taken much of the time of the House. If we look into the records, we could see that Sri. Sayanak and his colleagues have taken much of the time by doing 'Dharna. and other protests like walk outs etc., in the House.

SRI B. B. SAYANAK.—If my friends take out the records, the "truth will be comeout When Sri. H D. Deve Go da was the leader of the opposition, we have supported him and we had staged ,Dharna' Then when urs Government was in power, they suspended us for the entire session. But Sri Gundu Rao has not done what Sri. Urs Government had done. On the last day of the sessiion the suspension order was revoked This was the attitude of the Devaraj Urs Government. Now, I am speaking on behalf of the opposition as an independent Member.

Regarding Forest I want to make a few suggestions. We had nearly 18 percent forest. But now it has come down to 14 peecent. Therefore it is high time that the Govt. should see to it and maintain this 18 percent forest in the State. Further, the Govt. have given some forest area to some freedom fighters in my taluk. Nearly 90 acres of land have been given to one Sri Channappa Wali, a freedom fighter. But he has not cultivated that land. He has removed all the trees and after 10 years, he has sold the land to some Missionary people. Similarly, some lands were given to Smt. Champabai Bogie who was the ex M. L. A She has also not cultivated those lands; on the other hand she has also sold the land to Missionary people. If there is a need for those people lands should be given. Otherwise, what is the use of giving such valuable lands to them ? There is a Land grant Committee and they are giving lands to so many people. But those people are not cultivating those lands; they have remained fallow. You must take possession of such lands and give them to the people who are in need of such lands.

Regarding excise, now you are getting more money from excise. But it is not a good sign according to me. We are talking about the upliftment of the downtrodden and weaker sections of the society, But because of opening of such liquor shops, only poor people go there and consume liquors in large numbers, and thus several poor families have been ruined. They are leading the worst life because of these liquor shops. If you go to any house of these people; you can see the miserable conditions of these people. Actually, the children and the wives ,of those poor people will be starving without food. I have said this several times. For example in my area, there is one Chammar colony near Kaktive. Inside that colony, there is a liquor shop from where these people consume arrack and liquor regularly. You have said that wherever these is backwar class people and labourers such liquor shops should not be permitted There is also a place called Chawadgalli-Dorwada, there is a Shani. temple. Near that, there is a wine shops which sells all types of liquors including foreign liquors. Therefore, I request the Government to stop these things immediately.

Regarding de-natured spirit, you are not giving it to carpenters. But you are giving 3000 or 4000 liters to people who are selling this to people who manufacture illicit liquor. With this kind of business they are making huge profit. Therefore, I request the Government to reduce the quota of 4,000 liters to one thousand while giving this spirit. Another point with regard to the issuing of licences., needs to examined Who is the authority to give licence? At present the Deputy Commissioner is giving licences. Please don't give such powers to the Deputy Commissioner, because, I know so many instances, where the Deputy Commissioner, will be under the clutches of this Superintendent of Excise. They are supplying brandy and whisky to them and get the licenses, according to the whims and fancies of the Superintendent of Excise. This should be put an end to.

Then coming to industries, I bring to the notice of the Government the strike in the Dandeli paper Mills which is there for the last there months. Because of this, there is a loss of Rs. three crores to the Central Government as well as to the State Government. Similarly, there is strike in Bagalkot cement factory. There also the strike is going on for more than one month. What was the loss to the State and to the general publics. In Belgaum also strike is going on in the Alluminium Company since 29th April. There is a loss to the tune of one crore to the Central and also to the State Government. There are about 800 workers. What would be the

plight of these workers if such strike continues still further. Similarly, what will be the plight of the workers of power looms as nearly 20,000 power loom workers are on strike? They are on strike since three months. Therefore, I request the Government to take action to solve these problems in the interst of workers. If such a strike continues there will be a loss not only to the state but also to the entire nation. What is the production of alluminium now? The price of alluminium is rising day by day. Therefore, the Government must see that whenever there are strikes, they should be settled without any loss of time.

There is one factory in Belgaum where, if a worker absents himself for one day, his salary will be cut for three days. I have brought this matter to the notice of the then Labour Minister Sri R.S. Patil. But no action has been taken against them. So, I request Sri C. M. Ibrahim and our Chief Minister to look into this matter and see that such things do not take place in future.

(H. T. KRISHNAPPA in the Chair)

Further sir, there is rampant corruption in the Karnataka Electricity Board at Belgaum. It is the impression of Two lakhs of people of Belgaum. Even some four to five persons have been suspended on the charge of corruption. Therefore, I request the Government to make a thurough enquiry. Another thing sir, due to frequent interruptions in the supply of electricity, the people are practically fed up. I urge upon the Government to arrange for supply of full load of electricity and do justice to the people of Belgaum.

Lastly sir, let me say a few words about corruption in Government departments. There is not a single department which is above corruption. Everywhere there is corruption. The question is, how are they going to eradicate this corruption? The agriculturists are troubling MLAs because their work cannot be done without paying money to the officials. I request the Government to take some drastic action to eradicate corruption, if they are the real champion of the poor and downtrodden. With these words, let me thank the Chair and conclude.

ಶ್ರೀ ಬಿ.ವಿ. ಕಕ್ಕಿಲಾಯ (ವಿಠ್ಠಲ್).—ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಮುಖ್ಯಮಂತ್ರಿಯವರು ಮೂವತ್ನಾಲ್ಕು ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ನಾನು ಅವುಗಳೆಲ್ಲದರ ಬಗ್ಗೆ ಮಾತನಾಡುವುದು ಬಹಳ ಕಷ್ಟ. ಆದುದರಿಂದ, ಬಹಳ ಮುಖ್ಯವಾದ ಎರಡು ಮೂರು ವಿಚಾರಗಳಿಗೆ ಸಂಬಂಧಿಸಿದಂತೆ ಮಾತ್ರ ನಾನು ಮಾತನಾಡುತ್ತೇನೆ. ಹೀಗೆ ಮಾತನಾಡುವಾಗ ನಾವು ಸರ್ಕಾರದ ಧೋರಣೆ ಕುರಿತೂ ಸಹ ಮಾತನಾಡುವುದಕ್ಕೆ ಸಮಯವಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಮೊದಲನೆಯದಾಗಿ, ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಶ್ನೆ ನಮ್ಮ ಮುಂದಿದೆ. ಕೇಂದ್ರ ಸರ್ಕಾರದವರು ಇತ್ತೀಚೆಗೆ ೩೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿದ್ದಾರೆ ಎನ್ನುವುದನ್ನು ಪತ್ರಿಕೆಯಲ್ಲಿ ನಾನು ಓದಿದೆ. ಹಾಗೇನಾದರೂ ಕೇಂದ್ರದವರು ೩೦ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು ನಿಜವಾದರೆ ಖಂಡಿತವಾಗಿ ಕರ್ನಾಟಕ ಜನತೆಯ ಪರವಾಗಿ ನಾವು ಅವರಿಗೆ ಅಭಿನಂದನೆ ಸಲ್ಲಿಸಲೇಬೇಕು. ಇದರ ಬಗ್ಗೆ ಒಂದೆರಡು ವಿಷಯಗಳನ್ನು ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಕೇಂದ್ರದ ಈ ವರ್ಷದ ಆಯವ್ಯಯದಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ಕೇವಲ ೬೦ ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಅದನ್ನು ಬರೀ ಟೋಕನ್ ಗ್ರ್ಯಾಂಟ್ ಎಂದು ಇಡಲಾಗಿದೆಯೇ ಹೊರತು ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭ ಮಾಡುವಲ್ಲಿ ಹಣ ಒದಗಿಸಲಿಕ್ಕೆ ಕೇಂದ್ರ ಸರ್ಕಾರ ತೀರ್ಮಾನ ಮಾಡಿದೆ ಎನ್ನುವ ಉದ್ದೇಶವಲ್ಲ. ಬಡ್ಜೆಟ್ ಮಂಜೂರಾದ ಮೇಲೆ ಈ ಮಧ್ಯೆದಲ್ಲಿ ೩೦ ಕೋಟಿ ರೂಪಾಯಿಗಳನ್ನು, ಖರ್ಚು ತಗಲುವಂಥ ಕಾಮಗಾರಿಗಳಿಗಾಗಿ ಮಂಜೂರು ಮಾಡಿದ್ದಾರೆಂದು ಮಾತ್ರ ನನಗೆ ಪತ್ರಿಕೆಗಳ ಮೂಲಕ ತಿಳಿದು ಬಂದಿದೆ. ಆಯವ್ಯಯದಲ್ಲಿ ೬೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ, ಈ ಮಧ್ಯದಲ್ಲಿ ೩೦ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರೆ ನಾವು ಏನು ಕೆಲಸ ಮಾಡುವುದಕ್ಕಾಗುತ್ತದೆ? ಈಗ ನಾವು ಆಗಸ್ಟ್ ತಿಂಗಳಿಗೆ ಹೋಗುವವರಿದ್ದೇವೆ. ಈ ೩೦ ಕೋಟಿ ರೂಪಾಯಿಗಳನ್ನು ಮುಂದಿನ ಮಾರ್ಚಿ ೩೧ ರೊಳಗೆ ಖರ್ಚು ಮಾಡಿ, ವಿಜಯನಗರ ಉಕ್ಕಿನ ಕಾರ್ಖಾನೆಗೆ ತಳಹದಿಯನ್ನೂ ಕೂಡ ಹಾಕುವುದಕ್ಕಾಗುವುದಿಲ್ಲ ಎನ್ನುವುದು ನನ್ನ ಭಾವನೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಇನ್ನೊಂದು ವಿಚಾರ ಇದೆ. ಕೇಂದ್ರ ಸರ್ಕಾರದ ಮಾನ್ಯ ಅರ್ಥ ಸಚಿವರಾದ ಶ್ರೀ ವೆಂಕಟರಾಮನ್ ಅವರು ಲೋಕಸಭೆಯಲ್ಲಿ "A detailed project report of the proposed Vijayanagar Steel Plant at Hospet was before the Board of the Steel Authority of India for consideration." ಎಂದು ಹೇಳಿದರೆಂದು ೨೧ನೇ ತಾರೀಖಿನ "ಡೆಕ್ಕನ್ ಹೆರಾಲ್ಡ್" ಪತ್ರಿಕೆಯಲ್ಲಿ ವರದಿಯಾಗಿದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಆಗ ಇದು ಸುಮಾರು ೨೮ ಕೋಟಿ ರೂಪಾಯಿಗಳ ಯೋಜನೆ ಎಂದು ಅಂದಾಜು ಮಾಡಲಾಗಿತ್ತು. ಆದರೆ, ಬೆಲೆ ಏರಿಕೆಯಿಂದಾಗಿ ಈಗ ಇದಕ್ಕೆ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದಕ್ಕೆ ಈ ಸಾಲಿನಲ್ಲಿ ೩೦ ಕೋಟಿ ರೂಪಾಯಿಗಳನ್ನು ಒಂದುವೇಳೆ ಕೊಟ್ಟರೂ ಕೂಡ ಯಾವ ಭಾಗಕ್ಕೆ ಅದನ್ನು ಖರ್ಚು ಮಾಡುತ್ತಾರೆಂದು ಅರ್ಥವಾಗುವುದಿಲ್ಲ. ಈ ಯೋಜನೆಯ ಬ್ಲೂ ಪ್ರಿಂಟ್ ಇನ್ನೂ ತಯಾರಾಗಿಲ್ಲ. ಇದನ್ನು ತಯಾರು ಮಾಡಲಿಕ್ಕೆ ಕೇಂದ್ರ ಸರ್ಕಾರದ ಸಂಸ್ಥೆಯಾದ ಮೆಖಾನ್‌ಗೆ ವಹಿಸಲಾಗಿದೆಯೋ? ಅಥವಾ ಖಾಸಗಿಯವರಿಗೆ ವಹಿಸಲಾಗಿದೆಯೋ? ಅಥವಾ ವಿದೇಶಿಯರಿಗೆ ವಹಿಸಲಾಗಿದೆಯೋ? ಹಾಗಾದರೆ, ಯಾರಿಗೆ ವಹಿಸಿದ್ದೀರಿ? ಅದರ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. ಇನ್ನೂ ಯೋಜನೆಯ ವಿವರಗಳೇ ಪೂರ್ತಿ ತಯಾರಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ೩೦ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ ಎಂಬ ವಿಷಯ ಪತ್ರಿಕೆಗಳಲ್ಲಿ ಬಂದಿದೆ ಎಂದರೆ, ಇದನ್ನು ಯಾರದೋ ಕಣ್ಣಿಗೆ ಮಣ್ಣೆರಚುವುದಕ್ಕೆ ಮಾಡಿದ್ದಾರೆಂದು ಕಾಣುತ್ತದೆ. ಮಾನ್ಯ ವಿರೋಧ ಪಕ್ಷದವರು ಮತ್ತು ಕರ್ನಾಟಕದ ಜನತೆ ಪೂರ್ತ ಬೆಂಬಲ ಕೊಡುತ್ತಾರೆ. ನಮಗೆ ವಿಜಯನಗರ ಉಕ್ಕಿನ ಕಾರ್ಖಾನೆಯಾಗಲೇಬೇಕು. ಈ ವರ್ಷದಲ್ಲೇ ಇದಕ್ಕೆ ಸಾಕಷ್ಟು ಹಣ ಒದಗಿಸಿ, ಇದಕ್ಕೆ ಬೇಕಾದ ಪೂರ್ವಭಾವಿ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುವ ದಿಸೆಯಲ್ಲಿ ಮಾನ್ಯಮಂತ್ರಿಯವರು ಭರವಸೆ ಕೊಡುತ್ತಾರೆಂದು ನಾನು ನಂಬಿದ್ದೇನೆ. ಆದುದರಿಂದ, ಇದರ ಬಗ್ಗೆ ನಾನು ಹೆಚ್ಚು ವಿವರಗಳಿಗೆ ಹೋಗುವುದಿಲ್ಲ.

ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕುದುರೆಮುಖ ಕಬ್ಬಿಣದ ಅದಿರು ಯೋಜನೆ ನಡೆಯುತ್ತಿದೆ. ಇವತ್ತು ಅಲ್ಲಿ ಬಂಗಲೆಗಳನ್ನು ಮತ್ತು ಭವ್ಯವಾದ ಮನೆಗಳನ್ನು ಕಟ್ಟಿದ್ದಾರೆ ಇದನ್ನು ನೋಡಿದರೆ ನಮ್ಮ ದೇಶದಲ್ಲಿ ವರ್ಗಭೇದ ಮತ್ತು ಜಾತಿಭೇದ ಎಷ್ಟಿದೆ ಎನ್ನುವುದು ಗೊತ್ತಾಗುತ್ತದೆ ದೊಡ್ಡ ದೊಡ್ಡ ಬಂಗಲೆಗಳಲ್ಲಿ, ಹವಾ ನಿಯಂತ್ರಿತ ಕೊಠಡಿಗಳಲ್ಲಿ ಅಧಿಕಾರಿಗಳಿದ್ದರೆ ಕಾರ್ಮಿಕರಿಗೆ ಜೋಪಡಿಗಳನ್ನು ಹಾಕಿ ಕೊಡಲಾಗಿದೆ. ಯೋಜನಾ ಕೇಂದ್ರದಲ್ಲಿ ಇವುಗಳು ಶಾಶ್ವತವಾಗಿರಲೆಂದು ಮಾಡಲಾಗಿದೆ. ಈ ಯೋಜನೆಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇಲ್ಲಿ

ಉತ್ಪಾದಿಸಲಾಗುವ ಅದಿರಿನಲ್ಲಿ ಶೇಕಡ ೫೦ ರಷ್ಟನ್ನು ಇರಾನ್ ದೇಶದವರು ಕೊಂಡುಕೊಳ್ಳುವುದಕ್ಕಾಗು-ವುದಿಲ್ಲವೆಂದು ಹೇಳಿದ್ದಾರೆ. ಹಾಗಾದರೆ ಅದನ್ನೇನು ಮಾಡುತ್ತೀರಿ? ಯೋಜನೆ ಮಾಡಿದ್ದಾಯಿತು; ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾಯಿತು. ಅಲ್ಲಿ ಸಾವಿರಾರು ಜನ ಉದ್ಯೋಗಸ್ಥರಿದ್ದಾರೆ. ಇರಾನ್‌ನವರು ಕೊಂಡುಕೊಳ್ಳುವುದಿಲ್ಲವೆಂದರೆ ಇವರನ್ನೆಲ್ಲ ಮನೆಗೆ ಕಳುಹಿಸುತ್ತಾರೆ? ಅಲ್ಲಿ ಕಟ್ಟಿರತಕ್ಕ ಬಂಗಲೆಗಳನ್ನು ಬೀಳಿಸುತ್ತೀರಾ? ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ನಮ್ಮ ಸರ್ಕಾರದವರು ಚರ್ಚೆ ಮಾಡಬೇಕಾಗಿದೆ. ಮುಂಬಾಯಿಯಿಂದ ಮಂಗಳೂರಿಗೆ natural gas pipeline ತಂದು palaetisation plant ಮಾಡುತ್ತೀರಾ! ಸ್ಪಾಂಜ್ ಐರನ್ ತಯಾರು ಮಾಡುತ್ತೀರಾ? ನಿಸರ್ಗ ಸಂಪತ್ತು ಅಲ್ಲೇ ಉಳಿದಿದ್ದಿದ್ದರೆ ಚಿಂತೆ ಇರಲಿಲ್ಲ; ಮುಂದೆ ಬಳಸಬಹುದಾಗಿತ್ತು. ಆದರೆ, ಅದನ್ನು ಕೊರೆದು ತೆಗೆಯಲಿಕ್ಕೆ ಯೋಜನೆ ಮಾಡಿದ್ದಾಯಿತು. ಈಗ ತೆಗೆದು ಎಲ್ಲಿ ರಾಶಿ ಹಾಕುತ್ತೀರಿ? ಈ ಪ್ರಶ್ನೆ ನಮ್ಮನ್ನು ಬಹಳ ಗಾಢವಾಗಿ ಕಾಡುತ್ತಿದೆ. ಆದುದರಿಂದ. ಸಮಯ ಮೀರುವ ಮೊದಲು ಕೇಂದ್ರ ಸರ್ಕಾರದ ಜೊತೆಯಲ್ಲಿ ಈ ಬಗ್ಗೆ ವಿಚಾರ ಮಾಡಬೇಕಾಗಿದೆ. ಕುದುರೆಮುಖ ಯೋಜನೆಯಿಂದ ನಮ್ಮ ರಾಜ್ಯಕ್ಕೆ ಬಹಳಷ್ಟು ಪ್ರಯೋಜನವಿದೆ, ಈ ಯೋಜನೆಯಲ್ಲಿ ತೆಗೆಯುವ ಅದಿರನ್ನು ಉಕ್ಕಿನ ಕಾರ್ಖಾನೆಗಳಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು. ಇದರ ಬಗೆ ಯೋಜನಾ ಆಯೋಗದ ಮತ್ತು ಕೇಂದ್ರ ಸರ್ಕಾರದ ಜೊತೆಯಲ್ಲಿ ಗಂಭೀರವಾಗಿ ಚರ್ಚೆ ಮಾಡಬೇಕೆಂದು ಹೇಳುತ್ತೇನೆ ಮತ್ತು ಇದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಸಮಗ್ರವಾದ ಉತ್ತರ ಕೊಡುತ್ತಾರೆಂದು ನಾನು ಭಾವಿಸುತ್ತೇನೆ.

೨-೩೦ ಪಿ. ಎಂ.

ಇನ್ನು ಅರಣ್ಯ ಇಲಾಖೆ ಬಗ್ಗೆ ಮಾನ್ಯ ಸದಸ್ಯರಾದ ನಾಣಯ್ಯನವರು ಹೇಳಿದ್ದಾರೆ. ನಾನು ಒಂದೇ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದ ನಾನಾ ಇಲಾಖೆಗಳಿಂದ ಎಷ್ಟು ಕೋಟಿ ರೂಪಾಯಿಗಳು ಅರಣ್ಯ ಇಲಾಖೆಗೆ ಬರಬೇಕೆಂಬುದನ್ನು ಸಾರ್ವಜನಿಕ ಹಣಕಾಸು ಸಮಿತಿಯ ೨ನೇ ವರದಿಯನ್ನು ತೆಗೆದುಕೊಂಡು ನೋಡಿ. ಆ ಸಮಿತಿ ವರದಿ ಪ್ರಕಾರ ೯, ೧೫. ೭೮, ೧೦೭ ರೂಪಾಯಿ ೯೧ ಪೈಸೆ ಬೇರೆ ಬೇರೆ ಇಲಾಖೆಗಳಿಂದ ಅರಣ್ಯ ಇಲಾಖೆಗೆ ಬಾಕಿ ಬರಬೇಕಾಗಿದೆ. ಸರ್ಕಾರದ ಇಲಾಖೆಗಳಿಂದ ೩, ೩೧, ೮೯. ೩೭೧ ಕೋಟಿ ರೂಪಾಯಿಗಳು ಅರಣ್ಯ ಇಲಾಖೆಗೆ ಬರಬೇಕಾಗಿದೆ. ಇಷ್ಟು ಹಣವನ್ನು ಬಾಕಿ ಇಟ್ಟುಕೊಂಡು ಅರಣ್ಯವನ್ನು ಹೇಗೆ ಅಭಿವೃದ್ಧಿ ಮಾಡುತ್ತೀರಿ ! ಇವತ್ತು ಕಟ್ಟಿಗೆ ಸಿಗುತ್ತಿಲ್ಲ. ಮರಮುಟ್ಟುಗಳನ್ನು ಹೇಗೆ ಒದಗಿಸುತ್ತೀರಿ ! ಆದ್ದರಿಂದ ಬಾಕಿ ಇರತಕ್ಕ ಹಣವನ್ನು ಕಡ್ಡಾಯವಾಗಿ ಅವರಿಂದ ವಸೂಲು ಮಾಡಿ ಎಂದು ಹೇಳುತ್ತಿದ್ದೇನೆ. ಹೊರಗಿನ ಏಜನ್ಸಿಗಳಿಂದ ೫೪,೬೭೩ ರೂಪಾಯಿಗಳು ಬಾಕಿ ಬರಬೇಕಾಗಿದೆ. ಸರ್ಕಾರದವರು ನಡೆಸತಕ್ಕ ಕಂಪನಿಗಳಿಂದ ೫೯.೦೦,೯೫೦ ರೂಪಾಯಿಗಳು, ಸಹಕಾರಿ ಇಲಾಖೆಯಿಂದ ೧.೪,೨೦೦ ರೂಪಾಯಿಗಳು, ಪ್ರೈವೇಟ್ ಕಂಪನಿಗಳಿಂದ ೩,೬೯,೬೧೩ ರೂಪಾಯಿಗಳು, ಪ್ರೈವೇಟ್ ಇಂಡಸ್ಟ್ರೀಸ್‌ನಿಂದ ೫.೧೯ ೫೯.೨೬೭ ರೂಪಾಯಿಗಳು—ಹೀಗೆ ಅರಣ್ಯ ಇಲಾಖೆಗೆ ಬಾಕಿ ಇರತಕ್ಕ ಹಣ ಬರಬೇಕಾಗಿದೆ. ಹೀಗೆ ಬಾಕಿ ಇರತಕ್ಕ ಹಣವನ್ನು ವಸೂಲು ಮಾಡಿ ಅದರಿಂದ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಮತ್ತು ಜನತೆಗೆ ಬೇಕಾದಂತ ಮರಮುಟ್ಟುಗಳನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೇ ? ಸರ್ಕಾರದ ಇಲಾಖೆಗಳ ಕೋಆರ್ಡಿನೇಷನ್ ಇಲ್ಲವೇ ? ಕಂದಾಯ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಹಣಕಾಸಿನ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಇದು ನಿನ್ನೆ ಮೊನ್ನೆಯದೇನೂ ಅಲ್ಲ ? ಬಹಳ ಕಾಲದಿಂದ ಬಾಕಿ ಇರತಕ್ಕ ಹಣವನ್ನು ಕಡ್ಡಾಯವಾಗಿ ವಸೂಲು ಮಾಡುವುದಕ್ಕೆ ಸರ್ಕಾರ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದರಲ್ಲಿ ಅಧಿಕಾರಿಗಳು ಖಾಸಗಿಯವರ ಜೊತೆ ಶಾಮೀಲಾಗಿ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ ? ಇದರ ಬಗ್ಗೆ ತಾವು ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ೭-೮ ವರ್ಷಗಳ ಹಿಂದೆ ಒಂದು ರಬ್ಬರ್ ಪ್ಲಾಂಟೇಷನ್ ಮಾಡುವ ಉದ್ದೇಶದಿಂದ, ರಬ್ಬರ್ ಫ್ಯಾಕ್ಟರಿಯನ್ನು ಮಾಡುವ ಉದ್ದೇಶದಿಂದ, ಕಂಟ್ರಾಕ್ಟರ್ ಮಿಷನರಿ ತೆಗೆದುಕೊಂಡು ಬಂದು ಮಿಷನರಿ ಹಾಕಿ ಸಂಪೂರ್ಣ ಆಗಿದೆ. ಲೋಕೋಪಯೋಗಿ ಇಲಾಖೆಯವರು ಸಿವಿಲ್ ವರ್ಕ್ ಮಾಡಿದೆ, ಮಿಷನರಿ ಇವತ್ತು ತುಕ್ಕು ಹಿಡಿಯುತ್ತಿದೆ. ಸಿವಿಲ್ ವರ್ಕ್ ಆಗದೇ ಹಣ ಕೊಡುವುದಕ್ಕಾಗುವುದಿಲ್ಲ. ಇವತ್ತು ಲೋಕೋಪಯೋಗಿ ಇಲಾಖೆ ಸಿವಿಲ್ ವರ್ಕ್

ಮಾಡದೇ ಇವತ್ತು ರಬ್ಬರ್ ಹಾಲನ್ನು ಚೆಲ್ಲಬೇಕಾಗಿದೆ. ಆದ್ದರಿಂದ ಸರ್ಕಾರದವರು ಲೋಕೋಪಯೋಗಿ ಇಲಾಖೆಯವರಿಗೆ ಸೂಕ್ತ ತಿಳುವಳಿಕೆ ಕೊಟ್ಟು, ಆದಷ್ಟು ಜಾಗ್ರತೆ ಸಿವಿಲ್ ವರ್ಕ್ ಮುಗಿಯುವಂತೆ ತಿಳಿಸಬೇಕೆಂದು ಹೇಳುತ್ತೇನೆ.

ಇವತ್ತು ಸರ್ಕಾರದವರು ನಡೆಸತಕ್ಕ ಕೈಗಾರಿಕೆಗಳ ಬಗ್ಗೆ ನಾನು ಒಂದೇ ಒಂದು ಮಾತನ್ನು ಹೇಳು ವುದಕ್ಕೆ ಇಷ್ಟಪಡುತ್ತೇನೆ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯವರು ಕೊಟ್ಟಿರತಕ್ಕ ಈ ವಾರ್ಷಿಕ ವರದಿಯನ್ನು ನೋಡಿದರೆ ಸರ್ಕಾರದವರು ನಡೆಸತಕ್ಕ ಕಾರ್ಖಾನೆಗಳು ಹೆಚ್ಚು ಲಾಭದಾಯಕವಾಗಿ ನಡೆಯದೇ ನಷ್ಟ ಪಡೆಯುತಕ್ಕಂಥ ಪಟ್ಟಿಯೇ ಬೆಳೆಯುತ್ತಿದೆ. ಅದೇ ಸಮಯದಲ್ಲಿ ಇವುಗಳ ಜೊತೆ ಯಲ್ಲಿ ಪ್ರೈವೇಟ್ ನಡೆಸತಕ್ಕ ಇತರೇ ಕಂಪನಿಗಳು ಬೇಕಾದಷ್ಟು ಲಾಭ ಮಾಡುತ್ತಿವೆ. ಸರ್ಕಾರ ನಡೆಸ ತಕ್ಕ ಕಂಪನಿಗಳು ನಷ್ಟದಲ್ಲಿ ನಡೆಯುವುದಕ್ಕೆ ಮುಖ್ಯವಾದ ಕಾರಣ ಮುಷ್ಕರ ಅಲ್ಲ. ಉದಾಹರಣೆಗೆ ಸ್ಯಾಂಡಲ್‌ವುಡ್ ಫ್ಯಾಕ್ಟರಿ ಮತ್ತು ಸೋಪ್ ಫ್ಯಾಕ್ಟರಿ ಬಗ್ಗೆ ಹೇಳಿದ್ದಾರೆ. ವರ್ಷೇ ವರ್ಷೇ ಉತ್ಪತ್ತಿ ಕಡಿಮೆಯಾಗಿದೆ, ತನ್ನ ಗುರಿಯಲ್ಲಿ ಮೂರನೇ ಎರಡು ಭಾಗದ ಉತ್ಪತ್ತಿ ಇಳಿದಿದೆ, ಬಾಕಿ ಉಳಿದದ್ದು ಎಲ್ಲಿ ಹೋಯಿತು ? ಆಯಿಲ್ ಏನಾಯಿತು ? ಸರ್ಕಾರ ಸ್ವಾಮ್ಯದ ಕೈಗಾರಿಕೆಗಳು ಚೆನ್ನಾಗಿ ನಡೆಯ ಬೇಕಾದರೆ ಮುಖ್ಯವಾಗಿ ತಮ್ಮ ಇಂಡಸ್ಟ್ರೀ ಡಿಪಾರ್ಟ್‌ಮೆಂಟನ್ನು ಪರಿಶುದ್ಧಗೊಳಿಸಬೇಕು. ಇಲಾಖೆ ಯನ್ನೇ ರೀಆರ್ಗನೈಸ್ ಮಾಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಈ ಸದನವನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡು ತ್ತೇನೆ. ಇವತ್ತು ರಾಜ್ಯದಲ್ಲಿ ದಿನಬೆಳಗಾದರೆ ಗೋಲೀಬಾರ್ ಮತ್ತು ಲಾಠಿ ಚಾರ್ಜು ನಡೆಯುತ್ತಲೇ ಇದೆ. ಇದುವರೆಗೆ ಎಂದೂ ಇಂಥ ಪರಿಸ್ಥಿತಿ ಬಂದಿರಲಿಲ್ಲ. ಕೆಳಗಿನ ಅಧಿಕಾರಿಗಳಿಂದ ಹಿಡಿದು ಮಂತ್ರಿ ಗಳವರೆಗೆ ಮನವಿ ಕೊಟ್ಟರೂ ಕೂಡ ಕುಂಬಾರ ಶೇಷಗಿರಿಯಪ್ಪನ ಕೊಲೆ ಆಯಿತು. 'ನನ್ನ ಜೀವವನ್ನು ರಕ್ಷಣೆ ಮಾಡಿ' ಎಂದು ಆತ ಕೇಳಿಕೊಂಡರೂ ಏನು ಪ್ರಯೋಜನ ಆಗಲಿಲ್ಲ ? ಅಧಿಕಾರಿಗಳು ಇದರಲ್ಲಿ ಶಾಮೀಲಾಗಿ ಬಡಪಾಯಿಯ ಕೊಲೆಯಾಯಿತು. ಜನರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡುವ ಉದ್ದೇಶದಿಂದ ಇಲ್ಲಿಗೆ ಬಂದರೆ ಅವರ ಮೇಲೆ ಲಾಠಿ ಚಾರ್ಜು ಆಯಿತು. ಅವರು ಶಾಂತ ರೀತಿಯಲ್ಲಿ ಚಳುವಳಿ ಮಾಡಿಕೊಂಡು ಮಾನ್ಯ ಮುಖ್ಯ ಮಂತ್ರಿಯವರನ್ನು ಕಾಣಲು ಬಂದುದ್ದಕ್ಕೆ ಅವರ ಮೇಲೆ ಲಾಠಿ ಚಾರ್ಜು ಮಾಡಲಾಯಿತು. ಅವರು ಯಾವ ಪೋಲೀಸ್ ಅಧಿಕಾರಿಗಳಿಗೆ ಕಲ್ಲು ಹೊಡೆದರು? ಶಿವಮೊಗ್ಗ ಜಿಲ್ಲೆಯಲ್ಲಿ ಏನಾಯಿತು ? ಇಂಥ ಅತ್ಯಾಚಾರಗಳು ಪೋಲೀಸ್ ಇಲಾಖೆಯಲ್ಲಿ ನಡೆಯುತ್ತಲೇ ಇದೆ. ಸಮಾಜ ಘಾತುಕ ಶಕ್ತಿಗಳು ಎಂದು ಏನು ಹೇಳುತ್ತೇವೆ. ಅವರು ನಿಮ್ಮ ಪೋಲೀಸ್ ಇಲಾಖೆಯ ಒಳಗಡೆಯೇ ಕುಳಿತಿದ್ದಾರೆ. ಸರ್ಕಾರದವರು ಎಚ್ಚರಿಕೆಯಿಂದ ಒಂದೊಂದನ್ನೇ ಸ್ಕ್ರೂಟಿನಿ ಮಾಡಬೇಕು. ನಾಗರೀಕರು ಶಾಂತರೀತಿಯಿಂದ ಮುಷ್ಕರ ಹೂಡಿದರೆ ಅವರ ಮೇಲೆ ಲಾಠಿ ಚಾರ್ಜು ಮಾಡುವುದು. ಟೆಂಟ್ ಹಾಕಿಕೊಂಡು ಸತ್ಯಾಗ್ರಹ ಮಾಡಿದರೆ. ಲಾಠಿ ಚಾರ್ಜು ಮಾಡುವುದು ಇದು ನಡೆಯುತ್ತಲೇ ಇದೆ. ಇವತ್ತು ಅಮೃ ಸಂದರ್ಭದಲ್ಲಿ ತುಮಕೂರಿನಲ್ಲಿ, ಮದ್ದೂರಿನಲ್ಲಿ ಶಾಂತರೀತಿಯಿಂದ ಚಳುವಳಿನಡೆಯುತ್ತಿವೆ. ಎಷ್ಟು ಶಾಂತರೀತಿಯಿಂದ ಚಳುವಳಿ ಮಾಡಿದರೂ ಹೊಡೆಯುವಂತ ಧೋರ ಣೆಯನ್ನು ಪೋಲೀಸ್ ಇಲಾಖೆ ವಹಿಸಿಕೊಂಡಿದೆ. ದಯಮಾಡಿ ಇವರಿಗೆ ಪ್ರೋತ್ಸಾಹ ಕೊಡಬೇಡಿ. ತಾವು ಅವರ ಶಕ್ತಿಯಿಂದ ಮಾತ್ರ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ನಾನು ತಮಗೆಚ್ಚರಿಕೆಯ ಪೂರ್ವಕವಾಗಿ ಹೇಳುತ್ತೇನೆ.

ಈ ಲೋಕೋಪಯೋಗಿ ಇಲಾಖೆಯಲ್ಲಿರತಕ್ಕ ಗ್ಯಾಂಗ್ ಕೆಲಸಗಾರರ ಬಗ್ಗೆ ಕಳೆದ ೫ ವರ್ಷ ಗಳಿಂದಲೂ ಈ ಸದನದಲ್ಲಿ ಹೇಳುತ್ತಲೇ ಬಂದಿದ್ದೇನೆ. ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು ೧೧,೦೦೦ ಜನ ಗ್ಯಾಂಗ್ ಕೆಲಸಗಾರರು ಇದ್ದಾರೆ. ಇವತ್ತು ಅವರು ಜೀತದಾಳುಗಳಂತೆ ದಿನಗೂಲಿ ಮೇಲೆ ದುಡಿಯುತ್ತಿದ್ದಾರೆ. ಸರ್ಕಾರದವರು ನಿಗಧಿ ಮಾಡಿರುವಂತ ಕನಿಷ್ಟ ವೇತನವನ್ನು ಅವರಿಗೆ ಕೊಡು ತ್ತಿದ್ದಾರೆ. ಅವರನ್ನು ಖಾಯಂ ಮಾಡಿ ಎಂದು ಅನೇಕ ವರ್ಷಗಳಿಂದ ನಾನು ಈ ಸದನದಲ್ಲಿ ಹೇಳುತ್ತಲೇ ಬಂದಿದ್ದೇನೆ. ಹಿಂದೆ ಲೋಕೋಪಯೋಗಿ ಮಂತ್ರಿಗಳಾಗಿದ್ದವರು, ಇವತ್ತು ರೆವಿನ್ಯೂ ಮಂತ್ರಿಗಳಾಗಿ ದ್ದಾರೆ. ಅವರು ಈ ಬಗ್ಗೆ ಆಶ್ವಾಸನೆ ಕೊಟ್ಟಿದರೂ, ಕೊಟ್ಟಿದ್ದಂತ ಆಶ್ವಾಸನೆಯನ್ನು ಕಾರ್ಯರೂಪಕ್ಕೆ ತರುವಂತಾದ್ದು ತಮ್ಮ ಜವಾಬ್ದಾರಿ ಗ್ಯಾಂಗ್ ಕೆಲಸಗಾರರಿಗೆ ೧೯೭೪ನೇ ನವಂಬರ್‌ನಿಂದ ಕನಿಷ್ಟ ವೇತನ ಜಾರಿಗೆ ಬಂದಿದೆ. ಆ ತಾರೀಖಿನಿಂದಲೇ ಖಾಯಂ ಮಾಡಿ, ಎಲ್ಲಾ ಸೌಲಭ್ಯ ಮತ್ತು ಸವಲತು

ಗಳನ್ನು ಕೊಡುವಂತೆ ಮಾಡಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಪ್ರಮೀಳ (ಚಾಮರಾಜಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೇ, ಇವೊತ್ತಿನ ದಿವಸ ಈ ಸಭೆಯ ಮುಂದೆ ಬಹಳ ಡಿಮ್ಯಾಂಡ್‌ಗಳು ಇವೆ. ಆದ್ದರಿಂದ ಎಲ್ಲಾ ಡಿಮ್ಯಾಂಡ್‌ಗಳ ಬಗ್ಗೆಯೂ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಆದರೂ ಕೂಡ ದೇಶದ ಹಿತದೃಷ್ಟಿಯಿಂದ, ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಭಾರತ ದೇಶಕ್ಕೆ ೧೯೪೭ರಲ್ಲಿ ಸ್ವಾತಂತ್ರ್ಯ ಬಂದಿದೆ. ೧೯೫೦ರಲ್ಲಿ ರಾಜ್ಯಾಂಗ ಬಂದಿದೆ. ಜಾತ್ಯಾತೀತ ರಾಷ್ಟ್ರ ಅಂತ ಹೆಸರನ್ನು ಇಟ್ಟುಕೊಂಡು ೩೦ ವರ್ಷಗಳಾದವು. ಆದರೂ ಕೂಡ ಇವೊತ್ತು ಕಾಲೇಜಿನಲ್ಲಿ ಅಪ್ಲಿಕೇಷನ್ ಹಾಕಬೇಕಾದರೆ, ಯಾವ ಜಾತಿ ಅಂತ ತಿಳಿಸಬೇಕಾಗಿದೆ. ಆದುದರಿಂದ, ಹುಟ್ಟತಕ್ಕ ಮಕ್ಕಳಿಗೆ, ಬೆಳೆಯತಕ್ಕ ಮಕ್ಕಳಿಗೆ, ಸ್ಕೂಲಿಗೆ ಹೋಗುವ ಸಂದರ್ಭದಲ್ಲಿ ಜಾತಿ ಯಾವುದು ಅಂತ ಹೇಳುವುದನ್ನು ತಪ್ಪಿಸಿ. ಜಾತಿ ಎನ್ನುವುದು ಹೋಗುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ಅಂತ ನಾನು ತಿಳಿದುಕೊಂಡಿದ್ದೇನೆ. ಕಾಲೇಜ್ ಅಪ್ಲಿಕೇಷನ್‌ನಲಿ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಕೆಲಸಕ್ಕಾಗಿ ಹೆಸರನ್ನು ರಿಜಿಸ್ಟರ್ ಮಾಡಿಸುವಾಗ ಈ ಜಾತಿ ಎನ್ನುವುದನ್ನು ತೆಗೆದುಹಾಕುವುದಕ್ಕೆ ಪ್ರಪ್ರಥಮವಾಗಿ ತಾವು ನಿರೂಪ ಹೊರಡಿಸುತ್ತೀರಾ ? ತಾವು ಈ ರೀತಿ ನಿರೂಪ ಹೊರಡಿಸಿದರೆ ಆಗ ಜಾತ್ಯಾತೀತ ರಾಷ್ಟ್ರ ನಿರ್ಮಾಣ ಮಾಡಲಿಕ್ಕೆ ಅನುಕೂಲವಾಗುತ್ತದೆ.

ಇನ್ನು ಬಡ್ಜೆಟ್ಟಿನಲ್ಲಿ ಹೇಳಿರತಕ್ಕ ವಿಚಾರವನ್ನು ನೋಡುವುದಾದರೆ, ಅಲ್ಪಸಂಖ್ಯಾತರಿಗೆ ರಕ್ಷಣೆ ಮಾಡತಕ್ಕ ಸರ್ಕಾರ ಅಂತ ಹೇಳಿ, ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡು ಬಂದಿದ್ದೀರಿ. ಈಗ ವಕ್ಫ್ ಬೋರ್ಡ್‌ಗೆ ೫ ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಮಂಜೂರು ಮಾಡಿದೆ. ಆದರೆ ನಮ್ಮ ಹಿಂದೂ ದೇವಸ್ಥಾನಗಳನ್ನು ಉಳಿಸುವುದಕ್ಕೆ ಕೇವಲ ೮೦ ಲಕ್ಷ ರೂಪಾಯಿಗಳನ್ನು ಮಾತ್ರ ನಮ್ಮ ಸರ್ಕಾರ ಮೀಸಲಿಟ್ಟಿದೆ. ಅಲ್ಪಸಂಖ್ಯಾಂತರು ಅಂದರೆ ಒಂದೇ ವರ್ಗದವರೇ ? ಕ್ರಿಶ್ಚಿಯನ್ಸ್ ಅಲ್ಪಸಂಖ್ಯಾಂತ ವರ್ಗಕ್ಕೆ ಸೇರಿದವರಲ್ಲವೇ ? ಅಲ್ಪಸಂಖ್ಯಾತರಿಗೆ ೫ ಕೋಟಿ ರೂಪಾಯಿ ಮೀಸಲಿಡುವುದಾದರೆ, ಕ್ರಿಶ್ಚಿಯನ್ಸ್ ಕೂಡ ಅಲ್ಪಸಂಖ್ಯಾತರಾಗಿರುವುದರಿಂದ, ಅವರಿಗೆ ಏತಕ್ಕೆ ಮೀಸಲಿಡುವುದಿಲ್ಲ ? ಇವೊತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ಸಹಸ್ರಾರು ಹಿಂದೂಗಳ ದೇವಸ್ಥಾನದ ಜೀರ್ಣೋದ್ಧಾರಕ್ಕೆ ೮೦ ಲಕ್ಷ ರೂಪಾಯಿ ಕೊಟ್ಟಿದ್ದೀರಾ. ಒಂದು ಕೋಮಿಗೆ ೫ ಕೋಟಿ ರೂಪಾಯಿ ಇಟ್ಟಿದ್ದೇ ಆದರೆ ಎಲ್ಲಾ ಕೋಮುಗಳಿಗೂ ಸೇರಿದ ದೇವಸ್ಥಾನಗಳಿಗೆ, ಚರ್ಚ್‌ಗಳಿಗೆ ಸಹಸ್ರ, ಸಹಸ್ರ, ಕೋಟಿ ರೂಪಾಯಿಗಳನ್ನು ಇಡಬೇಕಾಗಿ ಬರುತ್ತದೆ. ಈಗ ತಾವು ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ಅದರಲ್ಲಿ ಭೇದ ಭಾವ ತೆಗೆದುಹಾಕಿ. ಇವೊತ್ತು ಹಿಂದೂ ಆಗಲಿ, ಮಹಮದೀಯರು ಆಗಲಿ, ಕ್ರಿಶ್ಚಿಯನ್‌ರು ಆಗಲಿ, ಎಲ್ಲರನ್ನು ರಕ್ಷಿಸಬೇಕಾದ್ದು ತಮ್ಮ ಧರ್ಮ. ಇವರೆಲ್ಲರೂ ಒಂದೇ ಅಂತ ಭಾವಿಸಿ, ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ ಸೂಕ್ತ ವ್ಯವಸ್ಥೆ ಮಾಡುತ್ತೀರೆಂದು ನಾನು ಭಾವಿಸಿಕೊಂಡಿದ್ದೇನೆ.

ಇನ್ನು ಹಜ್ ಕಮಿಟಿ ಬಗ್ಗೆ ಹೇಳಬೇಕು ಅಂದರೆ, ಯಾತ್ರಾಸ್ಥಳಕ್ಕೆ ಹೋಗಬೇಕಾದರೆ ಇವರಿಗೆ ಬೊಂಬಾಯಿಯಲ್ಲಿ ಒಂದು ಸ್ಥಳ ಮಾಡಿಕೊಟ್ಟಿದ್ದಾರೆ. ಅವರು ಯಾತ್ರಾಸ್ಥಳಕ್ಕೆ ಹೋಗಲಿಕ್ಕೆ ಅವಕಾಶ ಇದೆ. ನಮ್ಮಲ್ಲಿಯೂ ಕೂಡ ವಿಧವೆಯರು, ಮಹಿಳೆಯರು, ಕಾಶಿ, ರಾಮೇಶ್ವರಕ್ಕೆ ಹೋಗಿಬರುವುದು ಇದೆ. ಅದಕ್ಕೋಸ್ಕರ, ನಮ್ಮ ಮಹಿಳೆಯರು ನಮಗೂ ಕೂಡ ಈ ಯಾತ್ರಾಸ್ಥಳ ಕಮಿಟಿ ಮಾಡಿ ಏತಕ್ಕೆ ಅವಕಾಶ ಕೊಡುತ್ತಿಲ್ಲ ಅಂತ ಕೇಳುತ್ತಿದ್ದಾರೆ. ಇವೊತ್ತು ನಮ್ಮಲ್ಲೂ ಯಾತ್ರಾಸ್ಥಳ ಕಮಿಟಿ ಮಾಡಿ, ಕ್ರಿಶ್ಚಿಯನ್‌ರು ರೋಮ್‌ಗೆ ಹೋಗಿಬರಲಿ, ನಾವು ಬದರಿ, ಕೇದಾರನಾಥಕ್ಕೆ ಹೋಗಿಬರೋಣ ಅಂತ ಕೇಳಿಕೊಳ್ಳುತ್ತಿದ್ದಾರೆ. ಆದುದರಿಂದ, ನಮಗೂ ಕೂಡ ಒಂದು ಯಾತ್ರಾಸ್ಥಳ ಕಮಿಟಿ ಮಾಡಲಿಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ವರ್ಣಾಶ್ರಮ ಧರ್ಮದ ಬಗ್ಗೆ ಹೇಳಬೇಕು ಅಂದರೆ, ಸಹಸ್ರಾರು ವರ್ಷಗಳ ಹಿಂದೆ ಜಾತಿ ಪದ್ಧತಿಯನ್ನು ತಂದಾಗ, ಶೂದ್ರರು, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಅಂತ ನಾಲ್ಕು ಜಾತಿಗಳನ್ನು ಮಾಡಿದರು. ನೀವು ಕೂಡ ಅದೇ ಒಂದು ವರ್ಣಾಶ್ರಮ ಧರ್ಮವನ್ನು ಇಲ್ಲಿ ಮಾಡುತ್ತಿದ್ದೀರಿ. ಕ್ಲಾಸ್ ಒನ್, ಕ್ಲಾಸ್ ಟು, ಕ್ಲಾಸ್ ತ್ರಿ, ಕ್ಲಾಸ್ ಫೋರ್ ಅಂತ ಮಾಡಿಟ್ಟಿದ್ದೀರಿ. ಪ್ರತಿಯೊಬ್ಬರೂ ಕೆಲಸ ಮಾಡಲೇಬೇಕು. ಶ್ರೀ ಬಸವಣ್ಣನವರು ೧೨ನೇ ಶತಮಾನದಲ್ಲಿಯೇ ಹೇಳಿರುವುದನ್ನು ಅರಿಯದೆ

ಕ್ಲಾಸ್ ಒನ್ ಆಫೀಸರ್‌ಗೆ ಬೇರೆ ಒಂದು ಉದ್ಯೋಗ, ಬೇರೆ ಸಂಪಾದನೆ, ಅವರಿಗೆ ಒಂದು ಗೌರವ, ಇದೆ. ಅದೇ ರೀತಿ ಹನ್ನೆರಡು ಗಂಟೆಗಳ ಕಾಲ ದುಡಿಯತಕ್ಕ ಕ್ಲಾಸ್ ಫೋರ್ ಸರ್ವೆಂಟ್‌ಗೆ ಏನು ವೇತನ ತಾವು ಕೊಡುತ್ತೀರಿ ! ಈಗ ಕ್ಲಾಸ್ ಒನ್, ಕ್ಲಾಸ್ ಟು, ಕ್ಲಾಸ್ ತ್ರಿ, ಕ್ಲಾಸ್ ಫೋರ್ ಅಂತ ವರ್ಗಭೇದ ಏನು ಮಾಡಿದ್ದೀರಿ ಇದನ್ನು ತೆಗೆದುಹಾಕಿ. ಎಲ್ಲರೂ ಕೂಡ ಎಂಪ್ಲಾಯಿಗಳೆ, ಎಲ್ಲರೂ ಕೂಡ ದೇಶಕ್ಕಾಗಿ ದುಡಿಯತಕ್ಕವರೇ. ದೇಶಕ್ಕಾಗಿ ಹೋರಾಡತಕ್ಕವರು, ತಮ್ಮ ತಮ್ಮ ಕರ್ತವ್ಯವನ್ನು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾಡುತ್ತಿದ್ದಾರೆ. ೫ ವರ್ಷ ಅಥವಾ ೧೦ ವರ್ಷ ಒಬ್ಬ ವ್ಯಕ್ತಿ ಒಂದು ಕಡೆ ಕೆಲಸ ಮಾಡಿದ್ದೇ ಆದರೆ ಆತನಿಗೆ ಒಂದು ಗ್ರೇಡ್ ಕೊಡಿ, ಎರಡನೇ ಗ್ರೇಡ್ ಅಂತ ಕೊಡಿ. ಅದು ಯಾವುದೇ ಕೆಲಸ ಇರಲಿ, ಇಷ್ಟು ವರ್ಷ ಅಂತ ಒಂದು ಅವಧಿ, ಲಿಮಿಟ್ ಇಟ್ಟು ಅವನು ಮೇಲೆ ಬರಲಿಕ್ಕೆ ಒಂದು ಅವಕಾಶ ಮಾಡಿಕೊಡಿ. ಈಗ ಇರತಕ್ಕ ವರ್ಗ ಭೇದ ಏನಿದೆ ಇದು ಬೇಡ. ವರ್ಣಾಶ್ರಮ ಧರ್ಮ ತಂದು ೩೦ ವರ್ಷಗಳ ಕಾಲ ಸರ್ಕಾರ ಮಾಡಿರತಕ್ಕ ಅನಾಹುತಗಳನ್ನು ದೂರ ಮಾಡಬೇಕು ಅಂತ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಭೂ ಸುಧಾರಣೆ ಕಾನೂನಿನ ವಿಚಾರವಾಗಿ ಹೇಳಬೇಕು ಅಂದರೆ, ಹಿಂದೆ ಇದ್ದಂಥ ಮಾನ್ಯ ಮುಖ್ಯ ಮಂತ್ರಿಯವರು ಮಹಿಳೆಯರಿಗೆ ವಿರೋಧಿಯಾಗಿದ್ದರು. ಅವರು ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡಿ ಹೋದಂಥ ಮುಖ್ಯ ಮಂತ್ರಿಗಳಾಗಿದ್ದಾರೆ ಹಿಂದೆ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಭೂ ಸುಧಾರಣೆ ಕಾಯಿದೆಯಲ್ಲಿ ವಿಧವೆಯರಿಗೆ, ಅವಿವಾಹಿತ ಹೆಣ್ಣುಮಕ್ಕಳಿಗೆ ಆಗಿದ್ದಂತಹ ಅನ್ಯಾಯವನ್ನು ಅವರ ಗಮನಕ್ಕೆ ತಂದಾಗ ಇದರ ಬಗ್ಗೆ ಪರಿಶೀಲಿಸಿ ನೋಡಿ ಅಂತ ಅಂದೇ ಶ್ರೀಮತಿ ಇಂದಿರಾ ಗಾಂಧಿಯವರು ನಿಮ್ಮ ಸರ್ಕಾರದಲ್ಲಿರತಕ್ಕ ಅಧಿಕಾರಿಗಳಿಗೆ ಕಾಗದ ಬರೆದಿದ್ದಾರೆ. ಅದನ್ನು ನಿಮ್ಮ ಅಧಿಕಾರಿಗಳು ಎತ್ತಿಹಾಕಿದ್ದಾರೆ. ಅದು ನಿಮ್ಮ ಗಮನಕ್ಕೆ ಬಂದಿಲ್ಲ. ಇಂದು ಅದೇ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿ ಬಂದಿದ್ದಾರೆ. ಹೆಣ್ಣುಮಕ್ಕಳಿಗೆ ಅನ್ಯಾಯವಾಗುವುದನ್ನು ಅವರು ಸಹಿಸುವುದಿಲ್ಲ ಅಂತ ನಾನು ಭಾವಿಸಿದ್ದೇನೆ. ನೀವು ಹೆಣ್ಣುಮಕ್ಕಳ ಪಕ್ಷಪಾತಿ ಅಂತ ಭಾವಿಸಿಕೊಂಡಿದ್ದೇನೆ. ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಭೂ ಸುಧಾರಣೆ ಅಧಿಕಾರಿಗೆ ಏನು ಒಂದು ಅಪ್ಲಿಕೇಷನ್ ಕಳುಹಿಸಿಕೊಟ್ಟಿದ್ದಾರೆ. ಅದನ್ನು ತರಿಸಿನೋಡಿ, ಭೂ ಸುಧಾರಣೆ ಕಾಯಿದೆಯಲ್ಲಿ ಹೆಣ್ಣುಮಕ್ಕಳಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಿ. ಇವೊತ್ತು ಸಹಸ್ರ ಸಹಸ್ರಾರು ರೈತರು ತಮಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಿಕೊಳ್ಳಲಿಕ್ಕೆ ಏನು ಎದ್ದು ನಿಂತಿದ್ದಾರೆ. ಅದೇ ರೀತಿ ನಾಳೆ ರೈತರ ಹೆಂಡತಿಯರು ವಿಧವೆಯರಾದಾಗ ಅವರು ಕೂಡ ಇಂತಹದೇ ಒಂದು ಕ್ರಾಂತಿಯನ್ನು ಮಾಡದಂತೆ ನೋಡಿಕೊಳ್ಳಬೇಕಾದರೆ ಅದನ್ನು ಸರಿಪಡಿಸಬೇಕಾದುದು ನಿಮ್ಮ ಕರ್ತವ್ಯ. ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೆ. ಈಗ ಭೂ ಸುಧಾರಣೆ ಕಾಯಿದೆಯಲ್ಲಿ ಹೆಣ್ಣುಮಕ್ಕಳಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಿ ತಕ್ಕ ವ್ಯವಸ್ಥೆ ಮಾಡಬೇಕು. ಅದನ್ನು ಮಾಡಬೇಕಾದ್ದು ನಿಮ್ಮ ಕರ್ತವ್ಯ ಅಂತ ಭಾವಿಸಿದ್ದೇನೆ. ೧೯೫೦ನೇ ಇಸವಿಯಲ್ಲಿ ಆರ್ಟಿಕಲ್ ೧೫(೪)ನಲ್ಲಿ No discrimination on the ground of sex...... ಎಂದು ಇದೆ, ಆದರೆ ಅದೇ ಪ್ರಾವಿಸೋದಲ್ಲಿ ಷೆಡ್ಯೂಲ್ಡ್ ಕಾಸ್ಟ್–ಪರಿಶಿಷ್ಟ ಜಾತಿ–ಹರಿಜನ ಗಿರಿಜನರಿಗೆ ಬೇಕಾದ ವ್ಯವಸ್ಥೆ ಮಾಡಬೇಕಾದರೆ ಎಕ್ಸೆಮ್ಷನ್ ಕೊಡಬಹುದು ಅಂತ ಹೇಳಿ, ಆರ್ಟಿಕಲ್ ೧೫(೩)ನಲ್ಲಿ ೧೮ ಪರ್ಸೆಂಟ್ ರಿಸರ್ವೇಷನ್ ಮಾಡುತ್ತಿದ್ದೇವೆ. ಇವೊತ್ತಿಗೆ ೩೦ ವರ್ಷ ಆದರೂ ಆರ್ಟಿಕಲ್ ೧೫(೪)ನಲ್ಲಿ ವುಮೆನ್ ಅಂಡ್ ಚಿಲ್ಡ್ರನ್ಸ್‌ಗೆ ಇದೇ ರೀತಿ ಬೆನಿಫಿಟ್ ಕೊಡಬೇಕು ಅಂತ ರಾಜ್ಯಾಂಗದಲ್ಲಿ ನಮಗೆ ಹಕ್ಕನ್ನು ಕೊಟ್ಟಿದ್ದಾರೆ ಕರ್ನಾಟಕದಲ್ಲಿ ಇದುವರೆಗೂ ಕೂಡ ಆರ್ಟಿಕಲ್ ೧೫(೪)ನ್ನು ಕಣ್ಣೆತ್ತಿ ನೋಡಿಲ್ಲ, ಅದನ್ನು ಓದಿ ಅರ್ಥ ಮಾಡಿಕೊಂಡಿಲ್ಲ. ಹೆಣ್ಣುಮಕ್ಕಳಿಗೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಟ್ಟಿಲ್ಲ. ಈ ಸಂದರ್ಭದಲ್ಲಿ ನಾನು ಮಾನ್ಯ ಕಾನೂನು ಮಂತ್ರಿಗಳನ್ನು, ಮಾನ್ಯ ಮುಖ್ಯ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ದಯವಿಟ್ಟು ಆ ಕಾನೂನನ್ನು ಓದಿ ನೋಡಿ. ಇದನ್ನು ಓದಲಿಕ್ಕೆ ರಾಜ್ಯದಲ್ಲಿರತಕ್ಕ ಕಾನೂನು ಪರಿಣತರಿಗೆ ಕೊಡಿ ಈ ಪರಿಶಿಷ್ಟ ಜಾತಿ ಹರಿಜನ ಗಿರಿಜನರಿಗೆ ರಿಸರ್ವೇಷನ್ ಮಾಡುತ್ತಿದ್ದಾರೆ. ಅದೇ ರೀತಿ ಹೆಣ್ಣುಮಕ್ಕಳ ಬಗ್ಗೆ ಹಿಂದುಳಿದ ವರ್ಗಕ್ಕೆ ಸೇರಿದವರೆಂದು ಮಾನ್ಯ ಹಾವನೂರ್ ಕಮಿಟಿಯಲ್ಲಿ ಹೇಳಿದ್ದಾರೆ. ಆದುದರಿಂದ, ಮಹಿಳೆಯರ ಬಗ್ಗೆ ಈ

ಕಾನೂನನ್ನು ತೆಗೆದುಕೊಂಡು ಒಂದು ನೋಟಿಫಿಕೇಷನ್ ಹೊರಡಿಸಿ, ಪ್ರತಿಯೊಂದು ವಿಭಾಗದಲ್ಲೂ ಹೆಣ್ಣುಮಕ್ಕಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದರಲ್ಲಿ ಕರ್ನಾಟಕ ಸರ್ಕಾರ ಇಡೀ ದೇಶದಲ್ಲಿಯೇ ಮೊಟ್ಟ ಮೊದಲನೆಯ ಸರ್ಕಾರ ಆಗಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತು ದೂರದಲ್ಲಿರತಕ್ಕ ವೆಸ್ಟ್ ಜರ್ಮನಿ, ರಷ್ಯಾ ದೇಶಗಳಲ್ಲಿ ಹೆಣ್ಣುಮಕ್ಕಳನ್ನು ಸರಿಸಮಾನವಾಗಿ ನೋಡಿಕೊಳ್ಳುತ್ತಿದ್ದಾರೆ, ಹೆಣ್ಣುಮಕ್ಕಳಿಗೆ ವೇತನ ಕೊಡುವುದರಲ್ಲಿ ಸ್ಥಾನಮಾನ ಕೊಡುವುದರಲ್ಲಿ, ಸರಿ ಸಮಾನವಾಗಿ ನೋಡಿಕೊಳ್ಳುವುದರಲ್ಲಿ ಈ ಎರಡು ರಾಷ್ಟ್ರಗಳು ಮುಂದೆ ಬಂದಿವೆ.

(ಶ್ರೀ ಎಸ್. ಮುನಿರಾಜುರವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಅದೇ ರೀತಿ ನಮ್ಮ ಭಾರತದೇಶದಲ್ಲೂ ಮಾಡಿ. ಅದರಲ್ಲೂ ನಮ್ಮ ಕರ್ನಾಟಕದಲ್ಲಿ ತಾವು ಮಾನ್ಯ ಮುಖ್ಯ ಮಂತ್ರಿಗಳಾಗಿರುವ ಕಾಲದಲ್ಲಾದರೂ ಮಾಡಿ, ಎಂಬುದಾಗಿ ನಾನು ನಿಮ್ಮಲ್ಲಿ ಕೈಮುಗಿದು ಕೇಳಿ ಕೊಳ್ಳುತ್ತೇನೆ. ಪ್ರತಿಯೊಂದು ವಿಭಾಗದಲ್ಲೂ ಹೆಣ್ಣುಮಕ್ಕಳಿಗೆ ಸ್ಥಾನಮಾನವನ್ನು ಕೊಡಿ. ಪ್ರತಿಯೊಂದ ರಲ್ಲೂ ಸ್ಥಾನಮಾನವನ್ನು ಕೊಡಬೇಕೆಂದು ಆರ್ಟಿಕಲ್ ೧೫(೪)ರಲ್ಲಿ ಇದೆ. ಅದನ್ನು ಬೇಕಾದರೆ ನಿಮ್ಮ ಅಧಿಕಾರಿಗಳ ಮುಖಾಂತರ ತೆಗೆಸಿನೋಡಿ ಮತ್ತೆ ನಿಮ್ಮ ಕಾನೂನು ಇಲಾಖೆಯಲ್ಲಿ ಒಬ್ಬ ಮಹಿಳೆಯೂ ಇದುವರೆಗೆ ಇಲ್ಲ. ಒಂದು ಸ್ಥಾನವನ್ನು ಮಹಿಳೆಯರಿಗೆ ಕೊಡದೆ ಅವರಿಗೆ ಬೇಕಾದವರನ್ನೇ ನೇಮಕ ಮಾಡಿ ಕೊಂಡು. ಅವರಿಗೆ ಬೇಕಾದಂತಹ ಕಾನೂನುಗಳನ್ನೇ ಮಾಡಿಕೊಂಡು ಬಿಟ್ಟಿದ್ದಾರೆ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ಪ್ರತಿಯೊಂದು ಇಲಾಖೆಯಲ್ಲೂ ಮಹಿಳೆಯರಿಗೆ ಸ್ಥಾನಮಾನ ಕೊಡಬೇಕು. ನಮಗೆ ರಾಜ್ಯಾಂಗಬದ್ಧವಾಗಿ ಇರತಕ್ಕಂತಹ ಸವಲತ್ತುಗಳ ಪ್ರಕಾರ ನಮಗೂ ಸ್ಥಾನಮಾನಗಳನ್ನು ಕೊಡ ಬೇಕು. ತಾವು ನಿನ್ನೆ ಒಂದು ಕಡೆ ಭಾಷಣ ಮಾಡುತ್ತಾ ಹೇಳಿದ್ದನ್ನು ನಾನು ಕೇಳಿದ್ದೇನೆ. ಅಲ್ಲಿ ತಾವು ಮಾತನಾಡುತ್ತಾ ವಿರೋಧ ಪಕ್ಷ ಹಾಗೂ ಆಡಳಿತ ಪಕ್ಷ ಎರಡೂ ಒಂದು ರಥದ ಎರಡು ಗಾಲಿಗಳಿದ್ದಂತೆ. ಅವೆರಡೂ ಸರಿಯಾಗಿ ನಡೆದುಕೊಂಡು ಹೋದರೆ ಸರ್ಕಾರ ಸರಿಯಾಗಿ ನಡೆಯುತ್ತದೆ, ಎಂಬುದಾಗಿ ಹೇಳಿ ದ್ದೀರಿ. ಅದೇ ರೀತಿ ನಾನು ತಮಗೆ ಹೇಳುವುದೇನೆಂದರೆ, ಒಂದು ಸಂಸಾರದ ರಥ ಸಾಗಬೇಕಾದರೆ ಗಂಡು ಹೆಣ್ಣು, ಆ ಸಂಸಾರ ರಥದ ಎರಡು ಚಕ್ರಗಳಿದ್ದಂತೆ......

ಶ್ರೀ ಜೆ. ಎಚ್. ಪಟೇಲ್.—ಯಾವುದೇ ಒಂದು ಗಾಡಿಯನ್ನು ಎಳೆಯಬೇಕಾದರೆ ಎರಡು ಎತ್ತು ಗಳನ್ನು ಹೂಡಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯನಿಯರಾದ ಶ್ರೀಮತಿ ಪ್ರಮೀಳಾರವರು ಒಂಟೆತ್ತಿನ ಗಾಡಿ ಇದ್ದಂತೆ,

ಶ್ರೀಮತಿ ಎಸ್. ಪ್ರಮೀಳ.—ನಾನು ಮಾನ್ಯ ಜೆ. ಎಚ್ ಪಟೇಲ್‌ರವರಿಗೆ ಮುಂದೆ ಸಮಯ ಬಂದಾಗ ಹೇಗೆ ಉತ್ತರ ಕೊಡಬೇಕೋ ಆ ರೀತಿಯಲ್ಲಿ ಉತ್ತರ ಕೊಡುತ್ತೇನೆ. ಆದರೆ ಈಗ ಸಮಯವಿಲ್ಲ ದಿದ್ದ ಕಾರಣ ಅವರಿಗೆ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಈಗ ಮಹಾರಾಷ್ಟ್ರದಲ್ಲಿ ಏನು ಮಾಡಿ ದ್ದಾರೆಂದರೆ ಮಹಿಳೆಯರಿಗಾಗಿಯೇ ಒಂದು ಸಪರೇಟ್ ಯೂನಿವರ್ಸಿಟಿಯನ್ನು ತೆರೆದಿದ್ದಾರೆ. ನಾನು ಈ ಬಗ್ಗೆ ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮ ಯು.ಜಿ.ಸಿ ಯವರು ಒಂದು ಯೂನಿವರ್ಸಿಟಿಯಲ್ಲಿ ಮೂವತ್ತು ಕಾಲೇಜುಗಳಿಗಿಂತ ಹೆಚ್ಚಿಗೆ ಇರಬಾರದೆಂದು ನಿಯಮವನ್ನು ಹಾಕಿದ್ದಾರೆಂದು ನಾನು ಕೇಳಿ ದ್ದೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮೂವತ್ತಕ್ಕಿಂತ ಹೆಚ್ಚಿಗೆ ಮಹಿಳಾ ಕಾಲೇಜುಗಳು ಇರುವುದರಿಂದ ಮಹಿಳಾ ಯೂನಿವರ್ಸಿಟಿಯನ್ನು ಏತಕ್ಕೆ ತೆರೆಯಬಾರದು ಎಂಬುದಾಗಿ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಮಹಿಳೆಯರಿಗಾಗಿಯೇ ಒಂದು ಪ್ರತ್ಯೇಕ ಯೂನಿವರ್ಸಿಟಿಯನ್ನು ತೆರೆಯಬೇಕೆಂದು ನಾನು ತಮ್ಮಲ್ಲಿ ಕೇಳಿ ಕೊಳ್ಳುತ್ತಿದ್ದೇನೆ

ಮತ್ತೆ ಮದ್ರಾಸ್ ರಾಜ್ಯದಲ್ಲಿ ವಿಧವೆಯರಿಗೆ ಪ್ರತಿಯೊಂದು ಕಾಲೇಜಿನಲ್ಲೂ ಶೇಕಡ ೩ ರಷ್ಟು ರಿಸರ್ವೇಷನ್‌ನ್ನು ಇಟ್ಟಿದ್ದಾರೆ. ಇದನ್ನು ನಾನು ಹಿಂದೆಯೂ ಈ ಸದನದಲ್ಲಿ ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ಮೆಡಿಕಲ್ ಕಾಲೇಜು ಟೆಕ್ನಿಕಲ್ ಕಾಲೇಜು ಇನ್ನಿತರ ಪ್ರತಿಯೊಂದು ಕಾಲೇಜಿನಲ್ಲೂ ಈ ವಿಧವೆಯರಿಗೆ ಶೇಕಡ ೩ ರಷ್ಟನ್ನು ಮೀಸಲಿಡಬೇಕೆಂದು ತಮಗೆ ಸಲಹೆ ಮಾಡುತ್ತಿದ್ದೇನೆ, ಆ ರೀತಿ ತಾವು ಮಾಡುತ್ತೀರೆಂದು ನಾನು ಭಾವಿಸಿಕೊಂಡಿದ್ದೇನೆ.

ಮತ್ತೆ ನಮ್ಮ ಜಯನಗರ ಬ್ಲಾಕ್‌ನಲ್ಲಿ ದೊಡ್ಡ ದೊಡ್ಡ ಕಾಂಪ್ಲೆಕ್ಸ್‌ಗಳು, ಬಿ.ಡಿ.ಎ. ವತಿಯಿಂದ ಮತ್ತು ಕಾರ್ಪೊರೇಷನ್‌ವತಿಯಿಂದ ಬರುತ್ತಿವೆ. ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ಅಣ್ಣೈಪುರ ಎಂಬಲ್ಲಿ ಬಹಳ ಉನ್ನತವಾದ ಸ್ಥಳ ಇದೆ. ಅದರಲ್ಲಿ ಮಹಿಳೆಯರಿಗೇ ಬೇಕಾದ ಒಂದು ಕಾಂಪ್ಲೆಕ್ಸ್‌ನ್ನು ತೆರೆಯಬೇಕು. ಅಲ್ಲಿ ಪ್ರವಾಸದ ಮೇಲೆ ಬಂದಂತಹ ಮಹಿಳೆಯರಿಗೆ ಮತ್ತು ಹಾಗೂ ಹಾಲಿ ಇಲ್ಲಿರತಕ್ಕಂತಹ ಮಹಿಳೆಯರಿಗೆ ಬೇಕಾದ ಎಲ್ಲ ಸಲಕರಣೆಗಳೂ ಕೂಡ ಸಿಗುವಂತಿರಬೇಕು ; ಅಂದರೆ ಊದುಗೊಳವೆಯಿಂದ ಹಿಡಿದು, ಅಗತ್ಯ ವಸ್ತುಗಳೂ ಕೂಡ ಒಂದೇ ಕಡೆ ಸಿಗುವಂತೆ ಇರಬೇಕು ಈಗ ಇರುವಂತಹ ಪರಿಸರದಲ್ಲಿ ಮಹಿಳೆಯರು ಪೇಟೆಗೆ ಹೋಗಿ ತಮಗೆ ಬೇಕಾದಂತಹ ಸಲಕರಣೆಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆ. ಆದ್ದರಿಂದ ಮಹಿಳೆಯರಿಗಾಗಿ ಒಂದು ಪ್ರತ್ಯೇಕ ಕಾಂಪ್ಲೆಕ್ಸ್ ಮಾಡುವುದರ ಅಗತ್ಯ ಇದೆ. ಅದಕ್ಕಾಗಿ ಮಹಿಳೆಯರಿಗಾಗಿ ಒಂದು ಪ್ರತ್ಯೇಕವಾದ ಕಾಂಪ್ಲೆಕ್ಸ್‌ನ್ನು ಮಾಡುವುದರಿಂದ ಅವರು ಅಲ್ಲಿ ವ್ಯಾಪಾರವನ್ನು ಮಾಡುವುದಕ್ಕಾಗಲಿ ಅಥವಾ ತಮಗೆ ಬೇಕಾದಂತಹ ಸಲಕರಣೆಗಳನ್ನು ಕೊಂಡುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಮಹಿಳೆಯರಿಗಾಗಿ ಒಂದು ಪ್ರತ್ಯೇಕ ಕಾಂಪ್ಲೆಕ್ಸ್‌ನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಲೋಕಸೇವಾ ಆಯೋಗದ ವಿಚಾರವಾಗಿ ಹೇಳುವುದಾದರೆ, ಕಳೆದ ೩೦ ವರ್ಷಗಳಿಂದಲೂ ಅಲ್ಲಿ ಒಬ್ಬ ಮಹಿಳೆಯನ್ನೂ ಸದಸ್ಯರನ್ನಾಗಿ ನೇಮಕ ಮಾಡಿಲ್ಲ ಈ ಬಗ್ಗೆ ನಾವು ಪದೇ ಪದೇ ಕೇಳುತ್ತಿದ್ದರೂ ಕೂಡ ನಮ್ಮ ಬೇಡಿಕೆ ಇನ್ನೂ ಈಡೇರಿದ ಹಾಗೆ ನನಗಂತೂ ಕಂಡುಬಂದಿಲ್ಲ. ಇನ್ನು ಮೇಲಾದರೂ ಕೂಡ ಪ್ರತಿಯೊಂದು ರಿಕ್ರೂಟ್‌ಮೆಂಟ್ ಕಮಿಟಿಯಲ್ಲೂ, ಮತ್ತೆ ಲೋಕಸೇವಾ ಆಯೋಗದಲ್ಲೂ ಹಾಗೂ ಡಿಎಲ್‌ಆರ್‌ಸಿ. ಕಮಿಟಿಯಲ್ಲೂ, ಮಹಿಳೆಯರಿಗೆ ಸ್ಥಾನಮಾನವನ್ನು ಕೊಡಬೇಕಾದುದು ಅತ್ಯಂತ ಅವಶ್ಯಕ ಎಂಬುದಾಗಿ ನಾನು ನಿಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ವಿಚಾರವಾಗಿ ಹೇಳುವುದಾದರೆ, ಬೆಳಗಾಂನಲ್ಲಿರುವ ದೊಡ್ಡಣ್ಣ ಅಂಡ್ ಸನ್ಸ್ ಎನ್ನುವವರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಈ ಸಭೆಯಲ್ಲಿ ಪ್ರಶ್ನೆಯನ್ನು ಕೇಳಿದಾಗ, ಆ ಟೆಂಡರ್‌ನ್ನು ಕ್ಯಾನ್ಸಲ್ ಮಾಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು, ಆದರೆ ಆ ಅಶ್ವಾಸನೆ ಇದುವರೆಗೂ ಆಶ್ವಾಸನೆಯಾಗಿಯೇ ಉಳಿದಿದೆ. ಆ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆ ದೊಡ್ಡಣ್ಣ ಅಂಡ್ ಕಂಪನಿಯವರಿಗೆ ಯಾವುದೋ ಒಂದು ಸಿಟ್ರಾನಿಕ್ ಆಯಿಲ್‌ಯನ್ನು ತಯಾರು ಮಾಡುವುದಕ್ಕೆ ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ಅವರು ಎಣ್ಣೆಯನ್ನು ತಯಾರು ಮಾಡಿ, ಬೊಂಬಾಯಿಗೆ ತೆಗೆದುಕೊಂಡು ಹೋಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿಕೊಂಡು ಹಣ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತಹ ಎಲ್ಲ ಫೋಟೋಸ್ಟೇಟ್ ಕಾಪಿಗಳು ನನ್ನ ಹತ್ತಿರ ಇವೆ. ಇದಕ್ಕೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳೂ ನನ್ನಲ್ಲಿವೆ. ಅದನ್ನು ಸಾಭೀತು ಮಾಡುವುದಕ್ಕೆ ನಾನು ತಯಾರಾಗಿದ್ದೇನೆ. ಇವರಿಗೆ ಕೊಟ್ಟಿರುವ ಕಾಂಟ್ರಾಕ್ಟನ್ನು ಇನ್ನೂ ಮುಂದುವರಿಸುವುದಾದರೆ ನಿಮ್ಮ ಕಾಡನ್ನೆಲ್ಲಾ ಅವರು ಭಕ್ಷಣೆ ಮಾಡುತ್ತಾರೆ. ಆದ್ದರಿಂದ ತಾವು ಕೂಡಲೇ ಇವರ ಕಾಂಟ್ರಾಕ್ಟನ್ನು ಕ್ಯಾನ್ಸಲ್ ಮಾಡಿ ಮತ್ತೆ ಇದರ ಬಗ್ಗೆ ದೀರ್ಘವಾಗಿ ತನಿಖೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದಾದರೆ ಲೋಕೋಪಯೋಗಿ ಇಲಾಖೆ ಮತ್ತು ಕಾರ್ಪೊರೇಷನ್ ಇಲ್ಲಿ ಜ್ಯೂನಿಯರ್ ಇಂಜಿನೀಯರ್‌ಗಳನ್ನು ರೆಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಅವರು ಜ್ಯೂನಿಯರ್ ಇಂಜಿನಿಯರ್ ಆಗಿ ಕೆಲಸಕ್ಕೆ ಸೇರಿ ೧೮ ವರ್ಷಗಳಾದರೂ ಇನ್ನೂ ಜ್ಯೂನಿಯರ್ ಇಂಜಿನಿಯರ್ ಆಗಿಯೇ ಇದ್ದಾರೆ. ಆದರೆ, ಅದೇ ನಮ್ಮ ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಜ್ಯೂನಿಯರ್ ಇಂಜಿನಿಯರ್ ಆಗಿ ಸೇರಿದ ೮ ವರ್ಷಗಳಲ್ಲಿಯೇ ಅವರಿಗೆ ಬಡ್ತಿ ಸಿಕ್ಕಿ ಇವತ್ತು ಅವರು ಅಸಿಸ್ಟೆಂಟ್ ಇಂಜಿನಿಯರ್ ಆಗಿದ್ದಾರೆ. ಕೆಲವರು ಡೆಪ್ಯೂಟಿ ಚೀಫ್ ಇಂಜಿನಿಯರ್ ಆಗಿದ್ದಾರೆ. ಏತಕ್ಕೋಸ್ಕರ ಈ ರೀತಿಯಾಗುತ್ತದೆ ಎಂಬುದಾಗಿ ಇಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಇದಕ್ಕೆ ಕಾರಣವೇನೆಂದರೆ ಪ್ರತಿಯೊಂದು, ಇಲಾಖೆಯಲ್ಲೂ ಇರತಕ್ಕಂತಹ ನಿಮ್ಮ ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿನ ದೋಷ. ನಿಮ್ಮ ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟುಬಿಟ್ಟಿದ್ದೀರಿ. ಅವರು ಲೋಕಲ್ ಕ್ಯಾಂಡಿಡೇಟ್ಸ್‌ನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದೀರಿ. ನಾನು ನಿಮಗೆ ಸಲಹೆ ಕೊಡುವುದೇನೆಂದರೆ ಈ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ತೆಗೆದುಕೊಳ್ಳುವ ಪದ್ಧತಿಯನ್ನು ದಯಮಾಡಿ ರದ್ದು ಮಾಡಿ. ಅಂದಮಾತ್ರಕ್ಕೆ ಈಗ ಇರುವವರನ್ನು ತೆಗೆಯಿರಿ ಎಂದು ಅರ್ಥವಲ್ಲ, ಅವರನ್ನು

ರೆಗ್ಯೂಲರೈಸ್ ಮಾಡಿ. ಆದರೆ ಇನ್ನು ಮೇಲೆ ಏದೂ ಕೂಡ ಈ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ತೆಗೆದುಕೊಳ್ಳುವುದನ್ನು ದಯಮಾಡಿ ನಿಲ್ಲಿಸಿ. ಇದೂ ಕೂಡ ಆರ್ಟಿಕಲ್ ೧೪ಕ್ಕೆ ವಿರುದ್ಧವಾಗಿರು ವಂಥಾದ್ದು ಆಗುತ್ತದೆ. ಈ ಜೂನಿಯರ್ ಇಂಜಿನಿಯರ್ಸ್‌ಗೆ ಬಡ್ತಿಕೊಡುವ ಅವಕಾಶವನ್ನು ಒದಗಿಸಿ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ವಿದ್ಯುಚ್ಛಕ್ತಿ ಮಂಡಲಿಯ ವಿಚಾರವಾಗಿ ಹೇಳುವುದಾದರೆ, ಅಲ್ಲಿ ಮೊನ್ನೆ ಗುಮಾಸ್ತರ ಹುದ್ದೆ ಗಳಿಗೆ ಸಂದರ್ಶನವಾಗಿದೆ. ಇಂದೋ ಅಥವಾ ನಾಳೆಯೋ ಅಪಾಯಿಂಟ್‌ಮೆಂಟ್ ಆರ್ಡರ್ ಹೊರಬೀಳುವು ದರಲ್ಲಿದೆ. ಅಲ್ಲಿ ಬಹಳ ಅನ್ಯಾಯವಾಗಿದೆ ಈಗ ಇರತಕ್ಕಂತಹ ಛೇರ್ಮನ್‌ರವರು ತಮಗೆ ಬೇಕಾದವರಿಗೆ ಅಪಾಯಿಂಟ್‌ಮೆಂಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾನು ನಿಮ್ಮಲ್ಲಿ ಕಳಕಳಿಯಿಂದ ಕೇಳಿ ಕೊಳ್ಳುವುದೇನೆಂದರೆ ಈ ರೀತಿ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕಾದರೆ ತಾವು ಆ ಆರ್ಡರ್ ಗಳನ್ನು ತರಿಸಿ ನೋಡಿದರೆ ಗೊತ್ತಾಗುತ್ತದೆ. ಇಂದೋ ಅಥವಾ ನಾಳೆಯೋ ಅಪಾಯಿಂಟ್‌ಮೆಂಟ್ ಆರ್ಡರ್ ಹೋಗುವುದನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಶೇಕಡ ೧೮ ಭಾಗದಷ್ಟು ಮೀಸಲಾತಿಯನ್ನು ಕೊಡುವುದನ್ನು ತಪ್ಪಿಸಿದ್ದಾರೆ. ಇದರಲ್ಲಿ ಬಹಳ ಅನ್ಯಾಯವಾಗಿದೆ. ಇದನ್ನು ದಯಮಾಡಿ ತಪ್ಪಿಸಿ, ಎಲ್ಲರಿಗೂ ನ್ಯಾಯವನ್ನು ದೊರಕಿಸಿಕೊಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿ ಯಿಂದ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಕೊನೆಯದಾಗಿ ಈ ನೀರಾವರಿ ಯೋಜನೆಗಳ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದೆ. ತಾವು ಹಿಪ್ಪರಗಿ ಪ್ರಾಜೆಕ್ಟನ್ನೂ ತೆಗೆದುಕೊಂಡಿದ್ದೀರಿ ಅದಕ್ಕೆ ಈಗಾಗಲೇ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ಸಾಲಿನಲ್ಲಿ ಅದಕ್ಕೆ ೪೩ ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಅದೇ ರೀತಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೂ ಹಣವನ್ನು ಒದಗಿಸಿದ್ದೀರಿ. ಆದರೆ ಆಗತಕ್ಕಂತಹ ತೊಂದರೆ ಏನೆಂದರೆ ಈಗ ಇರುವ ನಿಮ್ಮ ಪ್ಲಾನಿನ ಪ್ರಕಾರ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನ ಡ್ಯಾಮು ಪೂರ್ಣವಾಗಿ ಕಟ್ಟಿ ಮುಗಿಸಿದರೆ ಈ ಹಿಪ್ಪರಗಿ ಯೋಜನೆ ಸಂಪೂರ್ಣವಾಗಿ, ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನಲ್ಲಿ ಮುಳುಗಿ ಹೋಗುತ್ತದೆ. ಇದರ ಪ್ಲಾನ್‌ನ್ನು ತಯಾರು ಮಾಡಿದವರು ಯಾರು? ಸಾರ್ವಜನಿಕರ ಹಣ ವನ್ನು ಈ ರೀತಿ ಪೋಲು ಮಾಡುವುದು ಸರಿಯೇ ?

ಶ್ರೀ ಎಂ. ಸಿ. ಬಸಪ್ಪ.—ಹಿಪ್ಪರಗಿ ಯೋಜನೆ, ನೀರಾವರಿ ಯೋಜನೆಯಲ್ಲ. ಅದು ಡೈವರ್ಸನ್ ಪ್ರಾಜೆಕ್ಟ್.

ಶ್ರೀಮತಿ ಎಸ್. ಪ್ರಮೀಳ.—ಆ ಬಗ್ಗೆ ನಾನೂ ಓದಿದ್ದೇನೆ, ನೋಡಿದ್ದೇನೆ. ಅದರ ಬಗ್ಗೆ ಸರ್ಕಾರದ ಹತ್ತಿರ ಪ್ಲಾನ್ ಇಲ್ಲದಿದ್ದರೆ ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ಅದು ಕೋರ್ಟಿನಲ್ಲಿದೆ. ನಿಮ್ಮ ಹತ್ತಿರ ಅವರು ಏನು ಹೇಳಿದ್ದಾರೆಂದರೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ಆದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಪೂರ್ತಿಯಾದರೆ ಈ ಹಿಪ್ಪರಗಿ ಯೋಜನೆ ಸಂಪೂರ್ಣ ವಾಗಿ ಮುಳುಗಡೆಯಾಗುತ್ತದೆ ಇದನ್ನು ಕೂಡಲೇ ತಪ್ಪಿಸುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳುತ್ತಾ, ಇಷ್ಟು ಮಾತನಾಡಲು ಕಾಲಾವಕಾಶವನ್ನು ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

೩ ೧೦ ಪಿ. ಎಂ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೆ, ಈ ದಿನದ ಬೇಡಿಕೆ ಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮುಂದೆ ಒಂದು ಸಂತೋಷದ ವಿಷಯದ ಬಗ್ಗೆ ನಾನು ಈ ಸಭೆಯ ಗಮನವನ್ನು ಸೆಳೆಯಬಯಸುತ್ತೇನೆ. ಈಗಾಗಲೇ ಈ ವಿಷಯದ ಬಗ್ಗೆ ಪ್ರಧಾನಮಂತ್ರಿ ಯವರು ಹಾಗೂ ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಆ ಬಗ್ಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಿ ದ್ದಾರೆ. ಬಹಳ ದಿವಸಗಳಿಂದ ನಮ್ಮ ಭಾರತ ಏನೊಂದು ಸ್ಥಾನವನ್ನು ಕಳೆದುಕೊಂಡಿತ್ತೋ ಅದನ್ನು ನಿನ್ನೆಯ ದಿವಸ ಒಲಿಂಪಿಕ್ ಹಾಕಿ ಪಂದ್ಯದಲ್ಲಿ ಜಯಗಳಿಸಿ ಆ ಸ್ಥಾನವನ್ನು ಮತ್ತೆ ಗಳಿಸಿಕೊಂಡಿವೆ. ಅಲ್ಲಿ ಅತ್ಯುತ್ತಮವಾಗಿ ಆಟವಾಡಿ ಈ ಒಂದು ಸ್ಥಾನವನ್ನು ಗಳಿಸಿಕೊಂಡ ಕ್ರೀಡಾಪಟುಗಳು ಈ ಸದನದ ಮಾನ್ಯ ಸದಸ್ಯರ ಅಭಿನಂದನೆಗಳಿಗೆ ಅರ್ಹರೆಂದು ಈ ಮೂಲಕ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

(ಸಭೆಯ ಮಾನ್ಯ ಸದಸ್ಯರೆಲ್ಲರೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು)

ಈ ದಿನ ರಾಜ್ಯದಲ್ಲಿನ ೩೪ ಬೇಡಿಕೆಗಳನ್ನು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಅವರ ಸಹಪಾಟಿಗಳು ನಮ್ಮ ಮುಂದೆ ಚರ್ಚೆಗೆ ಇಟ್ಟಿದ್ದಾರೆ ಬಹುಶಃ ನಾನು ಇಲ್ಲಿ ಎಲ್ಲಾ ಬೇಡಿಕೆಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ರೇಷ್ಮೆ ಹಾಗೂ ಭಾರಿ ನೀರಾವರಿ ಬೇಡಿಕೆಗಳ ಮೇಲೆ ಕೆಲವು ಮಾತುಗಳನ್ನಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ರೇಷ್ಮೆ ಖಾತೆ ಬಗ್ಗೆ ಸರ್ಕಾರ ಇನ್ನೂ ಹೆಚ್ಚಿನ ಒಂದು ಗಮನವನ್ನು ಕೊಡತಕ್ಕದ್ದು ಅವಶ್ಯಕವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇದಕ್ಕೆ ನಾನಾ ಕಾರಣಗಳು ಇವೆ. ಈ ಬಗ್ಗೆ ನಾವು ವಿಶ್ವದಲ್ಲಿ ಒಂದು ಸ್ಥಾನವನ್ನು ಗಳಿಸಬೇಕಾಗಿದೆ. ಈ ಬಗ್ಗೆ ಹಿಂದೆ ಭಾರತ ೫ನೇ ಸ್ಥಾನದಲ್ಲಿ ಇತ್ತು. ಜಪಾನ್ ಮೊದಲನೇ ಸ್ಥಾನದಲ್ಲಿ ಚೈನಾ ಎರಡನೆಯ ಸ್ಥಾನದಲ್ಲಿ ರಷ್ಯಾ ಮೂರನೇ ಸ್ಥಾನದಲ್ಲಿ ಸೌತ್ ಕೋರಿಯಾ ನಾಲ್ಕನೇ ಸ್ಥಾನದಲ್ಲಿ ಹಾಗೂ ಭಾರತ ಐದನೇ ಸ್ಥಾನದಲ್ಲಿ ಇದ್ದವು. ಆದರೆ ಇತ್ತೀಚೆಗೆ ನೋಡುವುದಾದರೆ ಚೈನಾ ೧೯ ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಮಾಡಿ ಮೊದಲ ಸ್ಥಾನಕ್ಕೂ, ಜಪಾನ್ ಎರಡನೇ ಸ್ಥಾನಕ್ಕೂ ಸೌತ್ ಕೋರಿಯಾ ೩ನೇ ಸ್ಥಾನಕ್ಕೂ, ಭಾರತ ೪ನೇ ಸ್ಥಾನಕ್ಕೂ ಬಂದಿದೆ. ಆದುದರಿಂದ ಈ ದಿನ ಅಂತರ್‌ರಾಷ್ಟ್ರೀಯ ಬೇಡಿಕೆ ಏನಿದೆ ಅದನ್ನು ಗಣನೆಗೆ ತೆಗೆದುಕೊಂಡು ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಒಂದು ರೇಷ್ಮೆ ಉದ್ಯಮ ಏನಿದೆ ಇದು ಒಂದು ಲೇಬರ್ ಓರಿಯಂಟೆಡ್ ಉದ್ಯಮ ಇದ್ದು ಹಳ್ಳಿಗಾಡಿನಲ್ಲಿ ಹೆಚ್ಚು ಜನ ಈ ರೇಷ್ಮೆ ಉದ್ಯಮದಲ್ಲಿ ಕೆಲಸಮಾಡುತ್ತಿದ್ದಾರೆ. ಈಗಾಗಲೇ ಹೆಚ್ಚು ಕಡಿಮೆ ನಮ್ಮ ರಾಜ್ಯದಲ್ಲಿ ೨೦ ಲಕ್ಷ ಸಂಸಾರಗಳು ಈ ಒಂದು ಉದ್ಯಮವನ್ನು ಅವಲಂಭಿಸಿವೆಯೆಂದು ಹೇಳಿದರೆ ಅದು ತಪ್ಪಾಗಲಾರದು. ಈ ಒಂದು ಉದ್ಯಮದ ಬಗ್ಗೆ ಸರ್ಕಾರ ಒಂದು ಯೋಜನೆಯನ್ನೂ ಸಹಾ ನಿರೂಪಿಸಿದೆ. ಈ ಒಂದು ಯೋಜನೆಯನ್ನು ನಿರೂಪಿಸಿ ವಿಶ್ವಬ್ಯಾಂಕಿನ ಸಾಲವನ್ನು ಕೇಳಲಾಗಿದೆ. ವಿಶ್ವ ಬ್ಯಾಂಕಿನವರು ಸ್ವಲ್ಪ ಹೆಚ್ಚು ಕಡಿಮೆ ೮೦ ಕೋಟಿ ರೂಪಾಯಿಯ ಒಂದು ಯೋಜನೆಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆ, ಈ ಒಂದು ಯೋಜನೆಗೆ ನಮ್ಮ ಸರ್ಕಾರದವರು ೧೨೦ ಕೋಟಿ ರೂಪಾಯಿಯ ನೆರವನ್ನು ಕೇಳಿದ್ದರು. ಯಾವ ಕಾರಣದಿಂದ ಈ ಯೋಜನೆಯ ಹಣವನ್ನು ಕಡಿಮೆ ಮಾಡಿದರೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ಈ ಬಗ್ಗೆ ಹೇಳಬೇಕೆಂದು ನನ್ನ ಮನವಿ. ಹಿಂದೆ ರೇಷ್ಮೆ ಬಗ್ಗೆ ಇಂತಿಂಥ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಹೇಳಿ ಒಂದು ಪ್ರೊಫೈಲ್ ಮಾಡಿ ಕಳುಹಿಸಲಾಗಿತ್ತು. ಈ ರೇಷ್ಮೆ ಉದ್ಯಮದಲ್ಲಿ ನಾಲ್ಕು ರೀತಿಯ ಪಂಗಡಗಳು ಇವೆ. ಇದರಲ್ಲಿ ಮೊಟ್ಟೆಯನ್ನು ತಯಾರು ಮಾಡತಕ್ಕವರು ಮೊದಲ ಪಂಗಡಕ್ಕೆ ಸೇರುತ್ತಾರೆ. ಹುಳುವನ್ನು ಸಾಕುವವರು ಎರಡನೆಯ ಪಂಗಡಕ್ಕೆ ಸೇರುತ್ತಾರೆ. ರೇಷ್ಮೆಯನ್ನು ಬಿಚ್ಚತಕ್ಕವರು ಮೂರನೆಯ ಪಂಗಡಕ್ಕೂ, ಅದನ್ನು ಹುರಿ ಮಾಡಿ ಬಟ್ಟೆ ಮಾಡತಕ್ಕವರು ನಾಲ್ಕನೇ ಪಂಗಡಕ್ಕೂ ಸೇರುತ್ತಾರೆ. ಈಗ ವಿಶ್ವ ಬ್ಯಾಂಕಿನಿಂದ ದೊರಕತಕ್ಕ ಯೋಜನೆಯ ಕೆಳಗೆ ಮೊಟ್ಟೆ ತಯಾರು ಮಾಡುವುದರ ಬಗ್ಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗಿದೆ. ಹಾಗೇ ರೇಷ್ಮೆ ಬೆಳೆಯುತಕ್ಕ ಉದ್ಯಮಕ್ಕೂ ಈ ಯೋಜನೆಯಲ್ಲಿ ಆದ್ಯತೆ ಕೊಟ್ಟು ಚಾಕಿ ಕಟ್ಟುವುದರ ಬಗ್ಗೆ ರೇಷ್ಮೆ ಸೆಂಟರ್‌ಗಳನ್ನು ತೆರೆಯುವ ಬಗ್ಗೆ ಇವೆಲ್ಲದರ ಬಗ್ಗೆಯೂ ಕೂಡ ಪ್ರಾತಿನಿಧ್ಯವನ್ನು ಕೊಡಬೇಕಾಗುತ್ತದೆ. ಇವತ್ತು ನಾವು ಬಹಳ ಎಚ್ಚರಿಕೆಯನ್ನು ವಹಿಸಬೇಕಾದುದು ಮೂರನೇ ಪಂಗಡದ ಬಗ್ಗೆ ಅಂದರೆ ರೇಷ್ಮೆಯನ್ನು ಬಿಚ್ಚತಕ್ಕದ್ದರ ಬಗ್ಗೆ, ಈ ಒಂದು ಉದ್ಯಮವನ್ನು ಬಹಳ ಕಡಿಮೆ ಜನರು ಮಾಡುತ್ತಿದ್ದಾರೆ. ಹೇಗೆ ಗೂಡನ್ನು ಉತ್ಪಾದನೆ ಮಾಡುತ್ತಿದ್ದಾರೆ ಅದೇ ರೀತಿಯಲ್ಲಿ ಗೂಡನ್ನು ಬಿಚ್ಚತಕ್ಕದ್ದರ ಬಗ್ಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡತಕ್ಕದ್ದು ಬಹಳ ಮುಖ್ಯವಾಗಿದೆ. ನಾನು ತಮ್ಮ ಪ್ರಾಜೆಕ್ಟ್ ಪ್ರೊಫೈಲ್ ನೋಡಿದೆ, ಅದರಲ್ಲಿ ಮಿನಿ ಸಿಲ್ಕ್ ಫಿಲೇಚರ್‌ಗಳನ್ನು ಬಲಗೊಳಿಸುವುದಕ್ಕೆ ಮತ್ತು ಅವನ್ನು ಸ್ಥಾಪನೆ ಮಾಡುವುದಕ್ಕೆ ೮ ಸಿಲ್ಕ್ ಫಿಲೇಚರ್‌ಗಳನ್ನು ಎಸ್ಟಾಬ್ಲಿಷ್ ಮಾಡಬೇಕೆಂದು ಮಾಡಿದರೆ ವಿಶ್ವ ಬ್ಯಾಂಕಿನವರು ಈ ಬಗ್ಗೆ ಫೈನಲೈಸ್ ಮಾಡಿ ಒಂದೇ ಒಂದು ಮಿನಿ ಫಿಲೇಚರ್ ಎಸ್ಟಾಬ್ಲಿಷ್ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಅವರು ಇನ್ನು ಏಳಕ್ಕೆ ಒಪ್ಪಿಗೆಯನ್ನು ಕೊಟ್ಟಿಲ್ಲ.

ಇನ್ನು ಕಾಟೇಜ್ ಬೇಸಿನ್ ಬಗ್ಗೆ ೬೮೦ ಯೂನಿಟ್‌ಗಳನ್ನು ಕೊಡಬೇಕೆಂದು ಕೇಳಲಾಗಿತ್ತು. ಸುಮಾರು ೧೯ ಮಿಲಿಯನ್ ರೂಪಾಯಿಗಳು ಬೇಕೆಂದು ಕೇಳಿದ್ದೇವೆ. ಅದರಲ್ಲೂ ಕೂಡಾ ಕಡಿಮೆ ಮಾಡಿದ್ದಾರೆಂದು ಗೊತ್ತಾಗಿದೆ, ಅದರ ಅಂಕಿ ಅಂಶ ನನ್ನಲ್ಲಿ ಈಗ ಇಲ್ಲ. ಇಲ್ಲಿ ೬೮೦ ಯೂನಿಟ್ಸ್ ಏನಿವೆ ಇದರಲ್ಲಿ ೧೦೦ ಯೂನಿಟ್ಸ್ ಓಲ್ಡ್ ಸಿರಿಕಲ್ಚರ್ ಏರಿಯಾಗಳಿಗೆ ಕೊಟ್ಟು ಉಳಿದ ೫೮೦ ಯೂನಿಟ್ ಈ ಗಳನ್ನು ಹೊಸ ಸಿರಿಕಲ್ಚರ್ ಏರಿಯಾಗಳಿಗೆ ಕೊಡಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆಂದು ತಿಳಿದಿದ್ದೇನೆ. ಬಗ್ಗೆ ಹೊಸ ಏರಿಯಾಗಳಿಗೆ ಕೊಡುವುದರ ಬಗ್ಗೆ ನಾನು ಅಡ್ಡ ಬರುವುದಿಲ್ಲ. ಅದೇ ರೀತಿ ಈ ಒಂದು ರೇಷ್ಮೆ

ಉದ್ಯಮ ಏನಿದೆ ಇದರಲ್ಲಿ ಸಾಕಷ್ಟು ರೀಲಿಂಗ್ ಯೂನಿಟ್ಸ್‌ಗಳು ಇಲ್ಲದಿದ್ದರೆ ಈ ಸೆಕ್ಟಾರ್‌ನಲ್ಲಿ ಬಹಳ ತೊಂದರೆಯಾಗುತ್ತವೆ. ಇಲ್ಲೂ ಕೂಡ ಉತ್ತೇಜನ ಕೊಡುವ ಸಲುವಾಗಿ ಕಾಟೇಜ್ ಬೇಸಿನ್‌ಗಳನ್ನು ಹೆಚ್ಚು ಮಾಡತಕ್ಕದ್ದು ಅವಶ್ಯ ಇದೆ. ಈ ಒಂದು ಅಭಿವೃದ್ಧಿ ಏನಿದೆ ಇದು ಒನ್ ಸೈಡೆಡ್ ಆಗಬಾರದು, ಎಲ್ಲಾ ಕಡೆಯೂ ಇದು ಯೂನಿಫ಼ಾರಮ್ಮಾಗಿ ಡೆವಲಪ್ ಆಗಬೇಕಾದ್ದು ಅವಶ್ಯ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ವೇಸ್ಟ್ ಸಿಲ್ಕ್ ಬಗ್ಗೆ ಹೇಳಬೇಕೆಂದರೆ, ನಮ್ಮ ರಾಜ್ಯದಲ್ಲಿ ಸುಮಾರು ೯೦೦ ಮೆಟ್ರಿಕ್ ಟನ್ ವೇಸ್ಟ್ ಸಿಲ್ಕ್ ತಯಾರಾಗುತ್ತಿದೆ. ಆದರೆ ಅದರ ಉಪಯೋಗ ಮಾಡಿಕೊಳ್ಳುತ್ತಿರುವುದು ಬರೀ ೩೦೦ ಮೆಟ್ರಿಕ್ ಟನ್ ಮಾತ್ರ. ಈ ಬಗ್ಗೆ ವಿಶ್ವ ಬ್ಯಾಂಕಿನಿಂದ ೪೩ ಮಿಲಿಯನ್ ರೂಪಾಯಿಗಳ ಸಹಾಯವನ್ನು ಕೇಳಿದ್ದೆವು. ಅವರು ಈ ಬಗ್ಗೆ ಜಾಸ್ತಿ ಕೊಟ್ಟಿದ್ದಾರೆ ಸುಮಾರು ೮೩ ಮಿಲಿಯನ್ ರೂಪಾಯಿಗಳನ್ನು ಕೊಡುವುದಕ್ಕೆ ತಯಾರಾಗಿದ್ದಾರೆಂದು ಆ ಬಗ್ಗೆ ಅಗ್ರಿಮೆಂಟ್ ಆಗಿದೆಯೆಂದು ತಿಳಿದುಬಂದಿದೆ. ಈಗ ಏನು ೭.೫೦೦ ಸ್ಪಿಂಡಲ್ಸ್ ಕೆಲಸ ಮಾಡುತ್ತಿವೆ ಅವುಗಳ ಜೊತೆಗೆ ಇನ್ನೂ ೪,೩೦೦ ಸ್ಪಿಂಡಲ್ಸ್ ಯೂನಿಟ್ಸನ್ನು ಹಾಕಬಹುದು. ಅಲ್ಲಿಗೆ ೧೨,೦೦೦ ಯೂನಿಟ್ಸ್ ಆದರೂ ಸಹಾ ನಮ್ಮ ರಾಜ್ಯದಲ್ಲಿ ತಯಾರಾಗತಕ್ಕ ಅರ್ಧದಷ್ಟು ಈ ಸಿಲ್ಕನ್ನು ಉಪಯೋಗಿಸಿಕೊಂಡಂತಾಗುವುದಿಲ್ಲ. ಅದು ರಫ್ತಾಗುವ ಒಂದು ಪರಿಸ್ಥಿತಿ ಇದೆ. ಈ ಬಗ್ಗೆ ನಂಜನಗೂಡಿನಲ್ಲಿ ಒಂದು ಪ್ರೈವೇಟ್ ಮಿಲ್ ಬರಲಿದ್ದು ಅದು ಇನ್ನು ೨೦೦ ಮೆಟ್ರಿಕ್ ಟನ್ ಉಪಯೋಗಿಸಿಕೊಳ್ಳಬಹುದೆಂದು ತಿಳಿಸಿದ್ದಾರೆ. ಆದರೂ ಸಹಾ ಇನ್ನೂ ಸರ್ಪ್ಲಸ್ ಉಳಿಯತಕ್ಕದ್ದಕ್ಕೆ ಈಗಿರುವುದರ ಜೊತೆಗೆ ಇನ್ನೊಂದು ಹೊಸ ಫ್ಯಾಕ್ಟರಿ ಆಗಬೇಕೆಂದು ಈ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮೂರನೆಯದಾಗಿ, ರೇಷ್ಮೆ ವಿನಿಮಯ ಕೇಂದ್ರದ ಸ್ಥಾಪನೆ ಬಗ್ಗೆ ಹೇಳುತ್ತಾ, ಬೆಂಗಳೂರಿನಲ್ಲಿ ಕೋಲಿಗಳಿಂದ ಏನು ಅನ್ಯಾಯ ಆಗುತ್ತಿತ್ತು. ಅದನ್ನು ತಪ್ಪಿಸಲು ಈ ಬಗ್ಗೆ ಸರ್ಕಾರ ಒಂದು ಕಾನೂನನ್ನು ಜಾರಿಗೆ ತಂದಿತು. ಆದರೆ ಇವತ್ತು ಅವನ್ನು ಹೈಕೋರ್ಟಿನಲ್ಲಿ ಪ್ರಶ್ನೆ ಮಾಡಿ ಈ ಬಗ್ಗೆ ತಡೆ ಆಜ್ಞೆ ಇರುವುದರಿಂದ ವ್ಯವಸ್ಥಿತವಾಗಿ ಹೆಚ್ಚಿನ ಮಟ್ಟದಲ್ಲಿ ಕೆಲಸಗಳು ಆಗುತ್ತಾ ಇಲ್ಲ. ಆದ್ದರಿಂದ ಸರ್ಕಾರ ತನ್ನ ಅಡ್ವೊಕೇಟ್ ಜನರಲ್ ಅವರ ಮುಖಾಂತರ ಹೈಕೋರ್ಟಿನಲ್ಲಿ ಇದನ್ನು ಬೇಗ ಮೂವ್ ಮಾಡಿಸಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒತ್ತಾಯ ಮಾಡುವುದಾದರೆ ಇದರಿಂದ ಬಹಳ ಅನುಕೂಲವಾಗುತ್ತದೆಂದು ಇಷ್ಟು ಮಾತ್ರ ರೇಷ್ಮೆ ಉದ್ಯಮದ ಬಗ್ಗೆ ಹೇಳುತ್ತೇನೆ.

ಇನ್ನು ಭಾರಿ ನೀರಾವರಿಗಳ ಬಗ್ಗೆ ಹೇಳುವುದಾದರೆ, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅನೇಕ ಪ್ರಾಜೆಕ್ಟ್‌ಗಳನ್ನು ನೋಡಿಕೊಂಡು ಬಂದು ಎಲ್ಲೆಲ್ಲಿ ಏನೇನು ತೊಡಕುಗಳಿವೆ ಎನ್ನುವ ಅಂಶಗಳನ್ನು ಕಲೆಕ್ಟ್ ಮಾಡಿ ಕೊಟ್ಟಿರುವ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಕಬಿನಿ, ಮಲಪ್ರಭಾ, ಉಳಿದ ಒಂದೆರಡು ಡ್ಯಾಮ್‌ಗಳ ಬಗ್ಗೆ ಮಾತ್ರ ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ. ಕೃಷ್ಣರಾಜ ಸಾಗರದ ಬಗ್ಗೆ ಅಂಕಿಅಂಶಗಳು ಇಲ್ಲದಿರುವುದರಿಂದ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕಬಿನಿ ಯೋಜನೆಯಲ್ಲಿ ತಮಗೆ ಗೊತ್ತಿರುವ ಹಾಗೆ ನೀರನ್ನು ತಡೆದಿದ್ದೀರಿ ಸ್ವಲ್ಪ ಹೆಚ್ಚುಕಡಿಮೆ ೭೭ ಮೈಲಿಗಳ ಉದ್ದದವರೆಗೂ ನೀರನ್ನು ತಡೆದು ನಿಲ್ಲಿಸಿದ್ದೇವೆಂದು ಹೇಳಿದ್ದೀರಿ. ಈಗ ೭೭ ಮೈಲಿ ಉದ್ದದವರೆಗೂ ತಡೆದಿರುವ ನೀರನ್ನು ತೆಗೆದುಕೊಂಡು ೧೬ ಸಾವಿರ ಎಕರೆ ಜಮೀನನ್ನು ಸಾಗುವಳಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ನಾನು ಹೇಳುವುದೇನೆಂದರೆ ಇದು ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ಡ್ಯಾಮ್ ಕೆಲಸ ಪೂರ್ತಿಯಾಗಿ ಮುಗಿದಿದ್ದರೂ ಚಾನಲ್ ಕೆಲಸಗಳು ಪೂರ್ತಿಯಾಗಿಲ್ಲ. ಈ ಬಗ್ಗೆ ನಾವು ನೋಡಿಕೊಂಡು ಬಂದಿರುತ್ತೇವೆ. ಸುಮಾರು ೬೫ನೇ ಮೈಲಿಯಲ್ಲಿ ೨೫ ಮೈಲಿ ಚಾನಲ್ ಏರಿಯಾ ಕಾಂಟ್ರಾಕ್ಟ್ ಕೊಟ್ಟಿರುತ್ತೀರಿ. ಇದರಲ್ಲಿ ಕೆಲವು ಫಿನಿಷ್ ಆಗಿದೆ, ಕೆಲವು ಫಿನಿಷಿಂಗ್ ಸ್ಟೇಜ್‌ನಲ್ಲಿವೆ. ಆದರೆ ಎಲ್ಲ ಕೆಲಸಗಳು ಫಿನಿಷ್ ಆಗದಿದ್ದರೆ ೧೬ ಸಾವಿರ ಎಕರೆಗೆ ನೀರನ್ನು ವ್ಯವಸಾಯಕ್ಕೆ ಏನು ಕೊಡುತ್ತೇವೆಂದು ಹೇಳುತ್ತೀರಿ ಇದರಲ್ಲಿ ಅರ್ಧಭಾಗಕ್ಕೂ ಕೂಡ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ೧೭ನೇ ಮೈಲಿ ಚಾನಲ್ ಕವರ್‌ಡೆಕ್ಟ್ ಆಗಿ ಎರಡೂ ಕಡೆ ಚಾನಲ್ ಏನು ಮಾಡಿರುತ್ತೀರಿ ಅದು ಕುಸಿದು ಬಿದ್ದಿದೆ. ಅದನ್ನು ಕ್ಲಿಯರ್ ಮಾಡಿ ಕವರ್‌ಡೆಕ್ಟ್ ಮಾಡದೆಹೋದರೆ ನೀರು ನುಗ್ಗುವುದಿಲ್ಲ. ೭೭ ಮೈಲಿಗಳಲ್ಲಿ ೧೭ನೇ ಮೈಲಿ ಮತ್ತು ೨೯ನೇ ಮೈಲಿ ಹೀಗೆ ಐದು ಕಡೆಗಳಲ್ಲಿ ಕವರ್ ಡೆಕ್ಟ್ ಆಗಿ ಕೆಲಸ ಮಾಡುತ್ತಾ ಇದ್ದೀರಿ. ಈ ಕವರ್‌ಡೆಕ್ಟ್ ಕೆಲಸಕ್ಕಾಗಿ ಒಂದು ಫರ್‌ಫಾರ್‌ಮೆನ್ಸ್

ಬಡ್ಜೆಟ್ ಎಂದು ಹೇಳಿ ಇಲ್ಲಿ ಒದಗಿಸಿಕೊಟ್ಟಿದ್ದೀರಿ. ಅದರ ಪ್ರಕಾರ ಐಟಮ್ ೧೧-೧೨ ಕನ್‌ಸ್ಟ್ರಕ್ಷನ್ ಆಫ್ ಕವರ್‌ಡೆಕ್ಟ್ ೩. ೪, ೫, ೬. ೭ ಮತ್ತು ೮ ತಮ್ಮ ರಿಪೋರ್ಟ್ ಪ್ರಕಾರವಾಗಿ ೩೧ನೇ ಮಾರ್ಚ್ ೧೯೮೦ ರೊಳಗೆ ನೂರಕ್ಕೆ ನೂರು ಭಾಗ ಕೆಲಸ ಮುಗಿಯುತ್ತದೆ ಎಂದು ಹೇಳುತ್ತಿರುವುದು ಡೌಟ್ ಆಗಿರುತ್ತದೆ. ತಾವು ಬಹುಶಃ ಬಡ್ಜೆಟ್ ಅಧಿವೇಶನ ಮುಗಿದ ತಕ್ಷಣ ಮೊಟ್ಟಮೊದಲನೆಯದಾಗಿ ತಾವು ಪ್ರಾಜೆಕ್ಟನ್ನು ವಿಸಿಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಕೋಟ್ಯಾಂತರ ರೂಪಾಯಿಗಳನ್ನು ... ಹಾಕಿದ್ದೀರಿ. ಡ್ಯಾಮ್ ಕಟ್ಟಿ ನೀರನ್ನು ನಿಲ್ಲಿಸಿದ್ದೀರಿ, ಆದರೂ ಸಣ್ಣಪುಟ್ಟ ಕೆಲಸಗಳು ಅಂದರೆ ಫೇಜ್ ಚಾನಲ್ ಇವೆಲ್ಲ ಆಗುವುದರ ಜೊತೆಗೆ ೧೭ನೇ ಮೈಲಿಯಲ್ಲಿ ಕೆಲಸ ಮುಗಿಸದೆ ೭೭ನೇ ಮೈಲಿ ಕೆಲ ತೆಗೆದು ಕೊಂಡರೆ ರೈತರಿಗೆ ನೀರನ್ನು ಕೊಡುವುದು ಹೇಗೆ ? ಆ ದೃಷ್ಟಿಯಿಂದ ಕವರ್‌ಡೆಕ್ಟ್ ಕೆಲಸಗಳನ್ನು ಪೂರ್ತಿಯಾಗಿ ಮುಗಿಸಬೇಕೆಂದು ಹೇಳುತ್ತೇನೆ. ಮೊನ್ನೆ ತಾನೆ ನೋಟಿಫಿಕೇಷನ್‌ನಲ್ಲಿ ೮,೨೦೦ ಎಕರೆಗೆ ನೀರನ್ನು ಕೊಡುತ್ತೇವೆಂದು ಹೇಳಿರುತ್ತೀರಿ. ಈ ವರ್ಷ ನೀವು ನೀರನ್ನು ಕಬಿನಿಯಿಂದ ಎ... ಸಾವಿರ ಎಕರೆಗೆ ಕೊಡಲು ಸಾಧ್ಯವಾಗಬಹುದು. ಸರ್ಕಾರದವರು ಪ್ರಾಜೆಕ್ಟ್‌ಗಾಗಿ ಬೇಕಾದಷ್ಟು ಹಣವನ್ನು ಖರ್ಚುಮಾಡತಕ್ಕಂಥ ಕಾಲದಲ್ಲಿ ಉಳಿದಂಥ ಅಲ್ಪಸ್ವಲ್ಪ ಕೆಲಸಗಳು ಏನು ಇರುತ್ತವೆ ಅವುಗಳನ್ನು ತ್ವರಿತ ಗತಿಯಿಂದ ಮುಗಿಸಿ ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮಲಪ್ರಭಾ ಯೋಜನೆ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿರುತ್ತಾರೆ, ಅದರ ಬಗ್ಗೆ ಒಂದು ಮುಖ್ಯವಾದ ಅಂಶವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ಇಲಾಖೆಯು ಯಾವ ರೀತಿ ಕೆಲಸ ಮಾಡುತ್ತಿದೆ ಎಂದರೆ ಮಲಪ್ರಭಾ ಯೋಜನೆಯಿಂದ ಲಕ್ಷಾಂತರ ಎಕರೆ ಅಚ್ಚುಕಟ್ಟಿಗೆ ರೈಟ್ ಬ್ಯಾಂಕ್ ಮತ್ತು ಲೆಫ್ಟ್ ಬ್ಯಾಂಕ್ ಚಾನಲ್ ಎರಡು ಅಕ್ವಿಡೆಕ್ಟ್ ನವಲಗುಂದ, ನರಗುಂದದ ಮೇಲೆ ಹೋಗಬೇಕು. That is called Benne Kolla. As per your programme of 29-9-76 you have entrusted the work to a contractor and schedule of work is 30 months. We are in 1980 June. 1975ನೇ ಇಸವಿ ಮಾರ್ಚ್‌ನಲ್ಲಿ ನಿಲ್ಲಿಸಿದ್ದ ಕೆಲಸ ಈವರೆಗೂ ನಡೆಯಲಿಲ್ಲ. ಹೀಗೆ ವರ್ಷಗಳು ಉರುಳಿ ಹೋಗುತ್ತಿದೆ. ಕಂಟ್ರಾಕ್ಟರಿಗೂ ಸರ್ಕಾರಕ್ಕೂ ಡಿಸ್‌ಪ್ಯೂಟ್ ಮುಗಿಯುವುದು ಯಾವಾಗ ? ಈ ಡಿಸ್‌ಪ್ಯೂಟ್ ತೀರಬೇಕಾದರೆ ಇನ್ನು ಐದು ವರ್ಷಗಳನ್ನು ತೆಗೆದುಕೊಳ್ಳುತ್ತದೆ. Every year the cost of the project will be escalated by 10 to 15%. ಇದನ್ನು ತಮ್ಮ ಗಮನಕ್ಕೆ ನಾನು ತರಬಯಸುತ್ತೇನೆ. ಈ ಇಲಾಖೆಯವರಿಗೆ ಇದು ಗೊತ್ತಿಲ್ಲವೆಂದು ಹೇಳುತ್ತಿಲ್ಲ. I would like to read a sentence

> "During the year 1979-80 a budget provision of 1300 lakhs has been made with a view to create an additional irrigation potential of 21,000 hectares. But in view of major bottlenecks, *viz.* Bennihall aqueduct on M.R.B.C. and mudakavi tunnel on M.I.B.C. which cannot be completed by June 1980, the additional area available for creation will be only 11,980 hectares."

Why can't they solve them ? The length of the canal is about 6 K.M. If this cannot be completed in June 1980, next year the escalation will be higher. The lining of canal should also be done. What is the cost involved? Why can't you postpone and give water to Atchkats? The Department can have a programme of 4 to 5 years and complete the lining work also. It is very essential to spare more time for this Department because more than Rs. 7 crores have been invested on major irrigation projects like Harangi, Cabini, Malaprabha, Ghataprada and still you are unable to give water to the ryots. What is the prob-

lem? What is the bottleneck? ಈ ಇಲಾಖೆ ತಮ್ಮ ಹತ್ತಿರವೇ ಇರಲಿ. It is very essential. But you must spare some time for this department because we have already invested more than 7 crores of rupees on every major irrigation project. But still we are unable to give water to the people. What is the problem ? What is the bottle-neck ? ೭೦೦ ಕೋಟಿ ರೂಪಾಯಿಗಳನ್ನು ನಾವು ಖರ್ಚುಮಾಡಿಯೂ ರೈತರಿಗೆ ನೀರನ್ನೊದಗಿಸಲು ಸಾಧ್ಯವಾಗಲಿಲ್ಲ ಎಂದರೆ, ಇದಕ್ಕೆ ಕಾರಣ ಏನೆಂಬುದನ್ನು ನಾವು ಕಂಡು ಹಿಡಿಯಬೇಕು. ನೀರು ಇಲ್ಲವೆಂದಲ್ಲ, ಸಾಕಷ್ಟು ನೀರಿದೆ.

ಸ್ವಾಮಿ, ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಪಿ.ಡಬ್ಲ್ಯೂ.ಡಿ. ಯವರು ಕಂಟ್ರಾಕ್ಟರ್‌ಗಳಿಗೆ ಪೀಸ್ ವರ್ಕ್ ಕೊಡುವುದರಲ್ಲಿ ಅಧಿಕಾರಿಗಳಿಗೆ ಏನು ಕಿರುಕುಳವನ್ನು ಈ ರಾಜ ಕಾರಣಿಗಳು ಕೊಡುತ್ತಿದ್ದಾರೆ ಎನ್ನುವುದಕ್ಕೆ ಇಲ್ಲಿ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ರಾಜಕಾರಣಿಗಳು ಅಧಿಕಾರಿಗಳ ಜೊತೆ ಷಾಮೀಲಾಗಿ ಕೆಲಸ ಮಾಡುತ್ತಿದ್ದಾರೆಂಬುದಕ್ಕೆ ನನ್ನ ಹತ್ತಿರ ಒಂದು ಕಾಗದ ಇದೆ. ಇದರಲ್ಲಿ. ಇಂತಿಂಥ ಕೆಲಸವನ್ನು ಇಂತಿಂಥವರಿಗೇ ಕೊಡಬೇಕೆಂದು ಅಧಿಕಾರಿಗಳಿಗೆ ಡೈರೆಕ್ಷನ್ ಕೊಡುವ ರೀತಿಯಲ್ಲಿದೆ, ಇದರಿಂದ ಏನಾಗುತ್ತದೆ ಎಂದರೆ ಇಲಾಖೆಯಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಜೊತೆಗೆ ಸರ್ಕಾರದ ಹಣವೂ ಉಳಿಯುವುದಿಲ್ಲ. Some officers have colluded with politicians. The Mysore District Congress-I President writes a letter to the Executive Engineer, Chamarajanagar. The letter is almost in the form of a direction. I leave it to the Chief Minister for taking further action.

ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಮಾತನಾಡುವುದು ಬಹಳ ಇತ್ತು, ಆದರೆ ಕಾಲಾವಕಾಶ ಇಲ್ಲದಿರುವುದರಿಂದ ನನ್ನ ಭಾಷಣವನ್ನು ಇಷ್ಟಕ್ಕೇ ನಿಲ್ಲಿಸಿ, ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಚಾಮರಾಜ).— ಮಾನ್ಯ ಸಭಾಧ್ಯಕ್ಷರೇ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಬಹುಮುಖ್ಯವಾದ ಇಲಾಖೆಗಳನ್ನು ತಮ್ಮ ಹತ್ತಿರವೇ ಇಟ್ಟುಕೊಂಡಿದ್ದಾರೆ. ಇದರಲ್ಲಿ ದೇಶದ ಸಂಪತ್ತನ್ನು ಬೆಳೆಸತಕ್ಕ ಅತ್ಯಂತ ಪ್ರಮುಖ ಇಲಾಖೆಗಳು ಎಂದರೆ ವ್ಯವಸಾಯ ಮತ್ತು ಕೈಗಾರಿಕೆ. ಇದರ ಬಗ್ಗೆ ನಾವು ಯಾವ ದಿಸೆಯಲ್ಲಿ ಆಲೋಚನೆ ಮಾಡುತ್ತಿದ್ದೇವೆ ಎಂಬುದನ್ನು ತಮ್ಮ ಮುಖಾಂತರ ನಾನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಪಟ್ಟಿದ್ದೇನೆ. ಯಾವದೇಶ ಕೈಗಾರಿಕೆಯಲ್ಲಿ ಅಭಿವೃದ್ಧಿಯಾಗುವುದಿಲ್ಲ ಆ ದೇಶ ಎಷ್ಟು ವರ್ಷ ಕಾಲವಾದರೂ ಸಂಪದ್ಯುಕ್ತ ರಾಷ್ಟ್ರ ಆಗುವುದಿಲ್ಲ. ಯಾವ ದೇಶದಲ್ಲಿ ಕೈಗಾರಿಕೆ ಅಭಿವೃದ್ಧಿ ಹೊಂದಿರುತ್ತದೆ ಆ ದೇಶ ಬಹಳ ಸಿರಿವಂತ ದೇಶವಾಗಿರುತ್ತದೆ, ವ್ಯವಸಾಯ ಮತ್ತು ಕೈಗಾರಿಕೆ ಯಾವ ಯಾವ ದೇಶದಲ್ಲಿ ಎಷ್ಟೆಷ್ಟುಮಟ್ಟಿಗೆ ಇದೆ, ಅವರು ಎಷ್ಟರಮಟ್ಟಿಗೆ ಮುಂದುವರಿದಿದ್ದಾರೆ ಎಂಬ ಬಗ್ಗೆ ನಾನು ಕೆಲವು ಅಂಕಿಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ.

	ದೇಶಗಳು	ವ್ಯವಸಾಯದಲ್ಲಿ ತೊಡಗಿರುವವರು	ಕೈಗಾರಿಕೆಯಲ್ಲಿ ತೊಡಗಿರುವವರು
೧.	ಯುನೈಟೆಡ್ ಸ್ಟೇಟ್ಸ್	೩ ಕೋಟಿ	೮ ಕೋಟಿ
೨.	ಯುನೈಟೆಡ್ ಕಿಂಗ್‌ಡಂ	೬½ ಲಕ್ಷ	೮೧ ಲಕ್ಷ
೩.	ಫ್ರಾನ್ಸ್	೨೩.೫೦ ಲಕ್ಷ	೫೭.೮೪ ಲಕ್ಷ
೪.	ಜರ್ಮನ್ ಡೆಮೊಕ್ರಾಟಿಕ್ ರಿಪಬ್ಲಿಕ್	೮.೭೪ ಲಕ್ಷ	೩೩.೪೨ ಲಕ್ಷ
೫.	ಫೆಡರೆಲ್ ರಿಪಬ್ಲಿಕ್ ಜರ್ಮನಿ	೧೫.೫ ಲಕ್ಷ	೧ ಕೋಟಿ
೬.	ಜಪಾನ್	೫೮ ಲಕ್ಷ	೧.೩೦ ಕೋಟಿ
೭.	ಭಾರತ	೧೩ ಕೋಟಿ	೧.೭೦ ಕೋಟಿ
೮.	ಕರ್ನಾಟಕ	೪೦.೭೩ ಲಕ್ಷ	೧೦.೩೮ ಲಕ್ಷ

ನಾನು ಮೊದಲೇ ಹೇಳಿದಂತೆ ಈ ದೇಶದಲ್ಲಿ ಕೈಗಾರಿಕೆಯನ್ನು ಒಂದು ದೊಡ್ಡ ಉದ್ಯಮವನ್ನಾಗಿ ಮಾಡಲು ಅವಕಾಶವನ್ನು ಕಲ್ಪಿಸಿಕೊಡದೆ ಕೇವಲ ವ್ಯವಸಾಯದಲ್ಲೇ ಬಹಳ ಜನರನ್ನು ತೊಡಗಿಸುವುದಾದರೆ ನಮ್ಮ ದೇಶ ಅಭಿವೃದ್ಧಿ ಆಗುವುದು ಅಸಾಧ್ಯವಾಗುತ್ತದೆ. ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲು ಅತ್ಯಗತ್ಯವಾಗಿ ಬೇಕಾದ ಖನಿಜ ಸಂಪತ್ತು ಇಲ್ಲಿಗೆ. ಉದಾಹರಣೆಗೆ ಹೇಳುವುದಾದರೆ ೨½ ಮಿಲಿಯನ್ ಟನ್ ಐರನ್ ಓರ್ ಇದೆ, ೧ ಮಿಲಿಯನ್ ಟನ್ ಕಾಪರ್ ಇದೆ, ೩-೪ ಮಿಲಿಯನ್ ಟನ್ ಬಾಕ್ಸೈಟ್ ನಿಕ್ಷೇಪ ಇದೆ, ಇಷ್ಟೊಂದು ಖನಿಜ ಸಂಪತ್ತಿದ್ದರೂ ನಾವು ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಸರ್ಕಾರದವರು ಈಗಲಾದರೂ ಇದರ ಕಡೆ ಗಮನಹರಿಸಬೇಕು. ಭಾರತ ರತ್ನ ಡಾ॥ ಸರ್. ಎಂ. ವಿಶ್ವೇಶ್ವರಯ್ಯನವರು ಭದ್ರಾವತಿಯಲ್ಲಿ ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ಸಲಹೆ ನೀಡಿದಾಗ ಆಗಿನ ನಮ್ಮ ಮೈಸೂರು ಸರ್ಕಾರದವರು ವಿರೋಧ ಮಾಡಿದರು, ಅಂದಿನ ಮಹಾರಾಜರೂ ವಿರೋಧ ಮಾಡಿದರು. "ತಾಯಿನಾಡು" ಪತ್ರಿಕೆಯವರು ದೊಡ್ಡದಾಗಿ ಹೆಡ್ಡಿಂಗ್ ಹಾಕಿ "ಭದ್ರಾ ಆಹುತಿ" ಎಂದು ಪ್ರಕಟಿಸಿದರು. ಅಲ್ಲದೆ ಈ ಸ್ಟೀಲ್ ಇಂಡಸ್ಟ್ರಿಯನ್ನು ಪ್ರಾರಂಭ ಮಾಡಿದರೆ ಆಹುತಿಯಾಗುತ್ತದೆಂದು ಸಾರಿದರು. ಆದರೂ ಮಾನ್ಯ ವಿಶ್ವೇಶ್ವರಯ್ಯನವರು ಧೈರ್ಯವಾಗಿ ತಮ್ಮ ಸ್ವಂತ ಬಂಡವಾಳವಾದ ೫೦ ಸಾವಿರ ರೂಪಾಯಿಗಳನ್ನು ಹಾಕಿ ಈ ಕಾರ್ಖಾನೆಯನ್ನು ಪ್ರಾರಂಭಮಾಡಿದರು. ಅದು ಒಳ್ಳೆಯ ಅಭಿವೃದ್ಧಿ ಹಾದಿಯಲ್ಲಿ ನಡೆದುಬಂದಿತ್ತು. ಅಂಥ ಫ್ಯಾಕ್ಟರಿಯಲ್ಲಿ ಇವತ್ತಿನ ದಿವಸ ೬೮೩ ಲಕ್ಷ ರೂಪಾಯಿಗಳ ನಷ್ಟವನ್ನು ಇವರು ತೋರಿಸುತ್ತಿದ್ದಾರೆ. ಸ್ವಾಮಿ, ನಾನು ತಮಗೆ ಹೇಳುತ್ತೇನೆ. "ಭದ್ರಾ ಆಹುತಿ" ಅವತ್ತು ಆಗಿರಲಿಲ್ಲ. ಇವತ್ತು ಈ ಭದ್ರಾ ಆಹುತಿ ಆಗಿದೆ. ಟಾಟಾ ಬಿರ್ಲಾ ಅವರುಗಳು ಕಬ್ಬಿಣದ ಕಾರ್ಖಾನೆಗಳನ್ನು ನಡೆಸಿಕೊಂಡು ಕೋಟ್ಯಾಂತರ ರೂಪಾಯಿಗಳಷ್ಟು ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಅವರ ಕಾರ್ಖಾನೆಯಲ್ಲಿ ಲಾಭ ಬರುವುದೇನು ? ನಮ್ಮ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಈ ಕಾರ್ಖಾನೆಯಲ್ಲಿ ಲಾಭ ಬರದಿರುವುದೇನು ? ಇದಕ್ಕೆ ಯಾರು ಕಾರಣರು ? ನಿಮ್ಮ ಇಲಾಖೆಯವರು ಏನು ಮಾಡುತ್ತಿದ್ದಾರೆ ? ನಿಮ್ಮ ಅಧಿಕಾರಿಗಳಿಗೆ ಸಹಸ್ರಾರು ರೂಪಾಯಿಗಳ ಸಂಬಳವನ್ನು ಕೊಟ್ಟು ಅಲ್ಲಿ ಇಟ್ಟಿದ್ದೀರಿ. ಸರ್ಕಾರ ಏನಾದರೂ ಕಣ್ಣು ಮುಚ್ಚಿ ಕುಳಿತಿದೆಯೋ ಎಂದು ನಾನು ಕೇಳಬಯಸುತ್ತೇನೆ. ಭದ್ರಾವತಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳನ್ನು ಕೈಗಾರಿಕಾ ಕ್ಷೇತ್ರದಲ್ಲಿ ಸಂಪದ್ಯುಕ್ತ ಪ್ರದೇಶಗಳನ್ನು ಮಾಡಬಹುದಾಗಿತ್ತು. ಆದರೆ ಮಾಡಲಿಲ್ಲ. ಭದ್ರಾವತಿಯಲ್ಲಿ ಈ ಕಬ್ಬಿಣದ ಕಾರ್ಖಾನೆ ಸ್ಥಾಪನೆ ಆದಮೇಲೆ ಅಲ್ಲಿ ಆಗತಕ್ಕ ಉತ್ಪನ್ನವನ್ನು ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸಿ ಅಲ್ಲಿ ಚಿಕ್ಕಪುಟ್ಟ ಕೈಗಾರಿಕೋದ್ಯಮಗಳನ್ನು ಅಂದರೆ ಐರನ್ ರಾಡ್ಸ್, ಐರನ್ ಷೀಟ್ಸ್, ಬೋಲ್ಟ್ ನಟ್ಸ್ ಇನ್ನೂ ಮುಂತಾದುವುಗಳನ್ನು ತಯಾರು ಮಾಡಲು ವ್ಯವಸ್ಥೆ ಮಾಡಿದರೆ, ಅದರಿಂದ ನಿರುದ್ಯೋಗ ಸಮಸ್ಯೆಯನ್ನು ಕೂಡ ಪರಿಹರಿಸಲು ಸಾಧ್ಯವಾಗುತ್ತದೆ. ನಿಮ್ಮ ಅಧಿಕಾರಿಗಳು ಇದರ ಬಗ್ಗೆ ಸೂಕ್ತ ಗಮನ ಹರಿಸಿದಲ್ಲಿ ನಷ್ಟ ಏತಕ್ಕೆ ಆಗುತ್ತದೆಂದು ನಾನು ಕೇಳ ಬಯಸುತ್ತೇನೆ.

ಸ್ವಾಮಿ, ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಇಷ್ಟು ನಷ್ಟವಾಗುವುದಕ್ಕೆ ಕಾರಣ ಏನು ಎಂಬುದನ್ನು ನಾನು ಪೂರ್ಣವಾಗಿ ಹೇಳುವುದಕ್ಕೆ ಹೋಗದೆ ಒಂದೇ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಅಲ್ಲಿ ನಿಮ್ಮ ಅಧಿಕಾರಿಗಳಿಂದ ಅನೇಕ ರೀತಿಯ ಅವ್ಯವಹಾರಗಳು ಆಗುತ್ತಿವೆ. ಆ ಕಾರ್ಖಾನೆಯಲ್ಲಿ ಫಸ್ಟ್ ಕ್ವಾಲಿಟಿ ಕಬ್ಬಿಣ ಉತ್ಪತ್ತಿಯಾಗುತ್ತದೆ. ಅದಕ್ಕೆ ನಿಮ್ಮ ಅಧಿಕಾರಿಗಳು ಸೆಕೆಂಡ್ ಕ್ವಾಲಿಟಿ ಎಂದು ಮುದ್ರೆಯನ್ನು ಒತ್ತಿ ಕಳುಹಿಸಿಕೊಡುತ್ತಾರೆ. ಮತ್ತೆ ಅದೇ ಮಾಲನ್ನು ಅಂಗಡಿಯವರು ಫಸ್ಟ್ ಕ್ವಾಲಿಟಿ ಎಂದು ಮುದ್ರೆ ಒತ್ತಿ ಲೋಕೋಪಯೋಗಿ ಇಲಾಖೆಗೆ ಮಾರಾಟ ಮಾಡುತ್ತಾರೆ. ಇದು ಬಹಳ ಮುಖ್ಯವಾದ ಅಂಶ. ಸರ್ಕಾರದವರು ಇದನ್ನು ಗಮನಿಸಬೇಕು. ನಾನು ತಮಗೆ ಹೇಳುವುದೇನೆಂದರೆ ಈ ಕಾರ್ಖಾನೆಯಲ್ಲಿ ಉತ್ಪನ್ನವಾಗತಕ್ಕ ಸ್ಟೀಲನ್ನು ಪ್ರತಿಯೊಂದು ಗ್ರಾಮಾಂತರ ಪ್ರದೇಶಗಳಿಗೆ ಆಯಾಯ ತಾಲ್ಲೂಕುಗಳ ಮೂಲಕ ಸರಬರಾಜು ಮಾಡಿ ಗೃಹ ಕೈಗಾರಿಕೆಗಳಿಂದ ಏನೇನು ವಸ್ತುಗಳನ್ನು ತಯಾರಿಸಬಹುದೋ ಅವುಗಳನ್ನು ತಯಾರಿಸಲು ವ್ಯವಸ್ಥೆ ಮಾಡಬೇಕು. ಉದಾಹರಣೆಗೆ ಸೈಕಲ್ ರಿಂಗಳು, ಸ್ಪೋಕ್ಸ್, ಮಡ್ ಗಾರ್ಡ್ ಮುಂತಾದವುಗಳನ್ನು ಮಾಡುವುದು. ಚಿತ್ರದುರ್ಗ, ಮತ್ತು ಬೆಳಗಾಂಗಳಲ್ಲಿ ೩-೪ ಮಿಲಿಯನ್ ಟನ್ ಬಾಕ್ಸೈಟ್ ಇದೆ, ಅದರಂತೆಯೇ ಅಲ್ಲಿ ಅಲ್ಯೂಮಿನಿಯಂ ಫ್ಯಾಕ್ಟರಿ ಇದೆ. ಅಲ್ಲಿ ಸಹಸ್ರಾರು ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ಗೃಹಕೈಗಾರಿಕೆಗಳನ್ನು ಸ್ಥಾಪಿಸಲು ತಾವು ಪ್ರಯತ್ನ ಮಾಡಬೇಕು. ಈ ವಿಚಾರವನ್ನು ಸರ್ಕಾರದವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

೩-೩೦ ಪಿ. ಎಂ.

ಹೀಗೆ ಸರ್ಕಾರದವರು ಕೈ ಇಟ್ಟಂತಹ ಅನೇಕ ಇಂಡಸ್ಟ್ರೀಸ್‌ಗಳು ನಷ್ಟದಲ್ಲಿ ನಡೆಯುತ್ತಾ ಇವೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಸರ್ಕಾರದ ಕಾರ್ಯಾಚರಣೆಯಲ್ಲಿದ್ದಾಗ ನಮ್ಮ ರೆವ್ಕೋ ಫ್ಯಾಕ್ಟರಿ ನಾಲ್ಕೂವರೆ ಕೋಟಿ ರೂಪಾಯಿಗಳ ನಷ್ಟ ಅನುಭವಿಸುತ್ತಿದ್ದುದನ್ನು ಅದೇ ಕೇಂದ್ರ ಸರ್ಕಾರ ವಹಿಸಿಕೊಂಡ ಎರಡನೇ ವರ್ಷದಲ್ಲಿ $4\frac{1}{2}$ ಲಕ್ಷ ರೂಪಾಯಿಗಳಷ್ಟು ಟ್ಯಾಕ್ಸ್ ಕೊಟ್ಟಿದ್ದಾರೆ. ಇದೇ ಕಾರ್ಖಾನೆಯಲ್ಲಿ ಯಾವ ಯಂತ್ರಗಳು ಇದ್ದವೋ ಅದೇ ಯಂತ್ರಗಳು. ಅದೇ ಉದ್ಯೋಗಿಗಳು ಅದೇ ಕಾರ್ಮಿಕರು ಇದ್ದುಕೊಂಡೇ ಇವತ್ತು ಆ ಕಾರ್ಖಾನೆ $1\frac{1}{2}$ ಲಕ್ಷ ರೂಪಾಯಿಗಳಷ್ಟು ಟ್ಯಾಕ್ಸ್ ಕೊಡುವಂತಹ ಮಟ್ಟಕ್ಕೆ ಬಂದಿರಬೇಕಾದರೆ ಹಿಂದೆ ಇದೇ ಕಾರ್ಖಾನೆ ನಷ್ಟ ಅನುಭವಿಸಲಿಕ್ಕೆ ಕಾರಣವೇನು ? ಸರ್ಕಾರದ ಆಡಳಿತದಲ್ಲಿರುವ ಸುಮಾರು ೧೮ ಸಂಸ್ಥೆಗಳಲ್ಲಿ ಈ ಒಂದನ್ನು ಬಿಟ್ಟು ಉಳಿದ ೧೭ ಕಾರ್ಖಾನೆಗಳು ನಷ್ಟ ಅನುಭವಿಸುತ್ತಿವೆಯೆಂದು ಸರ್ಕಾರದವರೇ ಕೊಟ್ಟ ವರದಿಯಿಂದ ನಮಗೆ ಗೊತ್ತಾಗುತ್ತಿದೆ ಉದಾಹರಣೆಗೆ ಮಂಡ್ಯದಲ್ಲಿ ಷುಗರ್ ಫ್ಯಾಕ್ಟರಿ ಇದೆ : ಇವತ್ತು ಸಕ್ಕರೆ ಬೆಲೆ ಏರಿದೆ, ಕಬ್ಬಿನ ಬೆಲೆ ಏರಲಿಲ್ಲ ; ಆದರೂ ಅಲ್ಲಿ ಇವತ್ತಿಗೂ ಕೂಡಾ ೩ ಕೋಟಿ ರೂಪಾಯಿಗಳ ನಷ್ಟ ಸಂಭವಿಸಿದೆ ಎಂದರೆ ಹೇಗೆ ? ಇನ್ನು ಮೈಸೂರು ಜಿಲ್ಲೆಯಲ್ಲಿ ಇಂಡಸ್ಟ್ರಿಗೆ ಸಂಬಂಧಪಟ್ಟ ಹಾಗೆ ೩ ಸಿಲ್ಕ್ ಫ್ಯಾಕ್ಟರಿಗಳು ಇವೆ, ಅವುಗಳಿಂದ ರೈತನಿಗೆ ಆಗಲೀ, ಅಲ್ಲಿಯ ಕಾರ್ಮಿಕರಿಗಾಗಲೀ ಯಾವ ಅನುಕೂಲವಿಲ್ಲದೆ ಇದ್ದರೂ ಕೂಡ ಅವು ಒಂದು ಕೋಟಿ ರೂಪಾಯಿಗಳಷ್ಟು ನಷ್ಟ ಅನುಭವಿಸುತ್ತಿರುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಇನ್ನೂ ಕೆಲವು ಸಂಸ್ಥೆಗಳು ಮೈಸೂರು ಜಿಲ್ಲೆಯಲ್ಲಿವೆ ; ಅದರಲ್ಲಿ ಒಂದಾದ ಮೈಸೂರು ಕ್ರೋಮಿಯಮ್ ಫ್ಯಾಕ್ಟರಿ ಕೂಡಾ ೧೫ ರಿಂದ ೨೫ ಲಕ್ಷ ರೂಪಾಯಿಗಳ ನಷ್ಟ ಅನುಭವಿಸುತ್ತಿದೆ ಎಂದು ನಾವು ಕೇಳಿದ್ದೇವೆ. ಈ ರೀತಿ ಸರ್ಕಾರಿ ಸ್ವಾಮ್ಯದ ಎಲ್ಲಾ ಇಂಡಸ್ಟ್ರೀಸ್‌ಗಳು ನಷ್ಟ ಅನುಭವಿಸುತ್ತಿವೆ ಎಂದು ಹೇಳುವುದಾದರೆ, ಸರ್ಕಾರ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಅದಕ್ಕೆ ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುವುದು ಏನೆಂದರೆ, ಇತ್ತ ಕಡೆ ಸ್ವಲ್ಪ ಗಮನ ಹರಿಸಿ-ಪರಿಶೀಲನೆ ಮಾಡಿ, ಯಾವ ಕೈಗಾರಿಕೆಗಳು ಯಾವ ರೀತಿಯಲ್ಲಿ ನಡೆಯುತ್ತಿವೆ, ಯಾವ ರೀತಿಯಲ್ಲಿ ನಡೆಯಬೇಕು. ಯಾವ ರೂಪದಲ್ಲಿ ಇರಬೇಕು ಎನ್ನುವುದರ ಬಗ್ಗೆ ಈ ಸದನದ ಮಾನ್ಯ ಸದಸ್ಯರನ್ನೊಳಗೊಂಡ ಮತ್ತು ತಜ್ಞರನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿ ಈ ಫ್ಯಾಕ್ಟರಿಗಳು ಮತ್ತು ಪ್ರಾಜೆಕ್ಟ್‌ಗಳು ಏನು ಇವೆ, ಇವೆಲ್ಲದರ ಲೋಪದೋಷಗಳನ್ನು ನೋಡಿ ಸರಿಪಡಿಸಲಿಕ್ಕೆ ಮಾನ್ಯ ಮುಖ್ಯಮಂತ್ರಿಯವರು ಈ ಕಡೆ ಗಮನ ಹರಿಸಬೇಕೆಂದು ಹೇಳುತ್ತೇನೆ ಈ ರೀತಿಯ ನಷ್ಟಕ್ಕೆ ಕಾರಣ ಏನು ? ಇದಕ್ಕೆ ಅನೇಕ ಕಾರಣಗಳು ಇವೆ. ಅದರಲ್ಲಿ ಒಂದು ಮುಖ್ಯವಾದ ಕಾರಣ ಏನು ಎಂದರೆ ಅಲ್ಲಿ ಇರತಕ್ಕಂಥ ಅಡ್ಮಿನಿಸ್ಟ್ರೇಷನ್‌ನಲ್ಲಿ ಇರುವ ಲೋಪದೋಷವೇ ಮುಖ್ಯ ಕಾರಣ. ಮತ್ತೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಇತ್ತೀಚೆಗೆ ಆಗುತ್ತಿರುವ ವರ್ಗಾವರ್ಗಿಯೂ ಇದಕ್ಕೆ ಕಾರಣವೆಂದು ನಾವು ಕೇಳುತ್ತಾ ಇದ್ದೇವೆ. ಮಾನ್ಯ ಜೆ. ಎಚ್. ಪಟೇಲ್ ರವರು ಮಾತನಾಡುವಾಗ ಹೇಳಿದರು, ಈ ವರ್ಗಾವರ್ಗಿ ನಡೆಯುವಾಗ ಒಬ್ಬರನ್ನು ಒಂದು ಕಡೆಗೆ ವರ್ಗ ಮಾಡಬೇಕಾದರೆ ಇಷ್ಟಿಷ್ಟು ಹಣ ಕೊಡಬೇಕೆಂದು ತೀರ್ಮಾನವಾಗಿರಬಹುದು ಎಂದು. ಇದಕ್ಕೆ ಮಂತ್ರಿಗಳು, ಎಂ. ಎಲ್. ಎ. ಗಳು ಹಾಗೂ ಅಧಿಕಾರಿಗಳು ಕಾರಣರು ಎಂದು ಹೇಳುವುದಕ್ಕೆ ಬದಲಾಗಿ ಇದರಲ್ಲಿ ಎಲ್ಲರೂ ಒಂದಲ್ಲ ಒಂದು ರೀತಿಯಿಂದ ಇದಕ್ಕೆ ಕಾರಣರಾಗಿರಬಹುದು ಎಂದು ನಾನು ಹೇಳುತ್ತೇನೆ. ಈ ವರ್ಗಾವರ್ಗಿ ಮಾಡುವುದರಲ್ಲೇ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆಯುತ್ತಿದೆ ಎಂದು ನಾವು ಕೇಳಿದ್ದೇವೆ. ಅದಕ್ಕೋಸ್ಕರವೇ ನಾನು ಈ ಒಂದು ವಿಷಯದಲ್ಲಿ ಟ್ರಾನ್ಸ್‌ಫರ್ ಪ್ರೊಟೆಕ್ಷನ್ ಬಿಲ್ ತರಬೇಕೆಂದು ಹೇಳುತ್ತೇನೆ. ಈ ಭ್ರಷ್ಟಾಚಾರ ಏನು ಇದೆ........

ಶ್ರೀ ವಿ.ವಿ. ಪತ್ತಾರ್.—ಸಾರ್ವಜನಿಕ ರಂಗದಲ್ಲಿ, ಸರ್ಕಾರದ ಅಧಿಪತ್ಯದಲ್ಲಿ ನಡೆಯುವ ಸುಮಾರು ೨೦ ಕಂಪನಿಗಳಲ್ಲಿ, ಕೆಲವು ಕಂಪನಿಗಳಲ್ಲಿ ಮಾತ್ರ ಸುಮಾರು ೬೪.೬೪ ಲಕ್ಷ ರೂಪಾಯಿಗಳು ಘಾಯಿದೆ ಆಗಿದೆ. ಆದರೆ ಮಾನ್ಯ ಸದಸ್ಯರು ಎಲ್ಲಾದರಲ್ಲೂ ಲುಕ್ಸಾನು ಆಗಿದೆ ಎಂದು ಹೇಳುವುದು ಸರಿಯಲ್ಲ......

ಶ್ರೀ ಎಚ್. ಗಂಗಾಧರನ್.—ಮಾನ್ಯ ಸದಸ್ಯರು ಹೇಳಿರುವುದರ ಬಗ್ಗೆ ನಾನು ಉತ್ತರ ಕೊಡಬೇಕೆಂದರೆ, ಕೊಡುತ್ತೇನೆ. ಆದರೆ ಈ ಬಗ್ಗೆ ಸರ್ಕಾರದವರು ಏನು ಒಂದು ವರದಿ ಕೊಟ್ಟಿದ್ದಾರೆ ಅದರ ಜೊತೆಗೆ ಸರ್ಕಾರದವರು ತೀರ್ಮಾನ ಮಾಡಿರುವ ಪ್ರಕಾರ ಎಷ್ಟು ಕಂಪನಿಗಳಲ್ಲಿ ಎಷ್ಟೆಷ್ಟು ಲುಕ್ಸಾನು ಆಗಿದೆ ಎಂಬ ಬಗ್ಗೆ ಅಂಕಿಸಂಖ್ಯೆಗಳು ನನ್ನ ಹತ್ತಿರ ಇರುವ ಪಟ್ಟಿಯಲ್ಲಿ ಇದೆ. ನಾನು ಕೇಳುವುದು ಇಷ್ಟೇ, ಈ ನಷ್ಟಕ್ಕೆ ಕಾರಣವೇನು ? ಇದರಲ್ಲಿ ನಷ್ಟ ಅನುಭವಿಸುತ್ತಿರುವ ಮೂರು ಮುಖ್ಯ ಇಲಾಖೆಗಳು ಇವೆ,

ಅವು ಯಾವುವು ಎಂದರೆ ಪಿ.ಡಬ್ಲ್ಯೂ.ಡಿ, ಪವರ್ ಕಾರ್ಪೊರೇಷನ್. ಮತ್ತು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್, ನಮ್ಮ ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಆಗುತ್ತಿರುವ ಅನ್ಯಾಯದ ಪರಂಪರೆಯನ್ನು ನೋಡಿದರೆ ನಮ್ಮ ದೇಶವನ್ನೇ ನುಂಗುತ್ತದೆನೋ ಎಂಬ ಕಲ್ಪನೆ ಬರುತ್ತದೆ. ಇದನ್ನು ಸರಿಪಡಿಸಲಿಕ್ಕೆ ಸಾಧ್ಯವೋ ಅಥವಾ ಸಾಧ್ಯವಿಲ್ಲವೋ ಎಂದು ನಮಗೆ ಅನುಮಾನ ಬರುತ್ತದೆ. ಇಲ್ಲಿ ವರದಿಯಲ್ಲಿ ಅದರ ಬಗ್ಗೆ ವಿವರ ಕೊಟ್ಟಿದ್ದಾರೆ. ನಮ್ಮ ಆರೋಗ್ಯ ಇಲಾಖೆಯು ಆಸ್ಪತ್ರೆಗಳಿಗೆ ಯಾವುದು ಸಲಕರಣೆಗಳು ಬೇಕೋ ಅದಕ್ಕೆ ಟೆಂಡರ್ ಕರೆಯದೆ ಕೊಂಡುಕೊಂಡು ಅವುಗಳ ಉಪಯೋಗವಿಲ್ಲದೆ ಕೊನೆಗೆ ಬಿಸಾಕುತ್ತಿದ್ದಾರೆ. ಇನ್ನು ಪಿ.ಡಬ್ಲ್ಯೂ.ಡಿ. ಸ್ಟೋರ್ ಪರ್ಚೇಸ್‌ನಲ್ಲಿ ಲಕ್ಷಾಂತರ, ಕೋಟಿ ರೂಪಾಯಿಗಳು ಪೋಲಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅದಕ್ಕಿಂಥ ಹೆಚ್ಚು ಅನ್ಯಾಯ ಬೇರೆ ಎಲ್ಲೂ ಆಗಿಲ್ಲ. ಅದನ್ನು ನಡೆಸುವಂತಹ ಅಧಿಕಾರಿಗಳು ಯಾರು ಇದ್ದಾರೆ ಅವರಿಗೆ ಸರಿಯಾಗಿ ನಡೆಸುವ ಸಾಮರ್ಥ್ಯ ಇದೆಯೋ ಇಲ್ಲವೋ ಗೊತ್ತಾಗುತ್ತಿಲ್ಲ. ಇವತ್ತು ಪತ್ರಿಕೆಯಲ್ಲಿ ನಾವು ನೋಡುತ್ತಿದ್ದೇವೆ ಈ ಮೆಡಿಕಲ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ಒಂದು ಡಿ.ಎಂ.ಸಿ. ಸೆಟ್‌ಗೆ ೧೫೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ, ಅದಕ್ಕೆ ಮಾರ್ಕೆಟ್‌ನಲ್ಲಿ ೧೮೫ ರೂಪಾಯಿಗಳು ಆಗುತ್ತದೆ. ವಾಕ್ಸಿನ್ ಸೈಪ್‌ಗೆ ೧೭೫ ರೂಪಾಯಿ ಕೊಟ್ಟಿದ್ದಾರೆ, ಅದು ಮಾರ್ಕೆಟ್‌ನಲ್ಲಿ ೬½ ರೂಪಾಯಿಗಳಾಗುತ್ತದೆ ಒಂದು ಸೀಷರ್‌ಗೆ ೪೫ ರೂಪಾಯಿ ಕೊಟ್ಟಿದ್ದಾರೆ. ಅದು ಮಾರ್ಕೆಟ್‌ನಲ್ಲಿ 6½ ರೂಪಾಯಿಗಳಾಗುತ್ತದೆ, ಈ ರೀತಿ ವ್ಯವಹಾರ ಅಲ್ಲಿ ನಡೆಯುತ್ತಿದೆ. ಯಾರು ಈ ಇಲಾಖೆಯನ್ನು ನಡೆಸುತ್ತಿದ್ದಾರೆ ಅವರು ಯಾವ ಒಂದು ವಿಚಾರಣೆಯನ್ನು ಮಾಡದೆ ಇದನ್ನೆಲ್ಲಾ ಪರ್ಚೇಸ್ ಮಾಡಿದ್ದಾರೆ. ಇದನ್ನು ನೋಡಿದರೆ ಸರ್ಕಾರ ನಿಜವಾಗಿಯೂ ಜೀವಂತವಾಗಿದೆಯೇ ಎಂದು ನಾನು ಪ್ರಶ್ನೆ ಕೇಳಲಿಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಏನು ಅಧಿಕಾರ ವಹಿಸಿಕೊಂಡಿದೆ ಏನು ಆಡಳಿತ ನಡೆಸುತ್ತಾ ಇದೆ ಇವನ್ನೆಲ್ಲಾ ನೋಡಿದರೆ ಎಲ್ಲಿ ಏನು ನಡೆಯುತ್ತಿದೆ ಎಂಬುದು ಯಾರಿಗೂ ಗೊತ್ತಿಲ್ಲ. ನಾನು ಮಿಡ್ಲ್ ಸ್ಕೂಲಿನಲ್ಲಿ ಓದುತ್ತಿರುವಾಗ ಒಬ್ಬ ಹುಡುಗ ಅವರ ತಂದೆಗೆ, ಅಡ್‌ಜಕ್ಟೀವ್‌ಗೆ ಇಷ್ಟು ಗ್ರಾಮರ್‌ಗೆ ಇಷ್ಟು ಎಂದು ಅನೇಕ ಪಠ್ಯಪುಸ್ತಕದಲ್ಲಿರುವ ಪದಗಳಿಗೆಲ್ಲಾ ಫೀಜು ಕೊಡಬೇಕೆಂದು ಕಾಗದ ಬರೆಯುತ್ತಿದ್ದ. ಆ ಹುಡುಗನ ತಂದೆಗೆ ವಿದ್ಯೆಯ ಬಗ್ಗೆ ಏನೂ ಗೊತ್ತಿರಲಿಲ್ಲ. ಆದಕಾರಣ ಆ ಹುಡುಗ ಆ ರೀತಿ ಕಾಗದ ಬರೆದು ಅವರ ತಂದೆಯಿಂದ ದುಡ್ಡು ಪಡೆಯುತ್ತಿದ್ದ ; ಅದೇ ರೀತಿಯಲ್ಲಿ ಇಲ್ಲಿಯು ವ್ಯವಹಾರ ನಡೆಯುತ್ತಿದೆ, ಮೆಡಿಕಲ್ ಟರ್ಮ್ಸ್ ಯಾರಿಗೂ ಗೊತ್ತಾಗುವುದಿಲ್ಲ. ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಇನ್ನಾವುದೇ ಇಲಾಖೆಯಲ್ಲಿ ಟೆಕ್ನಿಕಲ್ ಟರ್ಮ್ಸ್ ಗೊತ್ತಾಗುವುದಿಲ್ಲ. ಈ ರೀತಿ ಅವರು ಸರ್ಕಾರದ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇದಕ್ಕಿಂಥ ದೇಶ ದ್ರೋಹ ಮಾಡತಕ್ಕಂಥ ಜನರು ಇದ್ದಾರೆ. ಇವರ ಬಗ್ಗೆ ಸರ್ಕಾರ ತೀವ್ರವಾಗಿ ಗಮನವನ್ನು ಕೊಡದೇ ಹೋದರೆ ದೇಶ ಉಳಿಯುತ್ತದೆಯೋ ಎಂದು ನಾನು ಈ ಸಂದರ್ಭದಲ್ಲಿ ಕೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಒಂದೆರಡು ಮಾತು ಹೇಳಬೇಕಾಗಿದೆ. ಮಾನ್ಯ ಎಂ. ಸಿ. ಬಸಪ್ಪನವರು ಒಂದು ಮಾತನ್ನು ಕಬಿನಿ ಪ್ರಾಜೆಕ್ಟ್ ಬಗ್ಗೆ ಹೇಳಿದರು, ಈ ಪ್ರಾಜೆಕ್ಟ್ ತೆಗೆದುಕೊಂಡಿರುವುದು ಸರಿಯಷ್ಟೆ. ಈಗಾಗಲೇ ೫೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ, ೭೯ ಕೋಟಿ ರೂಪಾಯಿಗಳ ಯೋಜನೆ ಏನು ಇದೆ ಅದರಲ್ಲಿ ೫೦ ಕೋಟಿ ರೂಪಾಯಿಗಳು ಖರ್ಚಾಗಿದೆ, ಇನ್ನು ಕಾಲುವೆ ಸಂಪೂರ್ಣವಾಗಿ ಆಗಬೇಕಾದರೂ ೩೦ ರಿಂದ ೩೫ ಕೋಟಿ ರೂಪಾಯಿ ಬೇಕಾಗುತ್ತದೆಂದು ಅವರು ಹೇಳಿದರು. ಅದಕ್ಕೆ ಈಗ ೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಕಾಲುವೆ ಕೆಲಸ ಮುಕ್ತಾಯವಾಗಿ ರೈತನಿಗೆ ನೀರು ಸಿಗಬೇಕಾದರೆ ಇನ್ನು ೭ ವರ್ಷ ತಮ್ಮ ಅಂದಾಜಿನ ಪ್ರಕಾರ ಬೇಕಾಗುತ್ತದೆ. ಅದರಿಂದ ೪೨,೪೨೦ ಹೆಕ್ಟೇರ್ ಭೂಮಿಗೆ ನೀರು ಲಭ್ಯವಾಗುತ್ತದೆ. ಅದನ್ನು ಬೇಗ ಪೂರ್ಣ ಗೊಳಿಸಿದ್ದರೆ, ೨೫ ಕೋಟಿ ರೂಪಾಯಿಗಳು ತೆರಿಗೆಯಿಂದ ಬರುತ್ತಿತ್ತು. ರೈತ ಬೆಳೆಯನ್ನು ಇಟ್ಟು ಭತ್ತ ಬೆಳೆದರೆ ಸುಮಾರು ೧೦ ಕೋಟಿ ರೂಪಾಯಿಗಳು ಭತ್ತದಿಂದ ಬರುತ್ತಿತ್ತು. ಈಗಲೂ ಸಹ ಇದನ್ನು ಬೇಗ ಮುಗಿಸಿದರೆ ಪ್ರತಿಯೊಂದು ವರ್ಷಕ್ಕೆ ೨ ಕೋಟಿ ರೂಪಾಯಿಗಳ ಟ್ಯಾಕ್ಸ್ ಅಂದರೆ ತೆರಿಗೆ ಮತ್ತು ೫ ಕೋಟಿ ರೂಪಾಯಿಗಳ ಉತ್ಪನ್ನ ಬರುತ್ತದೆ. ಇನ್ನು ಹಾರಂಗಿ ಯೋಜನೆಗೆ ಇಟ್ಟಿರತಕ್ಕಂಥ ೨೧೦ ಕೋಟಿ ರೂಪಾಯಿಗಳಲ್ಲಿ ಅದರಲ್ಲಿ ೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಇನ್ನೂ ೧೬೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ವರ್ಷ ೧೦ ಕೋಟಿ ರೂಪಾಯಿ ಕೊಟ್ಟಿದ್ದೀರಿ. ಈ ರೀತಿ ಹಾರಂಗಿ ಯೋಜನೆಗೆ ಹಣ ಕೊಡುತ್ತಾ ಹೋದರೆ ಅದು ಪೂರ್ತಿಯಾಗಬೇಕಾದರೆ ೨೦ ವರ್ಷಗಳು ಹಿಡಿಯುತ್ತದೆ. ಅದರಿಂದ ಯೋಜನೆ ಸಂಪೂರ್ಣವಾದಾಗ ವರ್ಷಕ್ಕೆ ೭೦ ಕೋಟಿ ರೂಪಾಯಿ ಆದಾಯ ಬರುತ್ತದೆ. ಈ ಅಪ್ಪರ್ ಕೃಷ್ಣಾ

ಯೋಜನೆಯನ್ನು ೧೯೮೪-೮೫ರಲ್ಲಿ ಮುಗಿಸಬೇಕಾಗಿದೆ. ಈಗಾಗಲೇ ೩೭ ಕೋಟಿ, ೪೨ ಕೋಟಿ ಮತ್ತು ೧೩.೬೮ ಕೋಟಿ ರೂಪಾಯಿಗಳನ್ನು ಅದರ ಖರ್ಚಿನ ಬಗ್ಗೆ ಕೊಟ್ಟಿದ್ದೀರಿ ಈ ರೀತಿ ಖರ್ಚು ಮಾಡುತ್ತಾ ಹೋದರೆ ನಾವು ಮುಗಿಸಲಿಕ್ಕೆ ಸಾಧ್ಯವೇ ? ಇದನ್ನೆಲ್ಲಾ ತಾವು ಯೋಚನೆ ಮಾಡಬೇಕು. ಏಕೆಂದರೆ ತಿರುಪತಿಯಲ್ಲಿ ಮಾಡಿದಹಾಗೆ ಎಲ್ಲರನ್ನೂ ಸ್ವಲ್ಪ ಸ್ವಲ್ಪ ತಲೆ ಬೋಳಿಸಿ ನಿಲ್ಲಿಸಿದಹಾಗೆ ಮಾಡಬೇಡಿ. ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಸಂಪೂರ್ಣ ಮಾಡಿ. ಅದರಿಂದ ದೇಶಕ್ಕೆ ವರ್ಷಕ್ಕೆ ೩೫೦ ಕೋಟಿ ರೂಪಾಯಿಗಳಷ್ಟು ಉತ್ಪನ್ನವಾಗುತ್ತದೆ. ಯಾವುದೋ ರಾಜಕೀಯ ಒತ್ತಡಕ್ಕೆ ಮಣಿದು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಓವರ್ ಹೆಡ್ ಚಾರ್ಜಸ್ ತಾವು ಹಣ ಖರ್ಚು ಮಾಡುತ್ತಿದ್ದೀರಿ. ಇದನ್ನು ಈಗಲಾದರೂ ಆಲೋಚನೆಮಾಡಿ ಬದಲಾವಣೆ ಮಾಡಿ. ಒಂದೆರಡು ವರ್ಷಗಳಲ್ಲಿ ಕೆಲವು ಯೋಜನೆಗಳು ಸಂಪೂರ್ಣವಾಗತಕ್ಕಂತಹ ಘಟ್ಟದಲ್ಲಿವೆ. ಅಂತವುಗಳನ್ನು ತೆಗೆದುಕೊಂಡು ದೇಶದ ಆದಾಯ ಹೆಚ್ಚುವ ವ್ಯವಸ್ಥೆಯಾಗಬೇಕು.

ಇನ್ನು ಕೊನೆಯದಾಗಿ ಅಧಿಕಾರಿಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಅದರಲ್ಲೂ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುತ್ತಿದ್ದೇನೆ. ಮೊನ್ನೆ ಹೇಳಿದರು ೩ ಲಕ್ಷ ೬೩ ಸಾವಿರ ಜನ ನೌಕರರಿಗೆ ೨೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು. ಆದರೆ, ಕೆಲಸ ಯಾವರೀತಿಯಲ್ಲಿ ಆಗಿದೆಯೆಂಬುದನ್ನು ಯೋಚನೆ ಮಾಡಬೇಕಾಗಿದೆ. ಅಧಿಕಾರಿಗಳು ಜನಗಳೊಡನೆ ಮಿಳಿತವಾಗಿ ದುಡಿಯುವ ವ್ಯವಸ್ಥೆಯಾಗಬೇಕು. ನಾನೊಂದು ಪ್ರವೇಟ್ ಬಿಲ್ ತರಬೇಕೆಂದಿದ್ದೇನೆ, ಅದರಲ್ಲಿ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೆಲವು ಸುಧಾರಣೆಗಳನ್ನು ಮಾಡಿದ್ದೇನೆ. Everybody must work either in Industry or in Public Works Department. ಒಂದು ರಿಕಾರ್ಡ್‌ಗೆ ನೋಟ್ ಹಾಕಬೇಕಾದರೆ ೩-೪ ದಿವಸ ಸಾಕು. ಪ್ರತಿಯೊಬ್ಬರು ಮ್ಯಾನ್‌ಪವರ್ ಉಪಯೋಗ ಮಾಡಬೇಕು. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನ ಮ್ಯಾನುಯಲ್ ಲೇಬರರ್ ವ್ಯಕ್ತಿ ಜೊತೆ ಹೊಂದಿಕೊಂಡು ಹೋಗತಕ್ಕಂತಹ ವ್ಯವಸ್ಥೆಯಾಗಬೇಕು. ಪ್ರಮೋಷನ್ ಬಗ್ಗೆ ರಿಟ್‌ಗಳು ಕೋರ್ಟ್‌ನಲ್ಲಿ ಬೇಕಾದಷ್ಟು ಇವೆ. ಅವರಿಗೆ ಪ್ರಮೋಷನ್ ಕೊಡಬೇಕು ಆದರೆ ಪ್ರಮೋಷನ್ ಕೊಡುವಾಗ ರಷ್ಯಾ ದೇಶದಲ್ಲಿರುವ ಹಾಗೆ ವ್ಯವಸ್ಥೆಯಾಗಬೇಕು. ಅಲ್ಲಿ ಸಾಮಾನ್ಯ ಇಂಜಿನಿಯರ್‌ಗೆ ಮ್ಯಾಕ್ಸಿಮಮ್ ಸಂಬಳ ಕೊಟ್ಟು, ಹತ್ತು, ಇಪ್ಪತ್ತು ವರ್ಷಗಳು ಕಳೆದ ಮೇಲೆ ಪ್ರಮೋಷನ್ ಕೊಡುತ್ತಾರೆ. ಆಗ ಅವರ ಸಂಬಳದಲ್ಲಿ ೫೦ ರೂ. ರೂಬೆಲ್ ಕಡಿಮೆಯಾಗುತ್ತದೆ. ಅದೇ ರೀತಿ ಇನ್ನೂ ಹೆಚ್ಚಿನ ಪ್ರಮೋಷನ್ ಕೊಟ್ಟರೆ ೭೫ ರೂಬೆಲ್ ಕಡಿಮೆಯಾಗುತ್ತದೆ. ಪ್ರಮೋಷನ್ ಕೊಟ್ಟಹಾಗೆ ಸಂಬಳ ಕಡಿಮೆಯಾಗುತ್ತಾ ಹೋಗುತ್ತದೆ. ಎಂ.ಬಿ.ಬಿ.ಎಸ್. ಓದಿ ಬಂದವರು ಮೊದಲು ಅಲ್ಲಿ ನರ್ಸ್ ಕೆಲಸಕ್ಕೆ ಸೇರಬೇಕು. ನಂತರ ೨೦ ವರ್ಷಗಳು ಕಳೆದ ಮೇಲೆ ಸರ್ಜನ್ ಆಗಿ ನೇಮಿಸುತ್ತಾರೆ. ಕೆಲಸವನ್ನು ಹೆಚ್ಚಾಗಿ ಯಾರು ಮಾಡುತ್ತಾರೆ ಅಂತಹವರಿಗೆ ಹೆಚ್ಚು ಸಂಬಳ ಕೊಡುತ್ತಾರೆ. ರಷ್ಯಾ ದೇಶದಲ್ಲಿರುವ ಪದ್ಧತಿಯನ್ನು ನಮ್ಮ ದೇಶದಲ್ಲಿಯೂ ಅಳವಡಿಸಿ ಕೊಂಡರೆ ಯಾರೂ ಪ್ರಮೋಷನ್ ಕೇಳುವುದಕ್ಕೆ ಬರುವುದಿಲ್ಲ. When he will be Doctor his salary will be reduced because as a Nurse he was working more.

ಮಾನ್ಯ ಸದಸ್ಯರೊಬ್ಬರು.—ಮಂತ್ರಿಗಳಿಗೆ ಸಂಬಳ ಕಡಿಮೆಮಾಡಿ, ಎಂ.ಎಲ್.ಎ. ಗಳಿಗೆ ಜಾಸ್ತಿ ಮಾಡಿ.

ಶ್ರೀ ಎಚ್. ಗಂಗಾಧರನ್.—ಒಂದಲ್ಲಾ ಒಂದು ದಿವಸ ಬಿಸಿಲಿನಲ್ಲಿ ಒಣಗಿ, ಜಾತ್ರೆಯಲ್ಲಿ ನೆಂದು ನೋಯುತ್ತಿರುವ ವ್ಯಕ್ತಿ ತಾನೇ ದಂಗೆ ಏಳಬಹುದು. ಅಧಿಕಾರಿಗಳು ಬೀದಿಯಲ್ಲಿ ತಿರುಗಾಡುವುದಕ್ಕೆ ಅವಕಾಶವಾಗದ ಒಂದು ಕಲ್ಪನೆಯಾದೀತು. ಅಧಿಕಾರಿಗಳು ನಂಚಕ್ಕು ನೂರು ಆಗುವ ಪರಿಸ್ಥಿತಿ ಒದಗೀತು. ನಮ್ಮಲ್ಲಿರುವ ಸಂಪತ್ತನ್ನು ಹೆಚ್ಚಿಸುವ ಬದಲಾಗಿ ಬೀಡಿ ಬೆಂಕಿಪೊಟ್ಟಣ ಇಂತಹ ಮರಗಳಿಗೆ ತೆರಿಗೆಯನ್ನು ಹಾಕುವ ಪ್ರವೃತ್ತಿಯನ್ನು ನಿಲ್ಲಿಸಬೇಕು ಕೈಗಾರಿಕೆ ಇರಿಗೇಷನ್ ಇಂತಹ ಯೋಜನೆಗಳನ್ನು ರೂಡಿಸಿಕೊಂಡು ಬರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI QAMARUL ISLAM.--Mr. Speaker Sir, the time is very short and there are about 3 Demands. Therefore, I have selected one Demand "Literary and Cultural Affairs and Development of Kannada". I have chosen this demand because I have to tell something about Urdu. Sir, there are Five Academies in Karnataka. They are, (1) Kannada Academy, (2) Karnataka Sahitya Academy, (3) Art Academy, (4) Urdu Academy and (5) Jayaprada Academy. The objects of the Government to have such Academies are to develop relationship between Kannada and Urdu to conduct Urdu classes for Kannada knowing people and vice versa; to establish a Urdu Library and to have a Kannada-Urdu Dictionary and also to establish telegraphy centres. Last year, Rs. 90,000/- were given to this Academy, but the Academy did not function in accordance with the objects of the Government. Out of this sum of Rs. 90,000/-, they have utilised Rs 25 000/- for a Mushavara and they have given help to the publications which are from other States. I have raised this issue many times during question hours and through Notices of Call Attention. I request the Hon. Chief Minister to extend more help for the development of Urdu. Here, I would like to mention that Urdu Academies in Maharashtra, Uttar Pradesh, Kashmir etc. are releasing monthly publication in Urdu. The Maharashtra Urdu Academy releases "Quamy Raj" and "Navras" likewise—Hariyana Government—"Tameer", Punjab—"Pasban", Andhra Pradesh—"Andra Pradesh", Uttar Pradesh Government—"Naya Daur" and Kashmir Urdu Academy—"Sherza". Similarly, when the Government is giving sufficient funds to this Urdu Academy, why not they also release monthly Urdu Magazine mentioning all the programmes of the Government so that the people living in Hyderabad-Karnataka, who are not able to read Kannada will be able to follow what are the policies of the Government, what are the functions of the Government I would request the Hon. Chief Minister to take personal interest and see that monthly Urdu Magazine is released by the Urdu Academy.

Then Sir, persons without calibre are appointed as members on the Text-book Committees. They commit a number of mistakes while translating from Kannada to Urdu. For example, for the words "Welfare Government" the translation given is "Khairathi Hukumath", whereas the proper translation must be "KHAIR KHAHI HUKUMATH". So, I request the Government to nominate such persons who are recommended by the Urdu Academy.

Another point that I wish to state is that there has been discrimination while allotting funds to Urdu Academy. This year Rs. 1,60,000/- have been allotted to the Urdu Academy, whereas other

academies have been given more than Rs. four to five lakhs. It was assured on the floor of the House by the previous Government that equal allotment of funds would be made to this Urdu Academy.

Therefore, I request that equal allotment should be made to this academy also. Now I want to make two or three important points for the consideration of the Government, In the election manifesto the Congress (I) party has assured the people that after coming to power they will form a 'task-force' to protect the interest of the minorities and Scheduled Caste/Scheduled Tribes. Therefore, I would like to know from the Chief Minister whether such a 'task force' has already been established, and if not, whether to they are going to have the same to fight against these atrocities committed against minority people and SC/ST people. The second assurance they have given during election time is that equal representation to these minorities would be given in the police department. It is the feeling of some people that because there is no representation from these minority people, in the Home department all these atrocities are being committed against them. Therefore I plead that there must be a reservation for these minorities and SC/ST people in the Police department. Even in the Secretariat, right from the Peon to the Commissioner particularly in the Home Secretariat, there is not even a single Muslim member. I want to know whether they are going to implement the premises made during election campaign, regarding reservations. I have pleaded this case during my speech last year also. I said that 12% reservation should be given to Muslims on the pattern of Kerala State, where they have made such a provision, even in the educational institutions. There are reservations, for backward caste and backward communities and Muslims. But, in that backward list there are nine communities which come in the Roster while giving reservations Because of this equal justice cannot be given to each and every community. But if you adopt the Kerala type reservation it would be more advantageous to these people. Now, what is happening is our boys have to compete with other community people for engineering and medical seats through getting higher percentage of marks. Muslim community boys being a most backward community cannot compete with the boys of other communities, so far as percentage of marks are concerned. Therefore the Roster should be arranged in such a manner that there should be 12% reservation for minority community people. Therefore I plead that such a provision should be made here also I may mention here that 3-4 days back our Hon. Chief Minister has announced that a Committee to look after the affairs of the SC/ST and the backward Classes would be formed. Therefore I appeal to the Hon. Chief Minister to announce

a similiar Committee to took after the affairs of the minor ties in this State. With this appeal I thank the Chair and conclude my speech.

† ಶ್ರೀಮತಿ ಅನುಸೂಯ ಗಜಾನನ ಶರ್ಮ.—(ಅಂಕೋಲ) ಮಾನ್ಯ ಅಧ್ಯಕ್ಷರೇ ಈವೊತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿರತಕ್ಕ ಅರಣ್ಯದ ಒಂದು ನೀತಿ ಬಗ್ಗೆ ಮತ್ತು ಈ ಬಗ್ಗೆ ಸರ್ಕಾರ ತಾಳಿರುವ ಒಂದು ನೀತಿಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. ಮೊದಲನೆಯದಾಗಿ ನಮ್ಮ ಜಿಲ್ಲೆಯಲ್ಲಿರುವ ರೈತರಿಗೆ ಈ ಒಂದು ಅಡವಿ ರಕ್ಷಣೆ ಬಗ್ಗೆ ಅರಣ್ಯ ಇಲಾಖೆಯವರು ಬಹಳ ಕಾಟ ಕೊಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತಿನ ದಿವಸ ರೈತರಿಗೆ ತಮ್ಮ ಕೃಷಿ ಕೆಲಸಕ್ಕೆ ಮುಖ್ಯವಾಗಿ ಬೇಕಾಗಿರತಕ್ಕಂಥ ನೇಗಿಲು, ಗುಂಟೆ, ಪಿಕಾಸಿ ವಗೈರೆಗೆ ಮರಗಳು ಏನು ಬೇಕೋ ಅದು ಸಿಕ್ಕುತ್ತಾ ಇಲ್ಲಾ. ಆ ಸವಲತ್ತುಗಳನ್ನು ಈವೊತ್ತು ಈ ಅರಣ್ಯ ಇಲಾಖೆಯವರು ಕೊಡುತ್ತಾ ಇಲ್ಲ. ಇದರಿಂದ ರೈತರಿಗೆ ತಮ್ಮ ಕೃಷಿ ಕೆಲಸಕ್ಕೆ ಬಹಳ ತೊಂದರೆಯಾಗಿದೆ. ರೈತರ ಜಮೀನಿನಲ್ಲಿ ಮರ ಇದ್ದರೂ ಕೂಡ ಅದನ್ನು ಕಡಿಯಬೇಕಾದರೂ ಸಹ ಇಲಾಖೆಯಿಂದ ಪರ್ಮಿಷನ್ ತೆಗೆದುಕೊಳ್ಳಬೇಕಾಗಿದೆ ಅರಣ್ಯ ಅಧಿಕವಾಗಿರುವ ನಮ್ಮ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರ ತೊಂದರೆಗಳಿಂದ ನಮ್ಮ ಜಿಲ್ಲೆಯ ರೈತರಿಗೆ ಈ ಅರಣ್ಯದಲ್ಲಿ ಏನು ಒಂದು ಸವಲತ್ತುಗಳು ಸಿಗಬೇಕೋ ಅದು ಸಾಕಷ್ಟು ಸಿಕ್ಕುತ್ತಾ ಇರಲಿಲ್ಲ. ಬಹಳ ದಿವಸದಿಂದಲೂ ಹೀಗೆಯೇ ಇತ್ತು. ಆದುದರಿಂದ ಇದನ್ನು ತಿಳಿದು ನಮ್ಮ ಜಿಲ್ಲೆಯ ರೈತರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹಿಂದೆ ಕೆನರಾ ಫಾರೆಸ್ಟ್ ಪ್ರಿವಿಲೆಜ್ ಅನ್ನು ಜಾರಿಗೆ ತಂದರು. ಈ ಅರಣ್ಯದಲ್ಲಿರುವ ಸವಲತ್ತುಗಳನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ಅದು ನಮಗೆ ಒಂದು ಹಕ್ಕಾಗಿತ್ತು. ಈ ಒಂದು ಪ್ರಿವಿಲೇಜ್ ನಮಗೆ ಬ್ರಿಟಿಷರ ಕಾಲದಿಂದಲೂ ಇತ್ತು. ಕೆನರಾ ಫಾರೆಸ್ಟ್ ಪ್ರಿವಿಲೇಜ್‌ನ ಒಂದು ಪರ್ಮಿಟ್ ಮೇಲೆ ಒಂದು ರೂಪಾಯಿಯಷ್ಟು ಬೆಟ್ಟದ ಮೇಲೆ ಮರ ಕಡಿಯುವುದಕ್ಕೆ ರೈತರಿಗೆ ಅವಕಾಶ ಇತ್ತು. ಅದನ್ನು ರದ್ದು ಮಾಡಿದ್ದರು. ಈ ಬಗ್ಗೆ ಕೆಲವು ರೈತರುಗಳು ಸೇರಿ ಹೈಕೋರ್ಟಿಗೆ ಹೋಗಿ ರಿಟ್ ಹಾಕಿ ಸವಲತ್ತುಗಳನ್ನು ಮತ್ತೆ ಪಡೆದುಕೊಂಡರು. ಆದರೆ ಈ ಬಗ್ಗೆ ಯಾರು ರಿಟ್ ಹಾಕಿದ್ದರು ಅವರಿಗೆ ಮಾತ್ರ ಈ ಸವಲತ್ತು ಸಿಕ್ಕಿದೆ, ಬೇರೆಯವರಿಗೆ ಸಿಕ್ಕಿಲ್ಲ. ಅವರು ಹಾಸನದ ಒಂದು ಪರ್ಮಿಟ್ ಮೇಲೆ ಮಾತ್ರ ಮರ ಕಡಿಯುವುದಕ್ಕೆ ಅವಕಾಶ ಇದೆ. ಆದುದರಿಂದ ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಹಿಂದೆ ಕೆನರಾ ಫಾರೆಸ್ಟ್ ಪ್ರಿವಿಲೇಜ್ ಅಂತ ತಂದು, ಆ ಮೂಲಕ ನಮ್ಮ ಭಾಗದ ರೈತರಿಗೆ ಈ ಅರಣ್ಯದಲ್ಲಿ ಏನೇನು ಸವಲತ್ತುಗಳನ್ನು ಕೊಡುತ್ತಿದ್ದರೋ ಆ ಸವಲತ್ತುಗಳನ್ನು ಮತ್ತೆ ಜಾರಿಗೆ ತಂದು ಕೊಡಬೇಕು, ಆ ರೈತರಿಗೆ ತೊಂದರೆ ಕೊಡಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಂದು ಕಾಲದಲ್ಲಿ ನಮ್ಮ ಭಾಗದಲ್ಲಿ ೮೦ ಪರ್ಸೆಂಟ್ ಅರಣ್ಯ ಇತ್ತು. ಆ ಕಾಲದಲ್ಲಿ ಕೆನರಾ ಫಾರೆಸ್ಟ್ ಪ್ರಿವಿಲೇಜ್ ಅಂತ ಒಂದು ಸ್ಪೆಷಲ್ ಪ್ರಿವಿಲೇಜ್ ತಂದು ಆ ಮೂಲಕ ನಮ್ಮ ಭಾಗದ ರೈತರು ಉಪಯೋಗ ಪಡೆಯುತ್ತಾ ಇದ್ದರು. ಈವೊತ್ತು ನೋಡಿದರೆ ಹಿಂದೆ ಈ ಬಗ್ಗೆ ಏನೇನು ಸವಲತ್ತುಗಳು ಇತ್ತೋ ಅವ್ಯಾವುದೂ ಇಲ್ಲ. ಅವರಿಗೆ ಸಿಕ್ಕತಕ್ಕಂಥ ಸವಲತ್ತುಗಳೆಲ್ಲಾ ಈವೊತ್ತು ಹೊರಟು ಹೋಗಿದೆ, ಮೇಲಾಗಿ ಈವೊತ್ತಿನ ದಿವಸ ನಮ್ಮ ಕಡೆಯಲ್ಲಿ ಸರಿಯಾದಂಥ ರಸ್ತೆ ಸಾರಿಗೆ ಸಂಪರ್ಕ ಕೂಡ ಇಲ್ಲ, ಬಹಳ ತೊಂದರೆ ಇದೆ. ಇದನ್ನೆಲ್ಲಾ ನೋಡಿ ನಾವು ಸಾಕಷ್ಟು ಅನುಭವಿಸಿದ್ದೇವೆ ಆದುದರಿಂದ ಮತ್ತೊಮ್ಮೆ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಹಿಂದೆ ಕೆನರಾ ಫಾರೆಸ್ಟ್ ಪ್ರಿವಿಲೇಜ ಅಂತ ಜಾರಿಗೆ ತಂದು ರೈತರಿಗೆ ಏನೇನು ಸವಲತ್ತುಗಳನ್ನು ಕೊಟ್ಟಿದ್ದರೋ ಅದನ್ನು ಮತ್ತೆ ಆದಷ್ಟು ಬೇಗ ಜಾರಿಗೆ ತರಬೇಕು ಎಂದು ಹೇಳುತ್ತೇನೆ ಜೊತೆಗೆ ನಾನು ಮೊದಲೇ ಹೇಳಿದ ಹಾಗೆ ಯಾರು ಈ ಅರಣ್ಯದ ಒಂದು ಸವಲತ್ತು ಬಗ್ಗೆ ಹೈಕೋರ್ಟಿಗೆ ರಿಟ್ ಹಾಕಿದ್ದರೋ ಅವರಿಗೆ ಮಾತ್ರ ಈ ಒಂದು ಸವಲತ್ತು ಮತ್ತೆ ದೊರಕಿದೆ ಬೇರೆಯವರಿಗೆ ದೊರೆತಿಲ್ಲ. ಈ ಅರಣ್ಯದ ಒಂದು ಸವಲತ್ತು ಇತರರಿಗೂ ಅಂದರೆ ರಿಟ್ ಹಾಕದೇ ಇದ್ದವರಿಗೂ ಕೂಡ ಈ ಒಂದು ಸವಲತ್ತುಗಳನ್ನು ಸಿಗುವ ಹಾಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಒಂದು ಕಡೆ ಅರಣ್ಯವನ್ನು ಕಾಪಾಡಬೇಕು ಎಂದು ಹೇಳುತ್ತೀರಿ, ಇನ್ನೊಂದು ಕಡೆ ಈ ಅರಣ್ಯದಲ್ಲಿರುವ ಗಂಧದ ಮರಗಳನ್ನು ಕಡಿದು ಕಳ್ಳಸಾಗಾಣಿಕೆ ಮಾಡಿ ಅರಣ್ಯ ಸಂಪತ್ತನ್ನೆಲ್ಲಾ ಹಾಳು ಮಾಡುತ್ತಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ ಇಂಥವರ ಮೇಲೆ ಇನ್ನೂ ಬಿಗಿಯಾದ ಉಗ್ರ ಕ್ರಮ ತೆಗೆದುಕೊಂಡು ನಮ್ಮ ಅರಣ್ಯವನ್ನು ಸಾಕಷ್ಟು ರಕ್ಷಿಸಬೇಕು ಎಂದು ಹೇಳಬಯಸುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ ನಮ್ಮ ಕಡೆ ಒಂದು ದೊಡ್ಡ ಪ್ರಾಜೆಕ್ಟ್ ಅನ್ನು ಅಂದರೆ ಬೇಡ್ತಿ ಪ್ರಾಜೆಕ್ಟನ್ನು ಮಾಡಬೇಕೆಂದಿದ್ದೀರಿ. ಸದ್ಯಕ್ಕೇನೋ ಅದನ್ನು ತಡೆ ಹಿಡಿದಿದ್ದೀರಿ. ಈ ಯೋಜನೆಯಿಂದ ಲಕ್ಷಗಟ್ಟಲೆ ಅರಣ್ಯ ಮುಳುಗಿ ಹೋಗುವ ಸಂದರ್ಭ ಉಂಟು. ಆದರೆ ಮಾನ್ಯ ಮುಖ್ಯ ಮಂತ್ರಿಯವರು ಸದ್ಯದಲ್ಲಿ ಇದರ ಕಾಮಗಾರಿಯನ್ನು ಬಂದ್ ಮಾಡಿದ್ದಾರೆ. ಮಳೆ ಬೆಳೆ ಮತ್ತು ಹವೆಯ ಒಂದು ರಕ್ಷಣೆಯ ದೃಷ್ಟಿಯಿಂದ ಈ ಕಾಮಗಾರಿಯನ್ನು ನಿಲ್ಲಿಸುವುದು ಅಗತ್ಯ ಇದೆ ಎಂದು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯ ಎಷ್ಟೋ ಜನರು ಅಡವಿ ಹೇಗೆ ಇತ್ತು ಅನ್ನುವುದನ್ನು ಹೇಳುತ್ತಾರೆ. ಯಾರಾದರೂ ಕೂಡ ಆ ಅಡವಿಗೆ ಹೋದರೆ ಆ ಅಡವಿಯಲ್ಲೇ ಮುಳುಗಿ ಹೋಗುತ್ತಿದ್ದರಂತೆ. ಅವರಿಗೆ ಆ ಅಡವಿಯಿಂದ ನಾವು ವಾಪಸ್ಸು ಬರುತ್ತೇವೆ ಅನ್ನುವ ಒಂದು ನಂಬಿಕೆಯೇ ಇರಲಿಲ್ಲವಂತೆ. ಆ ಅಡವಿಗೆ ಹೋದರೆ ನಾವು ಅಲ್ಲಿ ಏನು ಮಾಡುತ್ತೇವೆ ಅನ್ನುವುದು ಗೊತ್ತಾಗುತ್ತಾ ಇರಲಿಲ್ಲವಂತೆ. ಮೇಲಾಗಿ ಆ ಅಡವಿಯಲ್ಲಿ ಹೋದರೆ ಅವರಿಗೆ ಒಂದು ತರಹ ಶಬ್ದ ಮಾತ್ರ ಆ ಮರಗಳ ಒಂದು ಅಲೆದಾಟದಿಂದ ಸುಯ್ಯಿ ಸುಯ್ಯಿ ಅನ್ನುವ ಒಂದು ತರಹ ಶಬ್ದ ಮಾತ್ರ ಕೇಳಿಸುತ್ತಿತಂತೆ. ಹೀಗೆ ಏನೇನೋ ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿ ಇಂಥಾ ದಟ್ಟವಾದ ಅಂದರೆ ಸುಮಾರು ೯೦ ಪರ್ಸೆಂಟ್ ಅಷ್ಟು ಹಿಂದೆ ಅರಣ್ಯ ಇತ್ತು ಎಂದು ಹಿಂದಿನ ಒಂದು ದಾಖಲೆಯಲ್ಲಿ, ಒಂದು ಲೆಕ್ಕ ಪತ್ರದಲ್ಲಿ, ಇದೆ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

೪-೦೦ ಪಿ.ಎಂ.

ಆದರೆ ಸತ್ಯವಾಗಿ ಹೇಳಬೇಕೆಂದರೆ, ವಿದ್ಯುಚ್ಛಕ್ತಿಗಾಗಿ, ರಸ್ತೆಗಳ ಕೆಲಸಕ್ಕೆ, ನಾಗರೀಕರಣಕ್ಕಾಗಿ ಅರಣ್ಯ ಜಮೀನನ್ನು ಬಳಸಿಕೊಂಡ ಕಾರಣದಿಂದ ಹಾಗೂ ಕೆಲವು ಯೋಜನೆಗಳ ಕಾರಣದಿಂದ ಅರಣ್ಯ ಪ್ರದೇಶಗಳು ಮುಳುಗಡೆಯಾದ ಕಾರಣದಿಂದ ಈಗ ನಮ್ಮಲ್ಲಿ ೪೦ ಪರ್ಸೆಂಟಿನಷ್ಟು ಮಾತ್ರ ಅರಣ್ಯ ಉಳಿದಿದೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಈ ಬಗ್ಗೆ ಸರ್ಕಾರದವರು ಬೇಕಾದರೆ ಸರ್ವೆ ಮಾಡಿಸಿ ನೋಡಬಹುದು. ಆಗ ಸತ್ಯ ಸಂಗತಿ ತಿಳಿದು ಬರುತ್ತದೆ. ಪಶ್ಚಿಮಘಟ್ಟದಲ್ಲಿ ನಮ್ಮ ಜಿಲ್ಲೆಯು ಅತಿ ಪ್ರಾಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈಗ ಸರ್ಕಾರಕ್ಕೆ ಫಾರೆಸ್ಟ್ ರೆವಿನ್ಯೂ ಏನು ಬರುತ್ತಿದೆ, ಅದರಲ್ಲಿ ಅರ್ಧ ಭಾಗ ನಮ್ಮ ಭಾಗದ ಅರಣ್ಯದಿಂದಲೇ ಸರ್ಕಾರಕ್ಕೆ ಬರುತ್ತಿದೆ. ಆದಕಾರಣ ಇದರ ರಕ್ಷಣೆಗಾಗಿ ಸರ್ಕಾರ ಹೆಚ್ಚಿನ ಲಕ್ಷ ವಹಿಸಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಅಡವಿ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವವರಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ನಮ್ಮ ಜಿಲ್ಲೆಯ ಮಟ್ಟಿಗೆ ರಸ್ತೆ ಸೌಲಭ್ಯಗಳನ್ನು ಮತ್ತು ನೀರಾವರಿ ಸೌಲಭ್ಯ ಒದಗಿಸಲು ವಿಶೇಷವಾದಂಥ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ದೇಶದ ಅಭಿವೃದ್ಧಿಗೆ ಹಾಗೂ ಕೈಗಾರಿಕೆಗಳ ಬೆಳವಣಿಗೆಗೆ ವಿದ್ಯುಚ್ಛಕ್ತಿಯ ಉತ್ಪಾದನೆ ಅತ್ಯಾವಶ್ಯಕ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ನೈಸರ್ಗಿಕವಾದಂಥ ನಿಸರ್ಗ ಸಂಪತ್ತು ಏನಿದೆ, ಅದನ್ನು ಹಾಳು ಮಾಡಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದು ಸರಿಯಲ್ಲ. ವಿದ್ಯುಚ್ಛಕ್ತಿಯನ್ನು ನಿಸರ್ಗಕ್ಕೆ ತುಲನೆ ಮಾಡುವುದಕ್ಕೆ ಬರುವುದಿಲ್ಲ. ಆದಕಾರಣ ನಮ್ಮ ನಿಸರ್ಗವನ್ನು ಹಾಳು ಮಾಡುವುದಕ್ಕೆ ಮೊದಲು ಸರ್ಕಾರದವರು ಗಂಭೀರವಾಗಿ ಹಾಗೂ ಆಳವಾಗಿ ವಿಚಾರ ಮಾಡಿ ನಂತರ ಮುಂದಿನ ಕೆಲಸ ಕೈಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ನಮ್ಮ ಮುಂದಿನ ಜನಾಂಗ ನಮ್ಮ ಒಂದು ಅವಿವೇಕದ ಫಲವನ್ನು ಅನುಭವಿಸಬೇಕಾಗಿ ಬರಬಹುದು. ಆದಕಾರಣ ವಿದ್ಯುಚ್ಛಕ್ತಿ ಮತ್ತು ನಿಸರ್ಗವನ್ನು ತುಲನೆ ಮಾಡಿ ನೋಡುವುದು ಸರಿಯಲ್ಲವೆಂದು ಹೇಳುತ್ತೇನೆ. ಈಗ ಶರಾವತಿ ಕೊಳ್ಳದಲ್ಲಿ ಸಾಕಷ್ಟು ನೀರು ಇಲ್ಲದ ಕಾರಣ ಚಕ್ರ ಮತ್ತು ವರಾಹಿ ನದಿಗಳ ನೀರನ್ನು ಆ ಕೊಳ್ಳಕ್ಕೆ ತಿರುಗಿಸಲು ಸರ್ಕಾರದವರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರ ಮೂಲಕ ನಮ್ಮ ಅಡವಿಯನ್ನು ಹಾಳು ಮಾಡುವುದಕ್ಕೆ ಬದಲು, ಅದೇ ದುಡ್ಡನ್ನು ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್ ಇಟ್ಟು, ಅದರಿಂದ ಬರುವ ಬಡ್ಡಿ ಹಣದಿಂದ ಆ ಭಾಗದಲ್ಲಿ ಕೃತಕವಾಗಿ ಮಳೆ ಸುರಿಸಲು ಪ್ರಯತ್ನ ಮಾಡಬಹುದು. ಈಗ ನಮ್ಮ ಪಶ್ಚಿಮಘಟ್ಟದ ಅಡವಿಯು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತಿದೆ ಎಂದು ನಾನು ತಿಳಿದು

ಕೊಂಡಿದ್ದೇನೆ. ಆದಕಾರಣ ಈ ಅಡವಿಯು ರಕ್ಷಣೆ ಕೆಲಸವನ್ನು ಹಾಗೂ ನಿಸರ್ಗದ ಸಂಪತ್ತನ್ನು ಉಳಿಸುವ ದಿಸೆಯಲ್ಲಿ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ೧೬ ಜನ ಫಾರೆಸ್ಟರ್‌ಗಳು ಮತ್ತು ೨೧ ಜನ ಗಾರ್ಡ್‌ಗಳು ಕಳೆದ ೩ ವರ್ಷಗಳಿಂದ ಕೆಲಸವಿಲ್ಲದೆ ಕುಳಿತಿದ್ದಾರೆ. ಇವರನ್ನೆಲ್ಲಾ ಅಲ್ಲಿ ಏತಕ್ಕೆ ಇಟ್ಟಿದ್ದೀರಿ ಎಂದು ನಾನು ಕೇಳ ಬಯಸುತ್ತೇನೆ.

ಇನ್ನು ಸೂಪಾ ಯೋಜನೆಯ ಮುಳುಗಡೆಯ ಪ್ರದೇಶದಲ್ಲಿ ಗಣಿ ಕೆಲಸವನ್ನು ಮೊದಲು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಈಗ ನಮ್ಮ ಜಿಲ್ಲೆಯಲ್ಲಿ ಕಟ್ಟಿಗೆ ಬೆಲೆ ಟನ್ ಒಂದಕ್ಕೆ ಐದೂವರೆಯಿಂದ ಎಂಟೂವರೆಗೆ ಹೋಗಿದೆ. ಬಡ ಹೆಣ್ಣು ಮಕ್ಕಳು ಕಟ್ಟಿಗೆಯನ್ನು ೪–೫ ಮೈಲಿಗಳ ದೂರದಿಂದ ತರಬೇಕಾಗಿದೆ. ಹಿಮಾಲಯ ಪರ್ವತದ ಕಡೆಗಳಲ್ಲಿ ಹೆಣ್ಣುಮಕ್ಕಳು ಕಟ್ಟಿಗೆ ತೊಂದರೆಯಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದು ನಾನು ಕೇಳಿದ್ದೇನೆ. ಆ ತರಹದ ಸ್ಥಿತಿ ನಮ್ಮ ಭಾಗದ ಹೆಣ್ಣುಮಕ್ಕಳಿಗೆ ಬರದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಮುಖ್ಯವಾಗಿ ಲಕ್ಷಗಟ್ಟಲೆ ಎಕರೆಗಳಷ್ಟು ಅರಣ್ಯ ಪ್ರದೇಶ ಮುಳುಗಡೆಯಾಗುವಂತಹ ಯೋಜನೆಗಳನ್ನು ಕೈಗೊಳ್ಳಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಉರುವಲು ಕಟ್ಟಿಗೆಗಾಗಿ ನಮ್ಮ ರಾಜ್ಯದ ಎಲ್ಲ ಭಾಗಗಳೂ ಸಹ ನಮ್ಮ ಮಲೆನಾಡಿನ ಪಶ್ಚಿಮ ಘಟ್ಟವನ್ನೇ ಅವಲಂಬಿಸಬೇಕಾಗಿದೆ. ಇದನ್ನು ತಪ್ಪಿಸಲು ಸರ್ಕಾರದವರು ಬಯಲು ಸೀಮೆಗಳಲ್ಲಿಯೂ ಉರುವಲು ಕಟ್ಟಿಗೆಗಳನ್ನು ಬೆಳೆಸಲು ಯೋಜನೆಗಳನ್ನು ಹಾಕಿಕೊಳ್ಳಬೇಕು. ಆಗ ಇಡೀ ರಾಜ್ಯವೇ ನಮ್ಮ ಮಲೆನಾಡು ಭಾಗವನ್ನು ಅವಲಂಬಿಸುವುದು ತಪ್ಪುತ್ತದೆ. ಜೊತೆಗೆ ನಮಗೂ ಸಹ ಉರುವಲು ಕಟ್ಟಿಗೆ ಸುಲಭವಾಗಿ ಸಿಗುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಕೊನೆಯದಾಗಿ ಬೇಡ್ತಿ, ಅಘನಾಶಿನಿ ಯೋಜನೆಗಳನ್ನು ಸರ್ಕಾರ ಕೈಬಿಟ್ಟು, ನಮ್ಮ ಜಿಲ್ಲೆಯ ೫ ಲಕ್ಷಾಂತರ ಎಕರೆ ಅರಣ್ಯ ಭೂಮಿಯನ್ನು ಈಗ ಇರುವಂತೆಯೇ ಉಳಿಸಿ ನಮ್ಮ ಮುಂದಿನ ಪೀಳಿಗೆ ಹಾಗೂ ನಮ್ಮ ಮುಂದಿನ ಸಮಾಜದ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪರಪ್ಪ ಹಳ್ಳಿಗೌಡ್ರ (ಬಾಗಲಕೋಟೆ) – ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿರುವಂತಹ ಬಾಗಲಕೋಟೆಯ ಪರಿಸ್ಥಿತಿಯೇ ಬೇರೆಯಾಗಿದೆ. ಏಕೆಂದರೆ, ಇದು ಅಪ್ಪರ್ ಕೃಷ್ಣಾ ಯೋಜನೆಯ ಕಾರಣ ಮುಳುಗಡೆಯಾಗುತ್ತದೆಂದು ಈ ಮೊದಲು ಹೇಳಿದ್ದರು. ಅದಕ್ಕಾಗಿ ಈ ಹಿಂದಿನ ಸರ್ಕಾರದವರು ಈ ನಗರವನ್ನು ಉಳಿಸುತ್ತೇವೆಂದು ಹೇಳಿ ಒಂದು ಸಮಿತಿಯನ್ನು ಸಹ ಮಾಡಿದ್ದರು. ಈಗಿನ ಸರ್ಕಾರದವರು ಆ ಸಮಿತಿಯನ್ನು ರದ್ದು ಮಾಡಿದ್ದಾರೆ. ಪುನಃ ಅದನ್ನು ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ೮೦ ಸಾವಿರ ಜನಸಂಖ್ಯೆ ಇರತಕ್ಕಂಥ ಈ ಬಾಗಲಕೋಟೆಯನ್ನು ಉಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಅಲ್ಲಿ ಅನೇಕ ಕೈಗಾರಿಕೆಗಳಿವೆ, ಜೊತೆಗೆ ಅಲ್ಲಿ ದೊಡ್ಡ ಪ್ರಮಾಣದಿಂದ ವ್ಯಾಪಾರ ನಡೆಯುತ್ತಿದೆ; ಆದ ಕಾರಣ ಅದು ಮುಳುಗಡೆಯಾಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಈಗ ನಮ್ಮ ಭಾಗದಲ್ಲಿ ಮಳೆ ಆಗಿಲ್ಲ. ಇದರಿಂದ ನಮ್ಮ ತಾಲ್ಲೂಕಿನ ಜನರಿಗೆ ಆಹಾರ ಧಾನ್ಯದ ತೊಂದರೆ ಬಂದಿದೆ. ಇದೇ ಕಾರಣದಿಂದ ಜನರು ಚಳುವಳಿ ಮಾಡಿ ೨–೩ ಅಂಗಡಿಗಳನ್ನು ಲೂಟಿ ಮಾಡಿದ್ದಾರೆ. ಸರ್ಕಾರದವರು ಗೋಲೀಬಾರ್ ನಡೆದ ಕಡೆ ಯಾವ ರೀತಿ ಪರಿಹಾರ ಕೊಡುತ್ತಾರೋ ಅದೇ ರೀತಿಯಲ್ಲಿ ಲೂಟಿಯಿಂದ ನಷ್ಟವಾದವರಿಗೂ ಸಹ ಪರಿಹಾರ ಕೊಡಬೇಕೆಂದು ಹೇಳುತ್ತೇನೆ. ಒಮ್ಮೆ ಮಾನ್ಯ ಮುಖ್ಯ ಮಂತ್ರಿಯವರು ನಮ್ಮ ಪ್ರದೇಶಕ್ಕೆ ಭೇಟಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ನಮ್ಮ ಅಪ್ಪರ್ ಕೃಷ್ಣಾ ಯೋಜನೆಯ ಪ್ರದೇಶದಲ್ಲಿ ಈಗ ಚೀಫ್ ಇಂಜಿನಿಯರ್ ಇಲ್ಲ. ಯಾರೋ ಒಬ್ಬರು ಇನ್–ಚಾರ್ಜ್‌ನಲ್ಲಿದ್ದರು. ಕೂಡಲೇ ಅಲ್ಲಿಗೆ ಯೋಗ್ಯರಾದಂಥ ಚೀಫ್–ಇಂಜಿನಿಯರ್ ಒಬ್ಬರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಯೋಜನೆಯಲ್ಲಿ ಬಳಸುತ್ತಿರುವ ಸಿಮೆಂಟ್ ಅಪವ್ಯಯವಾಗುತ್ತಿದೆ ಎಂದು ನಾನು ಕಳೆದ ಸಲವೂ ಪ್ರಸ್ತಾಪ ಮಾಡಿದ್ದೆ. ಆದರೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳದ ಕಾರಣ ಈಗಲೂ ಕಳ್ಳಸಾಗಾಣಿಕೆಯಾಗುತ್ತಿದೆ. ಈ ಬಗ್ಗೆ ಸರಿಯಾಗಿ

ತಪಾಸಣೆ ಮಾಡುವವರು ಯಾರೂ ಇಲ್ಲ. ಅಧಿಕಾರಿಗಳನ್ನು ಕೇಳಿದರೆ, ಅದು ನಿಜವಲ್ಲ, ಕೆಲಸ ಸರಿಯಾಗಿ ನಡೆಯುತ್ತಿದೆ ಎಂದು ಹೇಳುತ್ತಾರೆ. ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಈ ಯೋಜನೆಯಿಂದ ಮುಳುಗಡೆಯಾಗುವಂತಹ ೧೪ ಊರುಗಳ ವಿಚಾರದಲ್ಲಿ ಸರ್ಕಾರದವರು ಇಲ್ಲಿಯ ವರೆಗೆ ಬೇರೆ ಯಾವ ವ್ಯವಸ್ಥೆಯನ್ನೂ ಸಹ ಮಾಡಿಲ್ಲ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ, ಆಲಮಟ್ಟಿ ಯೋಜನೆಯಿಂದ ಕೆಲವು ಊರುಗಳಿಗೆ ಈಗ ಏನು ತೊಂದರೆ ಆಗಿದೆ. ಅದೇ ಪರಿಸ್ಥಿತಿ ಇಲ್ಲಿಯೂ ಆಗಬಹುದು. ಆದಕಾರಣ ಸರ್ಕಾರದವರು ಈ ಬಗ್ಗೆ ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇಂತಹ ವಿಚಾರದಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಏನಾದರೂ ನೆವಾ ಹೇಳುತ್ತಾರೆ. ಇದು ಸರಿಯಲ್ಲ. ಸರ್ಕಾರದವರು ಇಂತಹ ವಿಚಾರದಲ್ಲಿ ಯೋಗ್ಯ ರೀತಿಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಬಾಗಲಕೋಟೆಯಲ್ಲಿ ಯಾವ ಕೆಲಸಗಳೂ ಸರಿಯಾಗಿ ಆಗುತ್ತಿಲ್ಲ. ಡ್ರೈನೇಜ್ ಕೆಲಸ ಮಂಜೂರಾಗಿತ್ತು. ಆದರೆ ಕೆಲಸ ಮಾತ್ರ ಪ್ರಾರಂಭವಾಗಲಿಲ್ಲ. ಜನತಾ ಬಜಾರ್ ಇನ್ನೂ ಪ್ರಾರಂಭವಾಗಲಿಲ್ಲ. ಕಾರಣ ಕೇಳಿದರೆ ಊರು ಮುಳುಗಡೆಯಾಗುತ್ತದೆಂದು ಹೇಳುತ್ತಾರೆ. ಈ ವಿಚಾರವಲ್ಲಿ ಸರ್ಕಾರದವರು ಕೂಡಲೇ ಒಂದು ಅಂತಿಮ ತೀರ್ಮಾನ ತೆಗೆದುಕೊಂಡು ಆ ಊರನ್ನು ಉಳಿಸುವುದಾದರೆ ಉಳಿಸಿ, ಇಲ್ಲವೇ ಮುಳುಗಿಸುವುದಾದರೆ ಬೇರೆ ಏನಾದರೂ ಒಂದು ವ್ಯವಸ್ಥೆ ಮಾಡಿ. ಏಕೆಂದರೆ, ಈಗ ಅಲ್ಲಿಯ ಜನರು ಜೀವ ಇದ್ದೂ ಸಹ ಇಲ್ಲದಂತೆ ಇದ್ದಾರೆ. ಇದು ನಮ್ಮ ದುರ್ದೈವ ಎಂದು ಹೇಳಬೇಕಾಗಿದೆ. ಹೇಳುವವರು ಮತ್ತು ಕೇಳುವವರು ಯಾರೂ ಇಲ್ಲದಂತೆ ಆಗಿದೆ. ಒಟ್ಟಿನಲ್ಲಿ ೮೦ ಸಾವಿರ ಜನರು ಇರತಕ್ಕಂಥ ನಮ್ಮ ಬಾಗಲಕೋಟೆ ಮುಳುಗಡೆಯಾಗದಂತೆ ನೋಡಿಕೊಳ್ಳಬೇಕೆಂದು ಮತ್ತೊಮ್ಮೆ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೇಳಿಕೊಂಡು, ನನ್ನ ಹೆಸರು ಪಟ್ಟಿಯಲ್ಲಿ ಇಲ್ಲದಿದ್ದರೂ ಸಹ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Statement of Minister

re : Interim Report with recommendations of the Expert Committee on the grievances of the farmers of the State.

ಅಧ್ಯಕ್ಷರು.—ಈಗ ಮಾನ್ಯ ಕಂದಾಯ ಸಚಿವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಸ್ ಬಂಗಾರಪ್ಪ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಅಗ್ರಿಕಲ್ಚರಿಸ್ಟ್ಸ್ ಗ್ರೀವನ್ಸಸ್ ವಿಷಯದಲ್ಲಿ ಸರ್ಕಾರ ನೇಮಕ ಮಾಡಿದಂಥ ಎಕ್ಸಪರ್ಟ್ ಕಮಿಟಿ ಈಗಾಗಲೇ ಸಾಕಷ್ಟು ಸಭೆಗಳನ್ನು ನಡೆಸಿದೆ. ಕಾಲ ಹೆಚ್ಚಿಗೆ ಇಲ್ಲದಿರುವುದರಿಂದ, ಸದನ ಅನೇಕ ದಿವಸಗಳ ಕಾಲ ನಡೆಯುತ್ತಾ ಇದ್ದುದರಿಂದ ಸರ್ಕಾರಿ ಆಸ್ಥೆ ಅದರಮೇಲೆ ಹೆಚ್ಚು ಸಭೆಗಳನ್ನು ನಡೆಸುವುದಕ್ಕೆ ಕಾಲವಿಲ್ಲದೇ ಇದ್ದರೂ ಕೂಡ, ಸಮಿತಿಯ ಅಧ್ಯಕ್ಷನಾಗಿರಬಹುದು, ಆದರೂ ಕೆಲವು ಸಾರಿ ಸದನ ಬೇಗ್ಗೆ ಪ್ರಾರಂಭವಾಗುವುದಕ್ಕೆ ಮೊದಲೂ ಮತ್ತು ಸದನ ಲೆಟ ಗಿ ಮುಗಿದ ಮೇಲೂ ಕೂಡ ಅನೇಕ ಸಭೆಗಳನ್ನು ನಡೆಸಿ ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ. ಅಂತಿಮ ವರದಿಯನ್ನು ಸುಮಾರು ಅಕ್ಟೋಬರ್ ತಿಂಗಳ ಹೊತ್ತಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ೧೯ ಜಿಲ್ಲೆಗಳಲ್ಲಿ ಈ ಒಂದು ಸಮಿತಿ ಪ್ರವಾಸ ಮಾಡಿ ರೈತರ ವಿಷಯಗಳನ್ನು ಖುದ್ದಾಗಿ ಕೇಳಿಕೊಂಡು ಬರಬೇಕು ಎನ್ನತಕ್ಕ ಅಭಿಪ್ರಾಯವನ್ನು ನಾವು ಇಟ್ಟುಕೊಂಡಿದ್ದೇವೆ.

SRI M. C. BASAPPA.—The committee was constituted by the Government. He h s given the report of the Government. If he wants to appraise this House, b tter supply the copies.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ರೈತರ ಗ್ರೀವನ್ಸಸ್ ಸಲುವಾಗಿ ಮಾನ್ಯ ಸದಸ್ಯರು ಸುಮಾರು ೭ ಡಿಮ್ಯಾಂಡ್‌ಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದರ ಬಗ್ಗೆ ನಾಳೆ ನಮ್ಮ ಅಭಿಪ್ರಾಯ ಪ್ರಕಟ ಮಾಡುತ್ತೇವೆಂದು ನಾವು ತಿಳಿಸಿದೆವು. ಅದನ್ನು ಸರ್ಕಾರದವರು ಪ್ರಕಟ ಮಾಡುತ್ತಾರೆ. ಏತನ್ಮಧ್ಯೆ ಈ ಒಂದು ತಾತ್ಕಾಲಿಕ ವರದಿಯನ್ನು ನಾವು ಕೊಟ್ಟಿದ್ದೇವೆ. ಅದನ್ನು ಆ ಸದನದಲ್ಲಿ ನಾವು